ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2011
ಬೆಲೆ ರೂ. 1.





## ಕುಂಚದಲ್ಲಿ ಶೃತಿ ಕಾಮತರ ಕೃತಿ




# ಸುವರ್ಣ ಮಹೋತ್ಸವ ಸಂಭ್ರಮದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ದೇಣಿಗೆ ನೀಡಲು ಮನವಿ

ಆತ್ಮೀಯರೇ,

ದೇಶದ ರಾಜಧಾನಿಯ ಹೃದಯ ಭಾಗದಲ್ಲಿ ಕಳೆದ ಐವತ್ತು ವರ್ಷಗಳಿಂದ ತಲೆಯೆತ್ತಿ ನಿಂತ ಕನ್ನಡದ ಏಕೈಕ ವಿದ್ಯಾಕೇಂದ್ರ, ನಮ್ಮೆಲ್ಲರ ಹೆಮ್ಮೆಯ ಕನ್ನಡ ಶಾಲೆ ಐವತ್ತು ಸಂವತ್ಸರಗಳನ್ನು ಸಮರ್ಥವಾಗಿ ಕಳೆದು ಈಗ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. 1961ರಲ್ಲಿ ರಾಜ್ಯಸಭಾ ಉಪಸಭಾಪತಿಗಳಾಗಿದ್ದ, ಶ್ರೀ.ಎಸ್.ವಿ. ಕೃಷ್ಣಮೂರ್ತಿ ರಾವ್ ಮತ್ತು ಆರೋಗ್ಯ ಸಚಿವರಾಗಿದ್ದ, ಶ್ರೀ.ಡಿ.ಪಿ. ಕರಮರಕರ್ ಅವರಂಥ ದಕ್ಷ ನಾಯಕರ ನೇತೃತ್ವದಲ್ಲಿ ಜನ್ಮ ವೆತ್ತ ಶಾಲೆ ಐವತ್ತು ವಸಂತಗಳಲ್ಲಿ ಹೆಮ್ಮರವಾಗಿ ಬೆಳೆದು, ಸಮಸ್ತ ದೆಹಲಿ ಕನ್ನಡಿಗರ ಹೆಮ್ಮೆ ಮತ್ತು ಅಭಿಮಾನದ ಆಸ್ತಿಯಾಗಿದೆ. ಸುವರ್ಣ ಮಹೋತ್ಸವವನ್ನು ಆಚರಿಸಿಕೊಳ್ಳುವ ಸುವರ್ಣಕಾಲವೀಗ. ಅಂದು ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಶಾಲೆಯ ನೆರಳಿನಲ್ಲಿ ಈಗ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿವರ್ಷ ಓದುತ್ತಿದ್ದಾರೆ ಮತ್ತು ಅರವತ್ತಕ್ಕೂ ಮಿಗಿಲಾಗಿ ಕನ್ನಡ ಹಾಗೂ ಕನ್ನಡೇತರ ಶಿಕ್ಷಕರು ಮಕ್ಕಳಿಗೆ ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಶಾಲೆಯಲ್ಲಿ ಓದಿದ ಸಾವಿರಾರು ಮಕ್ಕಳು ದೇಶ ವಿದೇಶಗಳಲ್ಲಿ ಇಂದು ಖ್ಯಾತಿ ಗಳಿಸಿ ಅತ್ಯುನ್ನತ ಹುದ್ದೆಯಲ್ಲಿದ್ದು ಶಾಲೆಗೆ ಹೆಮ್ಮೆ ತಂದಿದ್ದಾರೆ.

ಇದಕ್ಕೆಲ್ಲ ಕಾರಣೀಭೂತರಾದ ಹಲವಾರು ಗಣ್ಯರು, ಹಿರಿಯರು ಈ ಸಂಸ್ಥೆಯ ಏಳಿಗೆಗಾಗಿ ಹಗಲಿರುಳು ದುಡಿದಿದ್ದಾರೆ. ಈ ಶಿಕ್ಷಣ ಸಂಸ್ಥೆಯನ್ನು ಕಟ್ಟುವ ಕನಸು ಕಂಡ ಹಿರಿಯರ ಆಶಯಗಳನ್ನು ನನಸಾಗಿಸುವ ಕಾರ್ಯವನ್ನು ನಾವೆಲ್ಲ ಕನ್ನಡಿಗರು ಈ ಐದು ದಶಕಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಮಾಡುತ್ತ ಬಂದಿದ್ದೇವೆ, ಇನ್ನು ಮುಂದೆ ಮಾಡಬೇಕಾಗಿರುವ ಕೆಲಸಗಳೂ ಬಹಳಷ್ಟಿವೆ. ಅದಕ್ಕಾಗಿ ಈ ಸುವರ್ಣ ಮಹೋತ್ಸವದ ವರ್ಷದಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಶಾಲೆಗೆ ಹೊಸ ಕಟ್ಟಡ ನಿರ್ಮಿಸಲು ಘನ ಕರ್ನಾಟಕ ಸರ್ಕಾರವು ಒಂದು ಕೋಟಿ ರೂಪಾಯಿಗಳ ಅನುದಾನವನ್ನು ನೀಡುವುದರ ಮೂಲಕ ತನ್ನ ಸಹಾಯ ಹಸ್ತವನ್ನು ಚಾಚಿದೆ. ಅಲ್ಲದೇ ಕನ್ನಡ ಶಾಲೆಯ ಮಕ್ಕಳಿಗೆ ಸಾರಿಗೆ ವ್ಯವಸ್ಥೆಗಾಗಿ ಐವತ್ತು ಲಕ್ಷ ರೂಪಾಯಿಗಳ ಅನುದಾನವನ್ನೂ ಘೋಷಿಸಿದೆ. ಜೊತೆಗೆ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಮೂಹ ಮತ್ತು ಪೋಷಕರು ಸಹೃದಯತೆಯಿಂದ ಸಹಾಯವನ್ನು ನೀಡಲು ಮುಂದೆ ಬಂದಿದ್ದಾರೆ.
ಈ ಸುವರ್ಣ ಮಹೋತ್ಸವದಂಥ ಐತಿಹಾಸಿಕ ಸಂಭ್ರಮವನ್ನು ಒಂದು ಉಪಯುಕ್ತವಾದ ಸುಂದರ ಸ್ಮರಣ ಸಂಚಿಕೆಯ ಮೂಲಕ ದಾಖಲಿಸುವ ಆಶಯ ನಮ್ಮದು. ಈ ಹಿನ್ನೆಲೆಯಲ್ಲಿ ಎಲ್ಲ ಸಿದ್ಧತೆಗಳೂ ಭರದಿಂದ ಸಾಗಿವೆ. ಈ ಸ್ಮರಣ ಸಂಚಿಕೆಯಲ್ಲಿ ಶಾಲೆ ಹಾಗೂ ಶಿಕ್ಷಣ ಸಂಸ್ಥೆ ಐದು ದಶಕಗಳಲ್ಲಿ ನಡೆದು ಬಂದ ಹಾದಿ, ಮುಂದಿನ ಏಳಿಗೆಯ ಪರಿಕಲ್ಪನೆ ಕುರಿತಾಗಿ ಹಲವಾರು ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ದೇಣಿಗೆ ನೀಡಿ ಪ್ರೋತ್ಸಾಹಿಸಿದ ಎಲ್ಲ ಮಹನೀಯರ ಹೆಸರು ಹಾಗೂ ಪುಟ್ಟ ವಿವರಗಳನ್ನು ಪ್ರಕಟಿಸುವ ಮಹದಾಸೆ ನಮ್ಮದು.

ನಮ್ಮೆಲ್ಲ ಕನ್ನಡ ಬಾಂಧವರು ಉದಾರ ಮನಸ್ಸಿನಿಂದ ಮುಂದಾಗಿ ಈ ಸುವರ್ಣ ಮಹೋತ್ಸವದ ನಿಧಿ ಸಂಗ್ರಹದ ಸತ್ಕಾರ್ಯದಲ್ಲಿ ತಮ್ಮದೊಂದು ಅಳಿಲು ಸೇವೆಯೆಂಬ ಮನೋಭಾವನೆಯಿಂದ ಉದಾರವಾಗಿ ದೇಣಿಗೆ ನೀಡಿ ಶಾಲೆಯ ಅಭಿವೃದ್ಧಿಗಾಗಿ ಬೆಂಬಲಿಸಬೇಕೆಂದು ಕಳಕಳಿಯ ವಿನಂತಿ. ತಮ್ಮೆಲ್ಲರ ಬೆಂಬಲವೇ ನಮ್ಮ ಬಲ.

ತಮ್ಮ ಧನ ಸಹಾಯವನ್ನು ಫೋಟೋ ಮತ್ತು ವಿವರಗಳ ಸಹಿತ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಆಗಸ್ಟ್ 31,2011 ಒಳಗಾಗಿ ತಲುಪುವಂತೆ ಚೆಕ್ / ಡಿಡಿ ಮೂಲಕ ಕಳುಹಿಸಬೇಕಾಗಿ ಸವಿನಯ ಕೋರಿಕೆ. (Cheque /DD to be issued in favour of "Delhi Kannada Education Society" payable at New Delhi)

Address :

Hony.Secretary,
Delhi Kannada Education Society,
Lodhi Estate, New Delhi -110003.

ವಿ.ಸೂ : ಈ ಧನ ಸಹಾಯಕ್ಕೆ ಆದಾಯಕರ ವಿನಾಯಿತಿ *(80G)* ಸವಲತ್ತು ಇದೆ.

ಆಂಜನಿ ಗೌಡ
ಗೌರವ ಕಾರ್ಯದರ್ಶಿ

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಕಲಾಕೃತಿ
ಮಂಜುನಾಥ್ ಕಾಮತ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ ಸಂಪುಟ 21 ಸಂಚಿಕೆ 10
ಜುಲೈ 2011, ಬೆಲೆ ರೂ. 1

# ಮನದ ಮಾತು

ಮಹಾತ್ಮ ಗಾಂಧೀಜಿಯವರು ಒಂದೆಡೆ ಬರೆಯುತ್ತಾರೆ–"ನಾನು ನಾಲ್ಕು ವರ್ಷಗಳಲ್ಲಿ ಅಪಾರ ಪರಿಶ್ರಮದಿಂದ ಕಲಿತ ಭೌತಶಾಸ್ತ್ರ, ಜೀವಶಾಸ್ತ್ರ, ಗಣಿತ, ರಸಾಯನ ಶಾಸ್ತ್ರಗಳನ್ನು ಕೇವಲ ಒಂದೇ ವರ್ಷದಲ್ಲಿ ಕಲಿಯಬಹುದಾಗಿತ್ತು–ನನ್ನ ಮಾತೃಭಾಷೆ ಗುಜರಾತಿ ಮಾಧ್ಯಮದ ಮೂಲಕ ಕಲಿತಿದ್ದರೆ ! ಆದರೆ ನಾನು ಕಲಿತದ್ದು ಇಂಗ್ಲೀಷ್ ಮಾಧ್ಯಮದ ಮೂಲಕ". ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕು ಎಂಬುದು ಗಾಂಧೀಜಿಯವರ ಕನಸಾಗಿತ್ತು. ಈ ಬಗ್ಗೆ ಒಂದು ದೃಢ ನಿಲುವಿಗೆ ಬರಲು ಇಂದಿಗೂ ಸಾಧ್ಯವಾಗಿಲ್ಲ. ಬಹುತೇಕ ಎಲ್ಲ ರಾಜ್ಯಗಳಲ್ಲೂ ಇಂಗ್ಲೀಷ್‌ನ ಮೋಹ ನೆಲದ ಭಾಷೆಗಳನ್ನು ಹೊಸಕಿ ಹಾಕಿದೆ. ಇದರಲ್ಲಿ ನಮ್ಮ ಕರ್ನಾಟಕವೂ ಹೊರತಲ್ಲ. ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಸಮಾನ ಶಿಕ್ಷಣ ನೀತಿಯನ್ನು ಎತ್ತಿ ಹಿಡಿದಿದೆ. ಆದರೆ ಇದನ್ನು ಅನುಷ್ಠಾನಗೊಳಿಸುವ ಇಚ್ಛೆ ಸರ್ಕಾರಗಳಿಗಿಲ್ಲ. ನಮ್ಮ ನಾಡಿನಲ್ಲಿಯೇ ನೋಡಿ–ಕನ್ನಡ ಮಾಧ್ಯಮದಲ್ಲಿಯೇ ಶಾಲೆ ನಡೆಸುತ್ತೇವೆ ಎಂದು ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಬರೆದು ಕೊಟ್ಟಿರುವವರು ರಾಜಾರೋಷವಾಗಿ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಸುತ್ತ ಪರವಾನಿಗಿ ಪಡೆದ ಷರತ್ತನ್ನೇ ಉಲ್ಲಂಘಿಸಿದ್ದಾರೆ. ಇದು ಶಿಕ್ಷಾರ್ಹ ಅಪರಾಧ. ಆದರೆ 'ಅಪರಾಧಿ'ಗಳಿಗೂ ಭಯವಿಲ್ಲ, ಶಿಕ್ಷೆ ನೀಡಬೇಕಾದ ಸರ್ಕಾರಕ್ಕೂ ಆತಂಕವಿಲ್ಲ. ಏಕೆಂದರೆ ಇಂಗ್ಲೀಷ್ ಮೋಹ ನಿಯಮೋಲ್ಲಂಘನೆಯನ್ನು ಮನ್ನಿಸುವಂತೆ ಅಥವ ಕಂಡೂ ಕಾಣದಂತೆ ವರ್ತಿಸುವಂತೆ ಮಾಡಿದೆ.

ಮಾತೃಭಾಷೆಯಲ್ಲಿ ಶಿಕ್ಷಣ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಕಡ್ಡಾಯವಾಗಬೇಕು ಎಂದು ವಾದಿಸುವವರು ಮಕ್ಕಳ ಸರ್ವಾಂಗೀಣ ಮಾನಸಿಕ, ಬೌದ್ಧಿಕ ಹಾಗೂ ಪ್ರಜ್ಞೆಯ ಬೆಳವಣಿಗೆಯನ್ನು ಗಮನದಲ್ಲಿರಿಸಿ ತಮ್ಮ ವಿಚಾರ ಮಂಡನೆ ಮಾಡುತ್ತಾರೆ. ಕನ್ನಡದ ಪ್ರಸಿದ್ಧ ಸಾಹಿತಿ ಡಿವಿಜಿ ಅವರು ಹೇಳಿದಂತೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದೆಂದರೆ ಕೊಬ್ಬರಿಯ (ಅಂದರೆ ಜ್ಞಾನ ಸಂಪತ್ತು) ಬದಲು ಕರಟವನ್ನು (ಪರಭಾಷೆಯನ್ನು)ಜಗಿಯುವಂತೆ ಮಕ್ಕಳಿಗೆ ಶಿಕ್ಷಣ ನೀಡುವುದು. ಮಕ್ಕಳ ಬಹುತೇಕ ಸಮಯ ಕರಟವನ್ನು ಭೇದಿಸುವುದರಲ್ಲಿಯೇ ವ್ಯಯಿಸಿ ಹೋಗುತ್ತದೆ. ಅದಕ್ಕೇ ಶಾಲೆಯಲ್ಲಿ ಕಲಿತದ್ದು ತಲೆಗೆ ಹೋಗದೆ ಟ್ಯೂಶನ್ ಪರಿಪಾಠಕ್ಕೆ ಮೊರೆ ಹೋಗಿರುವುದು. ಈ ಇಂಗ್ಲೀಷ್ ಮೋಹ ಎಷ್ಟಿದೆಯೆಂದರೆ ಪ್ರಿ ಪ್ರೈಮರಿ ಅಂದರೆ ಪೂರ್ವ ಪ್ರಾಥಮಿಕ ಹಂತದಲ್ಲಿಯೇ ಹಾಲಹಲ್ಲಿನ ಹಸುಳೆಗಳಿಗೆ ಪರಭಾಷೆಯ ಒತ್ತಾಯಪೂರ್ವಕ ಕಲಿಕೆಯ ಕಬ್ಬಿಣದ ಕಡಲೆಗಳನ್ನು ನೀಡಲಾಗುತ್ತದೆ. ಮಾಂಟೆಸರಿ, ನರ್ಸರಿ, ಯುಕೆಜಿ, ಎಲ್‌ಕೆಜಿ ಹೀಗೆ ಒಂದನೇ ತರಗತಿಗೆ ಹೋಗುವ ಮುನ್ನವೇ ವಿಧವಿಧ ಶಿಕ್ಷೆಗಳು; ಬಡವರ ಮಕ್ಕಳು ಅಂಗನವಾಡಿಯಲ್ಲಿ ಮಧ್ಯಾಹ್ನದ ಉಪ್ಪಿಟ್ಟಿಗಾಗಿ ಹಾತೊರೆಯುತ್ತಿದ್ದರೆ ಶ್ರೀಮಂತರ ಮಕ್ಕಳು ಈ ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಚಾಕೋಲೇಟ್ ಮೆಲ್ಲುತ್ತಿರುತ್ತಾರೆ. ಇದರಿಂದಲೇ ನಮ್ಮ ಬಹುತೇಕ ಮಕ್ಕಳ ಅಂತಃಸತ್ವ ಹಿಗ್ಗುವುದಿಲ್ಲ, ಭಾವ ಪ್ರಪಂಚ ವಿಸ್ತರಿಸುವುದಿಲ್ಲ, ಸಂಸ್ಕೃತಿಯಂತೂ ಅವರ ಮನಃಪಟಲದಲ್ಲಿ ನೆಲೆಯೂರುವುದೇ ಇಲ್ಲ. ಹೀಗಾಗಿ ಮಕ್ಕಳ ಅಭಿವ್ಯಕ್ತಿ ಶಕ್ತಿ ಕುಂಠಿತವಾಗುತ್ತದೆ. ಈ ಭರಾಟೆಯಲ್ಲಿ ದೇಶದ ಸಹಸ್ರಾರು ವರ್ಷಗಳ ಇತಿಹಾಸವಿರುವ ಭಾಷೆಗಳೂ ಮರಣವನ್ನು ಅಪ್ಪುತ್ತವೆ ಕಾಲಕ್ರಮೇಣದಲ್ಲಿ.

ಇಂಗ್ಲೀಷ್ ಭಾಷೆ ನಿಜಕ್ಕೂ ಅಗತ್ಯವಿದೆ. ಆದರೆ ಅದು ಭಾಷೆಯಾಗಿ ಬರಲಿ, ಶಿಕ್ಷಣ ಮಾಧ್ಯಮವಾಗಿ ಅಲ್ಲ. ಮಾತೃಭಾಷೆಯನ್ನು ಸಮರ್ಥವಾಗಿ ಕಲಿತವರು ಯಾವ ಭಾಷೆಯನ್ನು ಎಂದು ಬೇಕಾದರೂ ಕಲಿಯಬಲ್ಲರು. ಜರ್ಮನ್ ಭಾಷೆಯವರಾಗಿದ್ದ ರೆವರೆಂಡ್ ಕಿಟ್ಟೆಲ್ ಮಂಗಳೂರಿಗೆ ಬಂದು ನೆಲೆಸಿದ ಕೆಲವೇ ತಿಂಗಳುಗಳಲ್ಲಿ ಕನ್ನಡ ಕಲಿತರು, ಕನ್ನಡದಲ್ಲಿ ಪ್ರಭುತ್ವ ಪಡೆದರು, ಬೃಹತ್ ಕನ್ನಡ–ಇಂಗ್ಲೀಷ್ ನಿಘಂಟನ್ನು ರಚಿಸಿದರು, ಸಹಸ್ರಾರು ಕನ್ನಡ ಗಾದೆಗಳ ಸತ್ವವನ್ನು ಪ್ರಕಟಿಸಿದರು. ಹೀಗಾಗಿ ಒಂದು ಭಾಷೆಯ ಕಲಿಕೆಯ ಅಗತ್ಯವಿದೆ ಎಂದ ಮಾತ್ರಕ್ಕೆ ಅದನ್ನು ಚಿಕ್ಕಂದಿನಿಂದಲೇ ಹೇರುವ ಅಗತ್ಯವಿಲ್ಲ. ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗಬೇಕು ಎನ್ನುವುದು ವೈಜ್ಞಾನಿಕ, ಶಿಕ್ಷಣ ಮಾಧ್ಯಮ ಪರಭಾಷೆಯಲ್ಲಿ ಆಗಬೇಕು ಎನ್ನುವುದು ಅವೈಜ್ಞಾನಿಕ. ನಮ್ಮ ಸರ್ಕಾರಗಳು ಈಗಲಾದರೂ ಎಚ್ಚೆತ್ತುಕೊಂಡು ಮಕ್ಕಳ ಭವಿಷ್ಯವನ್ನು ಸದೃಢವಾಗಿಸಲು, ಮಕ್ಕಳ ಅಭಿವ್ಯಕ್ತಿ ಸಾಮರ್ಥ್ಯ ಹೆಚ್ಚಿಸಲು, ಮಕ್ಕಳ ಭಾವನಾ ಪ್ರಪಂಚ ವಿಸ್ತರಿಸಲು ಮಾತೃಭಾಷೆಯನ್ನು ಕಡ್ಡಾಯ ಶಿಕ್ಷಣ ಮಾಧ್ಯಮವನ್ನಾಗಿ ಘೋಷಿಸಬೇಕು. ಪ್ರಾಥಮಿಕ, ಮಾಧ್ಯಮಿಕ ಹಂತಗಳಲ್ಲಿ ಇದು ಅನುಷ್ಠಾನಗೊಳ್ಳಬೇಕಾದ ಅವಶ್ಯಕತೆ ಇದೆ. ನಮ್ಮ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಡಲಿ, ಕೇವಲ ನಿಯಮ ಮಾಡುವುದಲ್ಲ–ನಿಯಮದ ಅನುಷ್ಠಾನದಲ್ಲೂ ಸದೃಢ ಹೆಜ್ಜೆ ಇಡಲಿ ಎಂಬುದು ನಮ್ಮ ಆಶಯ.

❑ ಉಷಾ ಭರತಾದ್ರಿ

# ಅಂತರಾಳದಿಂದ. . .

## ಪಶ್ಚಿಮ ಘಟ್ಟಗಳ ಕುರಿತಾಗಿ

ಪಶ್ಚಿಮ ಘಟ್ಟಗಳು ಕರ್ನಾಟಕದ ಕರಾವಳಿಯ ಉದ್ದಕ್ಕೂ ಚಪ್ಪರದಂತೆ ಹಬ್ಬಿಕೊಂಡಿವೆ. ಒಂದು ಕಡೆ ಮಲೆನಾಡು. ಮಲೆನಾಡಿನಿಂದ ಬಳ್ಳಿಯಂತೆ ಬಳಕುವ ಹಾದಿಗುಂಟ ಸಾಗಿ ಕೆಳಗಿಳಿದರೆ ವಿಸ್ತೃತವಾದ ಕರಾವಳಿ. ಮಳೆಯ ಅಬ್ಬರದಲ್ಲಿ ಕರ್ನಾಟಕದ ಕರಾವಳಿ, ಮಲೆನಾಡು, ಬಯಲುನಾಡುಗಳು ಈಗ ಸಿಲುಕಿಕೊಂಡಿವೆ. ಕಳೆದ ಎರಡು ವರ್ಷಗಳಿಂದ ರಾಚಿದ ಮಳೆಯ ಪ್ರಕೋಪದಿಂದ ಬಯಲುನಾಡಿನ ಹಲವಾರು ಪ್ರದೇಶಗಳು ಇನ್ನೂ ಚೇತರಿಸಿಕೊಳ್ಳುತ್ತಿವೆ. ಇವೆಲ್ಲದರ ನಡುವೆ ಇತ್ತೀಚೆಗೆ ಪಶ್ಚಿಮ ಘಟ್ಟಗಳ ಕುರಿತಾದ ಒಂದು ಚರ್ಚೆ ನಮಗೆಲ್ಲಾ ತೀರಾ ಪ್ರಸ್ತುತವಾದದ್ದು. ವಿಶ್ವಸಂಸ್ಥೆಯ ಒಂದು ಅಂಗವಾದ ಯುನೆಸ್ಕೊ ಪಶ್ಚಿಮ ಘಟ್ಟಗಳ ಕೆಲ ಸೂಕ್ಷ್ಮ ಪ್ರದೇಶಗಳಿಗೆ ವಿಶೇಷ ಮಾನ್ಯತೆ ನೀಡುವ ಬಗ್ಗೆ ಯೋಚಿಸುತ್ತಿರುವುದು. ಈ ಮಾನ್ಯತೆಯನ್ನು ಯುನೆಸ್ಕೊದ ಅಂತರರಾಷ್ಟ್ರೀಯ ಒಡಂಬಡಿಕೆಯ ಮೇರೆಗೆ ನೀಡಲು ಅದರ ಒಂದು ಸಮಿತಿ ಚರ್ಚೆಯನ್ನು ನಡೆಸಿತ್ತು. ಈಗಾಗಲೇ ನಮ್ಮ ದೇಶದಲ್ಲಿ ಪಶ್ಚಿಮ ಬಂಗಾಳದ ಸುಂದರ ಬನ, ಅಸ್ಸಾಮಿನ ಮಾನಸ ರಕ್ಷಿತ ಕಾಡಿನ ಪ್ರದೇಶಗಳು ಯುನೆಸ್ಕೊದ ಮಾನ್ಯತೆ ಪಡೆದಿವೆ. ಜಗತ್ತಿನ ಭೌಗೋಳಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವಿಶಿಷ್ಟ ತಾಣಗಳಿಗೆ ಈ ಮಾನ್ಯತೆಯನ್ನು ಯುನೆಸ್ಕೊ ನೀಡುತ್ತದೆ. ಇದಲ್ಲದೆ ಅದ್ಭುತ ಹಾಗೂ ವಿಶಿಷ್ಟವಾದ ಸಾಂಸ್ಕೃತಿಕ ತಾಣಗಳಿಗೂ ಈ ಮಾನ್ಯತೆಯನ್ನು ನೀಡಲಾಗುತ್ತಿದೆ. ಯುನೆಸ್ಕೊ ಸುಮಾರು 900 ತಾಣಗಳಿಗೆ ಜಗತ್ತಿನಾದ್ಯಂತ ಈ ಬಗೆಯ ಮಾನ್ಯತೆಯನ್ನು ನೀಡಿದೆ. ಪ್ರತಿ ವರ್ಷವೂ ಹೊಸ ಹೊಸ ತಾಣಗಳು ಈ ಪಟ್ಟಿಗೆ ಸೇರುತ್ತಿವೆ. ಈ ಬಾರಿ ಪಶ್ಚಿಮ ಘಟ್ಟಗಳನ್ನು ಸೇರಿಸುವುದರ ಬಗ್ಗೆ ಹುನ್ನಾರ ನಡೆದಿತ್ತು. ಹಾಗಾದರೆ, ಉದ್ಭವವಾದ ಸಮಸ್ಯೆಗಳೇನು ?

ಈ ಯುನೆಸ್ಕೊದ 'ಮಾನ್ಯತೆ'ಯ ಪುರಸ್ಕಾರ ಪಶ್ಚಿಮ ಘಟ್ಟಗಳಿಗೆ ಬೇಡವೆಂದು ಕರ್ನಾಟಕ ಸರಕಾರ ಹೇಳಿದೆ. ಈ ನಿರಾಕರಣೆಯ ಹಿಂದಿನ ಕಾರಣಗಳನ್ನು ಎಲ್ಲಿ ಹುಡುಕಬೇಕೆಂಬುದೇ ದೊಡ್ಡ ಸಮಸ್ಯೆಯಾಗಿದೆ. ಸರಕಾರದ ವಕ್ತಾರರ ಪ್ರಕಾರ ಈ ಮಾನ್ಯತೆಯಿಂದ ಪಶ್ಚಿಮ ಘಟ್ಟಗಳಲ್ಲಿ ವಾಸಿಸುತ್ತಿರುವ ವಿವಿಧ ಆದಿವಾಸಿ ಹಾಗೂ ಇತರ ಜನಾಂಗಗಳಿಗೆ ತೊಂದರೆಯಾಗುತ್ತದೆ. ಸಾವಿರಾರು ವರುಷಗಳಿಂದ ಅಲ್ಲಿ ವಾಸಿಸುತ್ತಿರುವ ಈ ಜನಸಮುದಾಯಗಳನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕಾಗುತ್ತದೆಯೆಂಬ ಒಂದು ವಾದ ಮುಂದಿದೆ. ಇದರ ಜೊತೆಗೆ ಈ ಬಗೆಯ ಮಾನ್ಯತೆಗೆ ಒಳಪಟ್ಟ ಹಂಪಿಯಲ್ಲಿ ಯಾವುದೇ ಬೆಳವಣಿಗೆಯ ಹಾಗೂ ಜನಪರ ಯೋಜನೆಗಳನ್ನು ಊರ್ಜಿತಗೊಳಿಸಲು ಸಾಧ್ಯವಾಗಲಿಲ್ಲ ಎಂಬ ವಿಚಾರವೂ ಇದೆ. ಇದಕ್ಕೆ ಆನೆಗೊಂದಿಯಲ್ಲಿ ಕಟ್ಟಬೇಕಾಗಿದ್ದ ಸೇತುವೆಯೊಂದರ ಉದಾಹರಣೆಯನ್ನೂ ನೀಡಲಾಗುತ್ತಿದೆ. ಒಟ್ಟಾರೆ ಸರಕಾರದ ಪ್ರಕಾರ ಯಾವುದೇ ಬೆಳವಣಿಗೆ ಕುರಿತಾದ ಯೋಜನೆಗಳು ಈ ಮಾನ್ಯತೆ ಪಡೆಯುವ ಜಾಗೆಯಲ್ಲಿ ಸಾಧ್ಯವಾಗುವುದಿಲ್ಲ. ಅದಲ್ಲದೆ, ನಮ್ಮ ದೇಶದ ಸಂಪತ್ತಿನ ಅದರಲ್ಲೂ ನೈಸರ್ಗಿಕ ಸಂಪತ್ತಿನ ವಿನಿಯೋಗದ ನಿರ್ಧಾರವನ್ನು ಈ ಅಂತರರಾಷ್ಟ್ರೀಯ ಸಂಸ್ಥೆಗಳ ಮೂಗಿನಡಿಯಲ್ಲೇ ಮಾಡಬೇಕಾದ ಪರಿಸ್ಥಿತಿಯೂ ಉಂಟಾಗಬಹುದು ಎಂಬ ವಾದವೂ ಇದೆ.

ಈ ಎಲ್ಲ ವಾದಗಳಿಗೆ ಉತ್ತರವೂ ಇದೆ. ಪರಿಸರಪ್ರಿಯರ ಪ್ರಕಾರ ಕರ್ನಾಟಕ ಸರಕಾರದ ವಾದಗಳಲ್ಲಿ ಏನೂ ಹುರುಳಿಲ್ಲ. ಅಸ್ಸಾಮಿನ ಮಾನಸ ಹಾಗೂ ಪಶ್ಚಿಮಬಂಗಾಳದ ಸುಂದರ ಬನಗಳಲ್ಲಿ ಈ ಮಾನ್ಯತೆಯಿಂದ ಏನಾದರೂ ತೊಂದರೆಯಾಗಿದೆಯೇ ಎಂದು ಅವರು ಪ್ರಶ್ನಿಸುತ್ತಾರೆ. ಇದು ಕೆಲ ಪಟ್ಟಭದ್ರ ಹಿತಾಸಕ್ತರ ವಾದ. ಈ ಜನ ಕರ್ನಾಟಕ ಸರಕಾರದ ಕಿವಿ ಹಿಂಡುತ್ತಿದ್ದಾರೆ ಮತ್ತು ಪಶ್ಚಿಮ ಘಟ್ಟಗಳನ್ನು ಲೂಟಿ ಹೊಡೆಯಲು ತಯಾರಾಗುತ್ತಿರುವ ಜನರಿಗೆ ಈ ಬಗೆಯ ಮಾನ್ಯತೆಯಿಂದ ತೊಂದರೆಯಾಗುತ್ತದೆ. ಅದಕ್ಕಾಗಿ ಸರಕಾರದ ಹಿಂದೆ ಈ ಜನ ಬಿದ್ದಿದ್ದಾರೆ. ಮತ್ತು ಈ ಬಗೆಯ ಪ್ರಚಾರಗಳಿಗೆ ಎಡೆ ಮಾಡಿಕೊಡುತ್ತಿದ್ದಾರೆಂದು ಎಲ್ಲ ಪರಿಸರವಾದಿಗಳು ವಾದಿಸುತ್ತಿದ್ದಾರೆ. ಕರ್ನಾಟಕ ಸರಕಾರದ ಒಂದು ಅಂಗವೇ ಆದ ಪಶ್ಚಿಮ ಘಟ್ಟಗಳ ಕಾರ್ಯ ಪಡೆ ಸರಕಾರಕ್ಕೆ ಯುನೆಸ್ಕೊದ ಮಾನ್ಯತೆಯನ್ನು ಪಡೆಯಲು ಆಗ್ರಹಿಸಿದೆ. ಅದಲ್ಲದೆ, ಪಶ್ಚಿಮ ಘಟ್ಟಗಳನ್ನು ಹೊಂದಿದ ಜಿಲ್ಲೆಗಳ ಸಚಿವರು, ಸಂಸದರು ಹಾಗೂ ಇತರ ರಾಜಕೀಯ ಧುರೀಣರು ಯುನೆಸ್ಕೊದ ಮಾನ್ಯತೆಯ ಕುರಿತಾಗಿ ಇಬ್ಬಂದಿತನದ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಇತ್ತ ದೆಹಲಿಯಲ್ಲಿ ಘನ ಕೇಂದ್ರ ಸರಕಾರ ಪಶ್ಚಿಮ ಘಟ್ಟಗಳಿಗೆ ಯುನೆಸ್ಕೊದ ಮಾನ್ಯತೆ ನೀಡುವ ಬಗ್ಗೆ ಪರವಾಗಿಯೇ ಇದೆ. ಈ ಕುರಿತಾಗಿ 2009ರಿಂದಲೇ ಚರ್ಚೆ ನಡೆದಿದ್ದು, ಕರ್ನಾಟಕ ಸರಕಾರದ ಒಪ್ಪಿಗೆಯನ್ನೂ ಪಡೆಯಲಾಗಿದೆ ಎಂಬುದು ಕೇಂದ್ರದ ವಾದ. ಕರ್ನಾಟಕ ಸರಕಾರಕ್ಕೆ ಎಲ್ಲ ವಿವರಗಳನ್ನು ನೀಡಲಾಗಿದ್ದು, ಇದರಿಂದ ಯಾವ ಹಾನಿಯೂ ಇಲ್ಲ ಎಂಬುದಾಗಿ ಕೇಂದ್ರ ಸರಕಾರ ಹೇಳಿದೆ.

ತನ್ಮಧ್ಯೆ, ಈ ಎಲ್ಲ ದೇಶಿಯ ವಾದ-ವಿವಾದಗಳ ನಡುವೆ ಯುನೆಸ್ಕೊದ ಮಾನ್ಯತೆಯನ್ನು ನೀಡುವ ಸಮಿತಿ ಪಶ್ಚಿಮ ಘಟ್ಟಗಳಿಗೆ ನೀಡುವ ಮಾನ್ಯತೆಯ ವಿಚಾರವನ್ನು ಒಂದು ವರ್ಷಕ್ಕೆ ಮುಂದೂಡಿದೆ. ಬಹುಶಃ ಮುಂದಿನ ವರ್ಷ ಅದು ಚರ್ಚೆಗೆ ಬರಬಹುದು. ಅಲ್ಲಿಯ ತನಕ ಕೇಂದ್ರದ ಪರಿಸರ ಮಂತ್ರಾಲಯ ಪಶ್ಚಿಮ ಘಟ್ಟಗಳ ಕುರಿತಾಗಿ ವಿಶೇಷವಾದ ಅಧ್ಯಯನ ಮಾಡಲು ರಚಿಸಿದ ಮಾಧವ ಗಾಡಗೀಳ ಸಮಿತಿ ತನ್ನ ವರದಿಯನ್ನೂ ಸಲ್ಲಿಸಿರುತ್ತದೆ. ಬಹುಶಃ ಅಗಸ್ಟ್ ಕೊನೆಯ ಹೊತ್ತಿಗೆ ಗಾಡಗೀಳ ಸಮಿತಿಯ ವರದಿ ಬರುವ ನಿರೀಕ್ಷೆಯಿದೆ. ಈ ವರದಿ ಬಹುಶಃ ಪಶ್ಚಿಮ ಘಟ್ಟಗಳನ್ನು ಒಂದು ಸಮಗ್ರ ರೀತಿಯಲ್ಲಿ ನೋಡಿ, ಅಲ್ಲಿನ ಪರಿಸರ ಸಮತೋಲನದ ಬಗ್ಗೆ ನಮಗೆ ವಿವರಗಳನ್ನೂ ಸಲಹೆಗಳನ್ನೂ ನೀಡಬಹುದು. ಈ ಗಾಡಗೀಳ ಸಮಿತಿಯಲ್ಲಿ ಪಶ್ಚಿಮ ಘಟ್ಟಗಳ ಕುರಿತಾಗಿ ಕೆಲಸ ಮಾಡಿದ ಹಲವು ತಜ್ಞರಿದ್ದಾರೆ.

ಕೊನೆಯಲ್ಲಿ, ಈ ವಾದ-ವಿವಾದಗಳು ಏನೇ ಇರಲಿ, ಈ ಪಶ್ಚಿಮ ಘಟ್ಟಗಳು ನಮ್ಮವು. ಅವುಗಳನ್ನು ಉಳಿಸಿಕೊಂಡು, ಸಂವರ್ಧಿಸುವ ಜವಾಬ್ದಾರಿ ನಮ್ಮೆಲ್ಲರದ್ದು ಎಂಬುದನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು. ದೆಹಲಿ ಕರ್ನಾಟಕ ಸಂಘವೂ ಮುಂಬರುವ ದಿನಗಳಲ್ಲಿ ಈ ಕುರಿತಾಗಿ ಒಂದು ವಿಸ್ತೃತವಾದ ಚರ್ಚೆಯನ್ನು ಏರ್ಪಡಿಸುವ ಬಗ್ಗೆ ಯೋಚಿಸುತ್ತಿದೆ.

❑ **ಡಾ. ವೆಂಕಟಾಚಲ ಹೆಗಡೆ**

ಪ್ರತಿ ತಿಂಗಳು 10 ಅಥವಾ 11ನೇ ತಾರೀಖು 'ಅಭಿಮತ'ವನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ. ಒಂದು ವಾರದೊಳಗಾಗಿ ನಿಮಗೆ ತಲುಪದೇ ಇದ್ದಲ್ಲಿ ದಯಮಾಡಿ ನಮ್ಮನ್ನು ಸಂಪರ್ಕಿಸಿ
26109615, 65643615

ಸಂಘದಲ್ಲಿ ಕನ್ನಡ ಕಲಿಕೆ ತರಗತಿಗಳನ್ನು ಬರುವ ಆಗಸ್ಟ್ ತಿಂಗಳನಲ್ಲಿ ಪ್ರಾರಂಭಿಸಲಾಗುವುದು. ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು.

## ಮುನ್ನೋಟ

ಸಂಘದಲ್ಲಿ ಹಲವು ರಚನಾತ್ಮಕ ಕೆಲಸ ಕಾರ್ಯಗಳು ಆಗಬೇಕಾಗಿದೆ. ಕರ್ನಾಟಕ ಸರಕಾರ ಮಾಡಿದ ಒಂದು ಕೋಟಿ ಅನುದಾನ ಘೋಷಣೆಯಿಂದ ಸಂತಸಪಟ್ಟು ಕುಳಿತುಕೊಳ್ಳುವಂತಿಲ್ಲ. ಅದು ಬರಬೇಕಾದರೆ ಬಹಳಷ್ಟು ಕೆಲಸಗಳನ್ನು ಮಾಡಬೇಕಾಗಿದೆ. ಇದನ್ನು ಕಾರ್ಯಗತಗೊಳಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಹುದಿನಗಳಿಂದ ನಿರೀಕ್ಷೆಯಲ್ಲಿದ್ದ ಸಂಘದ ಸಂವಿಧಾನ ತಿದ್ದುಪಡಿಯ ಕೆಲಸ ಪ್ರಗತಿಯಲ್ಲಿದೆ. ವಸತಿ ಗೃಹದ ರಿಪೇರಿ, ಸಭಾಂಗಣ ರಿಪೇರಿ, ಕಟ್ಟಡದ ಸುಣ್ಣ ಬಣ್ಣ, ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಮುಂತಾದ ಕೆಲಸಗಳನ್ನು ಅತಿ ಶೀಘ್ರದಲ್ಲಿ ಕೈಗೊಳ್ಳಲಾಗುವುದು. ಇದೆಲ್ಲದರ ಮಧ್ಯೆ ಉತ್ತಮ ಸಾಂಸ್ಕೃತಿಕ–ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ದೆಹಲಿಯ ಹಲವಾರು ಕನ್ನಡ ವಿದ್ಯಾರ್ಥಿಗಳು ಈ ವರ್ಷದ ಶೈಕ್ಷಣಿಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ತಂದಿರುತ್ತಾರೆ. ಅವರೆಲ್ಲರಿಗೂ ನನ್ನ ಅಭಿನಂದನೆಗಳು.

ತೌರೂರಿನಲ್ಲಿ ಅಲ್ಪಸಮಯದ ಬೇಸಿಗೆಯ ರಜೆಯ ಸುಂದರ ದಿನಗಳನ್ನು ಕಳೆದು ಬಂದಿರುವ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳು ಆರಂಭವಾಗಿದೆ. ನಿಮ್ಮಲ್ಲರಿಗೂ ನನ್ನ ಶುಭ ಹಾರೈಕೆಗಳು.

❑ ಸಿ.ಎಂ.ನಾಗರಾಜ

ಅಭಿನಂದನೆ

## ಅಮೆರಿಕಕ್ಕೆ ಭಾರತದ ನೂತನ ರಾಯಭಾರಿಯಾಗಿ ನಿರುಪಮಾ ರಾವ್



ಭಾರತದ ವಿದೇಶಾಂಗ ಸೇವಾ ಕ್ಷೇತ್ರದಲ್ಲಿ 38 ವರ್ಷಗಳ ದಕ್ಷ, ಸಮರ್ಥ ಸೇವೆ ಸಲ್ಲಿಸಿದ ನಿರುಪಮಾ ರಾವ್ ಅವರು ಇದೀಗ ಅಮೆರಿಕಕ್ಕೆ ನೂತನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. 1973ರಲ್ಲಿ ಐ.ಎಫ್.ಎಸ್. ಸೇರಿದ ಇವರು ಪುರುಷ ಪ್ರಧಾನವಾಗಿದ್ದ ಈ ಕ್ಷೇತ್ರದಲ್ಲಿ ತಮ್ಮ ಅಪ್ರತಿಮ ಸಾಧನೆಯಿಂದ ಉನ್ನತ ಹುದ್ದೆಗೇರಿದರು. ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ವಿವಿಧ ಸಚಿವಾಲಯದಲ್ಲಿ ದಕ್ಷತೆಯಿಂದ ನಿರ್ವಹಿಸಿರುವ ನಿರುಪಮಾ ಅವರು ಮಹಿಳಾ ಸಾಧನೆಯ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ನಿರುಪಮಾ ರಾವ್ ಜನಿಸಿದ್ದು ಕೇರಳದ ಮಲಪ್ಪುರಂನಲ್ಲಿ. ಅವರ ತಂದೆ ಕೆ.ಪಿ.ಎಂ. ಮನೋನ್ ಒಬ್ಬ ಸೇನಾಧಿಕಾರಿಯಾಗಿದ್ದವರು. ಅವರು ಸ್ವಲ್ಪ ಕಾಲ ಬೆಂಗಳೂರಿನಲ್ಲಿ ನೆಲಸುವಂತಾದುದು ಇದೇ ಕಾರಣದಿಂದ. ನಿರುಪಮಾ ಪಿಯುಸಿ ಓದಿದ್ದು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ; ಮುಂದೆ ಅವರು ಬಿ.ಎ. (ಆನರ್ಸ್) ಪದವಿ ಗಳಿಸಿದರು. ವಿದೇಶಾಂಗ ಕಾರ್ಯದರ್ಶಿಯಾಗುವುದಕ್ಕೆ ಮುನ್ನ ನಿರುಪಮಾ ರಾವ್ ಎರಡು ಪ್ರಥಮಗಳನ್ನು ಸಾಧಿಸಿದ್ದರು. ಅವರು ಚೀನಾಕ್ಕೆ ಪ್ರಥಮ ಮಹಿಳಾ ರಾಯಭಾರಿಯಾಗಿ ನೇಮಕಗೊಂಡದ್ದು ಮೊದಲ ಸಾಧನೆ, 2001ರಲ್ಲಿ ವಿದೇಶಾಂಗ ವ್ಯವಹಾರಗಳ ಖಾತೆಯಲ್ಲಿ ಪ್ರಥಮ ವಕ್ತಾರೆಯಾಗಿ ನೇಮಕಗೊಂಡದ್ದು ಎರಡನೆಯ ಸಾಧನೆ. ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಆಗಿನ ಪಾಕ್ ಪ್ರಧಾನಿ ಜನರಲ್ ಪರ್ವೇಜ್ ಮುಶರಫ್ ನಡುವೆ ಏರ್ಪಟ್ಟ ಆಗ್ರಾ ಶೃಂಗ ಸಭೆಯ ಸಂದರ್ಭದಲ್ಲಿ ನಿರುಪಮಾ ವಿದೇಶಾಂಗ ಕಾರ್ಯದರ್ಶಿಯ ಹುದ್ದೆಯಲ್ಲಿದ್ದರು. ವಾಷಿಂಗ್ಟನ್ ಡಿ.ಸಿ.ಯಲ್ಲಿಯನ ಭಾರತೀಯ ರಾಯಭಾರಿ ಕಛೇರಿ ಅವರಿಗೆ ಅಪರಿಚಿತವೇನಲ್ಲ. ಅಲ್ಲಿನ ಉಪ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸಿದ ಅನುಭವ ಅವರಿಗಿದೆ. ತಮ್ಮ ಬಿಡುವಿರದ ಕರ್ತವ್ಯದ ನಡುವೆಯೂ ನಿರುಪಮಾಗೆ ಕವಿತೆಯೆಂದರೆ ಆಳವಾದ ಪ್ರೀತಿ. ರೈನ್ ರೈಸಿಂಗ್ ಎಂಬ ಇಂಗ್ಲಿಷ್ ಕವಿತಾ ಸಂಗ್ರಹವನ್ನು ಅವರು ಈಗಾಗಲೇ ಪ್ರಕಟಿಸಿಯೂ ಇದ್ದಾರೆ.

2009ರ ಆಗಸ್ಟ್‌ನಲ್ಲಿ ನಿರುಪಮಾ ಭಾರತದ ದ್ವಿತೀಯ ಮಹಿಳಾ ವಿದೇಶಾಂಗ ಕಾರ್ಯದರ್ಶಿಯಾದರು. ಈ ಉನ್ನತ ಹುದ್ದೆಯಲ್ಲಿದ್ದ ಮೊದಲ ಮಹಿಳೆಯೆಂದರೆ ಚೋಕಿಲಾ ಅಯ್ಯರ್ (2001–02). ಅಮೆರಿಕಕ್ಕೆ ಭಾರತದ ಎರಡನೆಯ ಮಹಿಳಾ ರಾಯಭಾರಿ ಎಂಬ ಹೆಗ್ಗಳಿಕೆ ನಿರುಪಮಾ ಅವರದಾಗಿದೆ. ಮೊದಲ ಮಹಿಳಾ ರಾಯಭಾರಿ ಎಂಬ ಹೆಗ್ಗಳಿಕೆ ನೆಹರು ಅವರ ತಂಗಿ ವಿಜಯಲಕ್ಷ್ಮೀ ಪಂಡಿತ್ ಅವರದು (1949–51).

ನಿರುಪಮಾ ರಾವ್ ಮೂಲತಃ ಕೇರಳದವರಾಗಿದ್ದರೂ ನಮ್ಮ ಕರ್ನಾಟಕದ ಸೊಸೆ. ಅವರು ಕರ್ನಾಟಕ ಸರಕಾರದ ಹಿಂದಿನ ಮುಖ್ಯ ಕಾರ್ಯದರ್ಶಿ ಸುಧಾಕರ ರಾವ್ ಅವರ ಪತ್ನಿ. ಕರ್ನಾಟಕ ಭವನದ ನಿವಾಸಿ ಆಯುಕ್ತರಾಗಿದ್ದ ಸುಧಾಕರ ರಾವ್ ಅವರು ದೆಹಲಿ ಕನ್ನಡಿಗರಿಗೆ ಚಿರಪರಿಚಿತರು.

**ನಿರುಪಮಾ ರಾವ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮಾನಭರಿತ ಅಭಿನಂದನೆಗಳು.**

## ಉಚಿತ ವೈದ್ಯಕೀಯ ತಪಾಸಣೆ

ಜುಲೈ ತಿಂಗಳ 31ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

ನೆನಪು

# ಅಗಲಿದ ಬಹುಮುಖಿ ಸಾಧಕ ಲಿಂಗದೇವರು

ರಂಗಾಯಣದ ನಿರ್ದೇಶಕ ಲಿಂಗದೇವರು ಹಳೆಮನೆ ಅವರನ್ನು ನಾನು ಮೊದಲು ಭೇಟಿಯಾಗಿದ್ದು ಅವರು ತೀರಿಕೊಳ್ಳುವ ಎರಡು ತಿಂಗಳು ಮೊದಲು. ಕಳೆದ ಏಪ್ರಿಲ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಕುವೆಂಪು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಜರುಗಿತ್ತು. ಆರು ಸಂಸ್ಥೆಗಳು ಸೇರಿ ಆಯೋಜಿಸಿದ ಮಹತ್ವದ ಕಾರ್ಯಕ್ರಮಕ್ಕೆ ಲಿಂಗದೇವರು ಹಳೆಮನೆ ಬಂದಿದ್ದರು. ಮೂರನೇ ದಿನ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಕುವೆಂಪು ನಾಟಕಗಳ ಕುರಿತ ಗೋಷ್ಠಿ ಇತ್ತು. ಅಂದು ಲಿಂಗದೇವರು ಕುವೆಂಪು ನಾಟಕಗಳ ವಸ್ತು ಮತ್ತು ತಂತ್ರದ ಕುರಿತು ಮಾತನಾಡಲು ಬಂದಿದ್ದರು. ನಾನು ಆ ಗೋಷ್ಠಿಯ ನಿರ್ವಹಣೆ ಮಾಡಬೇಕಿತ್ತು.

ಲಿಂಗದೇವರು ಬಗ್ಗೆ ಸಾಕಷ್ಟು ತಿಳಿದಿದ್ದರೂ ನಾನು ಮುಖತಃ ಭೇಟಿಯಾಗಿರಲಿಲ್ಲ. ಬೆಳಗಿನ ಉಪಹಾರದ ಸಮಯ ಎದುರುಗೊಂಡ ಲಿಂಗದೇವರ ಬಳಿ ನನ್ನ ಪರಿಚಯ ಹೇಳಿಕೊಂಡೆ. ಕೇಂದ್ರ ಸಚಿವಾಲಯ ಗ್ರಂಥಾಲಯದ ಭಾಷಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಅದು ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದ ಆವರಣದಲ್ಲಿದೆ ಎಂದು ಹೇಳಿದೆ. ಅಷ್ಟರಲ್ಲಿ ಸ್ನೇಹಿತರೊಬ್ಬರು ನನ್ನಲ್ಲಿ ಮಾತನಾಡಲು ತೊಡಗಿದಾಗ ಆ ಕಡೆ ತಿರುಗಿದೆ. ಕೆಲ ನಿಮಿಷಗಳ ಬಳಿಕ ಯಾರೋ ನನ್ನ ಬೆನ್ನು ತಟ್ಟಿದರು. ಹಿಂದಿರುಗಿ ನೋಡಿದಾಗ ಲಿಂಗದೇವರು ನಗುತ್ತಾ 'ಅಲ್ಲ ಮತ್ತೇನಿಲ್ಲ, ನೀವು ಎನ್.ಎಸ್.ಡಿ. ಕ್ಯಾಂಪಸ್‌ನಲ್ಲಿ ಇದ್ದೀರಿ ಅಂತ ನನಗೆ ಇಷ್ಟು ವರ್ಷ ಗೊತ್ತೇ ಆಗಿಲ್ಲ. ನಾನಂತೂ ಎಷ್ಟೋ ವರ್ಷದಿಂದ ಎನ್.ಎಸ್.ಡಿ.ಗೆ ಬರ್ತಾ ಇದ್ದೀನಲ್ಲಾ' ಎಂದರು. ಮುಂದುವರೆದು 'ನಾಳೆ ಎನ್.ಎಸ್.ಡಿ.ಗೆ ಬರಲಿಕ್ಕಿದೆ. ನಿಮ್ಮನ್ನು ಅಲ್ಲಿ ಕಾಣುವೆ' ಎಂದರು. ನನ್ನಂತಹ ಕಿರಿಯನನ್ನು ಲಿಂಗದೇವರು ಅವರಾಗಿಯೇ ಮತ್ತೆ ಕರೆದು ಮಾತನಾಡಿಸಿದ ಬಗೆ ಅಚ್ಚರಿ ತಂದಿತು. ಇದು ಅವರ ನಡವಳಿಕೆಯಲ್ಲಿ ಸಹಜವಾಗಿ ಇರುವ ಸರಳತೆ ಮತ್ತು ಸ್ನೇಹಪರತೆಯ ಪರಿಚಯ ಮಾಡಿಕೊಟ್ಟಿತು. ಅದೇ ಲಿಂಗದೇವರ ಜೊತೆಗಿನ ನನ್ನ ಮೊದಲ ಮತ್ತು ಕೊನೆಯ ಭೇಟಿಯಾಗಿತ್ತು. ಮರುದಿನ ನನ್ನ ಕಛೇರಿಗೆ ಅವರು ಬರಲಿಲ್ಲ.

ಅಂದು ಸಂಘದ ವೇದಿಕೆಯಲ್ಲಿ ಲಿಂಗದೇವರು ಕುವೆಂಪು ಕುರಿತು ನಿರರ್ಗಳವಾಗಿ ಮಾತನಾಡುತ್ತಿದ್ದರು. ವೇದಿಕೆಯ ಹಿಂಬದಿ ನಿರ್ವಾಹಕನಾಗಿ ಒಮ್ಮೆ ಅವರ ಭಾಷಣವನ್ನು ಮೊಟಕುಗೊಳಿಸಲು ಯೋಚಿಸಿದೆ. ವೇದಿಕೆಯಲ್ಲಿದ್ದ ನಾಟಕಕಾರ ಡಾ. ಕೆ.ವೈ. ನಾರಾಯಣಸ್ವಾಮಿ ಅವರು ಮುಂದುವರಿಸಲಿ ಎಂದು ನನಗೆ ಸನ್ನೆ ಮಾಡಿದರು. ನಿಜಕ್ಕೂ ತನ್ಮಯರಾಗಿ ಲಿಂಗದೇವರು ಸುಮಾರು ಒಂದು ತಾಸಿಗೂ ಹೆಚ್ಚು ಮಾತನಾಡಿದರು. ಮಹಾಕವಿ ಕುವೆಂಪು ಅವರ ಮೂಲ ಆಸಕ್ತಿ ನಾಟಕವೇ ಆಗಿತ್ತು ಎಂಬುದನ್ನು ನಿರೂಪಿಸಿದರು. ಮುಂದುವರಿಯುತ್ತಾ ಅವರ ವಿಚಾರಗಳಲ್ಲಿ ಹೊಸ ಹೊಳಹುಗಳು ಗೋಚರಿಸತೊಡಗಿತು.

1973ರಲ್ಲಿ ಭಾರತೀಯ ಭಾಷೆಗಳ ಕೇಂದ್ರಿಯ ಸಂಸ್ಥೆಯಲ್ಲಿ ಭಾಷಾ ತಜ್ಞರಾಗಿ ವೃತ್ತಿ ಆರಂಭಿಸಿದರು. ರಾಜ್ಯದ ಸಂಪನ್ಮೂಲ ಕೇಂದ್ರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಗಲು ಭಾಷಾ ತಜ್ಞರಾಗಿ ಲಿಂಗದೇವರು ಸರಕಾರದ ಒಳಗಿದ್ದು ಶ್ರಮಿಸಿದ್ದರು. ಅವರು ಸೂಕ್ತ ದಾಖಲೆಗಳಿಂದ ಕನ್ನಡ ಭಾಷೆಯ ಹಿರಿಮೆಯ ಬಗ್ಗೆ ಸರಕಾರದ ಗಮನ ಸೆಳೆದರು. ಕನ್ನಡಕ್ಕೆ ಈ ಗೌರವ ಲಭಿಸಿದ ಮೇಲೆ ಭಾಷೆಯ ಬೆಳವಣಿಗೆಗೆ ಮಾಡಬೇಕಾದ ಯೋಜನೆಗಳಿಗೆ ಭಾಷಾ ವಿದ್ವಾಂಸರು ಮತ್ತು ಸರಕಾರದ ನಡುವೆ ಸಂಯೋಜಕರಾಗಿ ಜವಾಬ್ದಾರಿ ವಹಿಸಿದ್ದು ಅವರ ದಕ್ಷತೆಗೆ ಕನ್ನಡಿ ಹಿಡಿದಿದೆ. ಕನ್ನಡಿಗರು ಇದೀಗ ಈ ಸ್ಥಾನಮಾನದ ಪ್ರಯೋಜನ ಪಡೆಯಲು ಲಿಂಗದೇವರು ಇನ್ನಷ್ಟು ಕಾಲ ಬದುಕಬೇಕಿತ್ತು.

ಲಿಂಗದೇವರು ಹಳೆಮನೆ ಅವರ ಬದುಕು ಬಹುಮುಖಿಯಾಗಿ ಹೊರಹೊಮ್ಮಿತ್ತು. ನಾಟಕಕಾರ, ಭಾಷಾ ಶಾಸ್ತ್ರಜ್ಞ, ಸಂಸ್ಕೃತಿ ಚಿಂತಕ, ಆಡಳಿತಗಾರ, ಚಳುವಳಿಗಾರ ಹೀಗೆ ವಿವಿಧ ರೂಪದಲ್ಲಿ ಅವರು ಕಾಣಿಸಿಕೊಂಡರು. ಅವರ ಒಟ್ಟು ಚಿಂತನೆಗಳನ್ನು ಪ್ರಜಾವಾಣಿ ದೈನಿಕದಲ್ಲಿ ಮೂಡಿ ಬಂದ ಅವರ 'ಬೆಳಕು ಬೆರಗು' ಅಂಕಣ ಬರಹದಲ್ಲಿ ಕಾಣಬಹುದು. ನಾಟಕಕಾರರಾಗಿ ಅವರ 'ಚಿಕ್ಕದೇವ ಭೂಪ', ಅಂತೆಂಬರ ಗಂಡ', ಯಾನ್ ಪಾಲ್ ಸಾರ್ತೆಯ ಅನುವಾದಿತ 'ನೆರಳಿಲ್ಲದ ಮನುಷ್ಯರು' ನಾಟಕಗಳು ಅತ್ಯಂತ ಯಶಸ್ವಿ ಕಂಡಿತು. 'ದೇವದಾಸಿ', 'ಮನುಷ್ಯ ಅಂದರೆ ಮನುಷ್ಯಾನೆ' ಸೇರಿದಂತೆ ಬ್ರೆಕ್ಟ್‌ನ ಆರು ಕೃತಿಗಳು ರಂಗಭೂಮಿಯನ್ನು ಶ್ರೀಮಂತಗೊಳಿಸಿದೆ.

ಭಾಷಾ ತಜ್ಞರಾಗಿ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಿರ್ಮಿಸಿದ 'ಭಾಷಾ ಮಂದಾಕಿನಿ' ಕನ್ನಡ ದೃಶ್ಯ ವಿಶ್ವಕೋಶ ಶ್ರೇಷ್ಠ ಕನ್ನಡಿಗರನ್ನು ಅನುಗಾಲ ಸ್ಮರಿಸುವಂತೆ ಮಾಡಿದೆ. ಭಾರತೀಯ ರಂಗಶಿಕ್ಷಣ ಕೇಂದ್ರದ ಗೌರವ ಪ್ರಾಂಶುಪಾಲರಾಗಿಯೂ ಅವರು ದುಡಿದರು. ರಂಗಾಯಣದ ನಿರ್ದೇಶಕರಾಗಿ ಹಲವು ಬದಲಾವಣೆಗಳನ್ನು ತಂದರು. ಬಿ.ವಿ. ಕಾರಂತ ಯುವ ರಂಗೋತ್ಸವವನ್ನು ತಮ್ಮ ಅವಧಿಯಲ್ಲಿ ರಾಜ್ಯಮಟ್ಟಕ್ಕೆ ವಿಸ್ತರಿಸಿದರು. ಮ್ಯಾಗ್ಸಿಮ್ ಗೋರ್ಕಿಯ ಕಾದಂಬರಿ ಆಧಾರಿಸಿದ "ತಾಯಿ" ನಾಟಕವನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಿಂದೆ ಪ್ರಸಿದ್ಧ ಹೋಟೆಲೊಂದರ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದಾಗ "ಕೊನೆಗಾಣದ ಹೋರಾಟ" ನಾಟಕ ಬರೆದು ಪ್ರದರ್ಶಿಸಿದರು. ಈ ನಾಟಕದ ಪರಿಣಾಮ ಸ್ವರೂಪ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಲಿಂಗದೇವರು ಒಳ್ಳೆ ಕವಿಯೂ ಹೌದು. ದೇವನೂರರ 'ಕುಸುಮಬಾಲೆ' ಮತ್ತು 'ದೇವನೂರು ಕತೆಗಳು' ನಾಟಕಗಳ ಗೀತೆಯನ್ನು ರಚಿಸಿದ್ದಾರೆ.

ಲಿಂಗದೇವರು ಭಾಷೆ, ಸಾಹಿತ್ಯ, ಶಿಕ್ಷಣ, ರಂಗಭೂಮಿ ಸೇರಿದಂತೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. ತಮ್ಮ ಸರಳ ಮತ್ತು ಸ್ನೇಹಪರತೆಯಿಂದ ಅಪಾರ ಜನ ಪ್ರೀತಿಯನ್ನು ಗಳಿಸಿಕೊಂಡಿದ್ದರು. ಇದರಿಂದಾಗಿಯೇ ಅಗಲಿದ ಈ ಬಹುಮುಖಿ ಸಾಧಕನ ನಿಧನ ಸಾಂಸ್ಕೃತಿಕ ವಲಯದಲ್ಲಿ ಶೂನ್ಯತೆಯನ್ನು ಸೃಷ್ಟಿಸಿದೆ.

❑ ವೈ ಅವನೀಂದ್ರನಾಥ್ ರಾವ್



ಕುವೆಂಪು ವಿಚಾರಗೋಷ್ಠಿಯಲ್ಲಿ ಮಾತನಾಡುತ್ತಿರುವ ಲಿಂಗದೇವರು ಹಳೆಮನೆ

ದೆಹಲಿ ಕರ್ನಾಟಕ ಸಂಘದಲ್ಲಿ ಏಪ್ರಿಲ್‌ನಲ್ಲಿ ಜರುಗಿದ ಮೂರು ದಿನಗಳ 'ಕುವೆಂಪು ಸಮಗ್ರ ನೋಟ' ಕಾರ್ಯಕ್ರಮದ ಕೊನೆಯ ದಿನ 17.04.2011ರಂದು ಬೆಳಗಿನ ಗೋಷ್ಠಿಯಲ್ಲಿ ಕುವೆಂಪು ಅವರ ನಾಟಕಗಳ ವಸ್ತು ಮತ್ತು ತಂತ್ರ ಕುರಿತಾಗಿ ಸುಮಾರು ಒಂದು ಗಂಟೆಯ ಕಾಲ ವಿದ್ವತ್‌ಪೂರ್ಣ ವಿಚಾರ ಮಂಡಿಸಿದ ಖ್ಯಾತ ಭಾಷಾತಜ್ಞ ಲಿಂಗದೇವರು ಹಳೆಮನೆ ಅವರ ನೆನಪು ದೆಹಲಿ ಕನ್ನಡಿಗರ ಮನಸ್ಸಿನಲ್ಲಿ ಹಚ್ಚ ಹಸಿರಾಗಿರುವಾಗಲೇ ಅವರು ನಿಧನರಾದ ಸುದ್ದಿ ನಿಜಕ್ಕೂ ಆಘಾತ ಉಂಟು ಮಾಡಿತು. ದೆಹಲಿ ಕರ್ನಾಟಕ ಸಂಘಕ್ಕೆ ಯಾವಾಗ ಬೇಕಾದರೂ ನಾಟಕ ತಂಡಗಳನ್ನು ಕಳುಹಿಸಿಕೊಂಡುವ ಹಾಗೂ ನಾಟಕ ತರಬೇತಿ ಶಿಬಿರ ಆಯೋಜಿಸುವ ಆಶ್ವಾಸನೆ ಇತ್ತ ರಂಗಾಯಣದ ನಿರ್ದೇಶಕರಾದ ಹಳೆಮನೆ ಅವರು ಇಷ್ಟು ಬೇಗ ನಮ್ಮನ್ನು ಅಗಲಿದ್ದು ವಿಷಾದದ ಸಂಗತಿ. ಲಿಂಗದೇವರು ಹಳೆಮನೆ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಶ್ರುಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.

# ನೆನಪಿನ ಮನೆಯಿಂದ ಒಂದಿಷ್ಟು. . .


ಎಪ್ಪತ್ತರ ದಶಕದ ಉತ್ತರಾರ್ಧ. ನಾನು ಮೈಸೂರು ಆಕಾಶವಾಣಿಯಲ್ಲಿ ನೌಕರಿ ಮಾಡುತ್ತಿದ್ದೆ. ಆಗ ಸಮುದಾಯದ ಬ್ಯಾನರ್‌ಗಳನ್ನು ಹಿಡಿದು ಕ್ರಾಂತಿಯ ಸ್ಲೋಗನ್ನುಗಳನ್ನು ಮೊಳಗಿಸುತ್ತ ಕೆಲವೇ ಕೆಲವು ವಿಚಾರವಾದಿಗಳ ನಡುವೆ ನನ್ನ ಹಾಗೆ ಕಪ್ಪಗಿದ್ದ ಒಬ್ಬ ಹುಡುಗನನ್ನು ಕಂಡಿದ್ದೆ. ಮೈಬಣ್ಣ ಹಾಗೂ ವಿಚಾರಗಳ ಸಾಮ್ಯತೆ ನಮ್ಮನ್ನು ಹತ್ತಿರದ ಗೆಳೆಯರನ್ನಾಗಿಸಿದವು. ಆ ಹುಡುಗ ನಾಟಕಗಳನ್ನು ಬರೆಯುತ್ತಿದ್ದ, ಆಡಿಸುತ್ತಿದ್ದ. ಕವಿತೆಗಳನ್ನು ಬರೆಯುತ್ತಿದ್ದ. ಸಾಯಿಬಾಬಾ ಬೂದಿಬಾಬಾಗಳ ವಿರುದ್ಧ ಅಬ್ರಹಾಂ ಕೋವೂರ್ ನಡೆಸುತ್ತಿದ್ದ ಸಭೆಗಳಲ್ಲಿ ವೀರಾವೇಶದಿಂದ ಭಾಗವಹಿಸುತ್ತಿದ್ದ. ನನಗಿನ್ನೂ ನೆನಪಿದೆ–ಸಾಯಿಬಾಬಾ ಭಕ್ತರಾಗಿದ್ದ ವಿ.ಕೃ. ಗೋಕಾಕರ ವಿರುದ್ಧ ಘೋಷಣೆಗಳನ್ನು ನಾವಿಬ್ಬರೂ ಒಟ್ಟಿಗೇ ಒಂದು ಸಭೆಯಲ್ಲಿ ಕೂಗಿದ್ದೆವು. ಆಗ ಸಾಯಿಬಾಬಾ ಭಕ್ತರು ಧರ್ಮದೇಟು ಕೊಡಲು ಮುಂದಾದಾಗ ಒಟ್ಟಿಗೇ ಪೇರಿ ಕಿತ್ತಿದ್ದೆವು. ಅಂದು ಸಂಜೆ ನಮ್ಮದು ಅದ್ಭುತ ಪಾರ್ಟಿ! ಸಾಯಿಬಾಬಾ ಭಕ್ತರನ್ನು ರೇಗಿಸಿದ್ದಕ್ಕೆ ಖುಷಿಯೋ ಖುಷಿ! ಅಂದು ನನ್ನ ಸ್ಕೂಟರಿನಲ್ಲಿ ಆ ಹುಡುಗನನ್ನು ಕೂರಿಸಿಕೊಂಡು ಅವನ ಮನೆ ಬಳಿ ಬಿಟ್ಟು ಬಂದಿದ್ದೆ. ಅಲ್ಲಿ ಅವನ ಹೆಂಡತಿ ಲೇಟಾಗಿ ಬಂದದ್ದಕ್ಕೆ ಕ್ಲಾಸು ತೆಗೆದುಕೊಳ್ಳುತ್ತಿದ್ದಂತೆ ನಾನು ಪರಾರಿಯಾಗಿದ್ದೆ. ಬಳಿಕ ಮಾರನೇ ದಿನ ಆ ಹುಡುಗ ಸಿಕ್ಕ. ನನ್ನ ಬೆನ್ನಿಗೆ ನಾಲ್ಕು ಗುದ್ದಿದ. ಪ್ರಶ್ನಾರ್ಥಕವಾಗಿ ನೋಡಿದ ನನಗೆ ಹೇಳಿದ–'ನಿನ್ನಿಂದಾಗಿ ನಾನು ನನ್ನ ಹೆಂಡತಿಯಿಂದ ತಿಂದ ಗೂಸಾಗಳನ್ನು ನಿನಗೆ ಹಿಂದಿರುಗಿಸಿದ್ದೇನೆ'. ಆ ಹುಡುಗ–ನಿನ್ನೆ ನಮ್ಮನ್ನಗಲಿದ ನನ್ನ ಅತ್ಯಂತ ಪ್ರೀತಿಯ ಗೆಳೆಯ ಲಿಂಗದೇವರು ಹಳೆಮನೆ.

ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್‌ನಲ್ಲಿ ಹುದ್ದೆಯಲ್ಲಿದ್ದ ಹಳೆಮನೆ ಮುಂದೆ ಅಪೂರ್ವ ರೀತಿಯಲ್ಲಿ ಬೆಳೆದ. ಅವನ ವಿಶೇಷ ಅವನೊಳಗಿದ್ದ ಜೀವನದ ಬಗೆಗಿನ ಅದಮ್ಯ ಪ್ರೀತಿ. ಆ ಪ್ರೀತಿ ಹೇಗೆ ಅಖಂಡವಾಗಿತ್ತೆಂದರೆ ಅವನಿಗೆ ದ್ವೇಷಿಸುವುದು ತಿಳಿದೇ ಇರಲಿಲ್ಲ. ತನ್ನ ವಿಚಾರ ಒಪ್ಪದವರನ್ನೂ ಪ್ರೀತಿಸಿದ, ತನ್ನನ್ನು ಹೀಗಳೆದವರನ್ನೂ ಗೌರವಿಸಿದ. ಇದರಿಂದ ಇಡೀ ಮೈಸೂರಿನಲ್ಲಿ ಹಳೆಮನೆ ಅಂದರೆ ಎಲ್ಲರಿಗೂ ಅಕ್ಕರೆ. ಆದರೆ ತನ್ನ ವಿಚಾರ ಮಂಡನೆಯಲ್ಲಿ, ತಾನು ನಂಬಿದ್ದ ಸಿದ್ಧಾಂತಗಳಲ್ಲಿ ಅವನು ಏರುಪೇರು ಮಾಡುತ್ತಿರಲಿಲ್ಲ. ಎದುರು ಪಕ್ಷದವರ ಮನಸ್ಸಿಗೆ ನೋವಾಗದಂತೆ ಎಚ್ಚರ ವಹಿಸುತ್ತಿದ್ದ. ಇದನ್ನು ಅವನು ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದ ಎಂದು ನನಗನ್ನಿಸುವುದಿಲ್ಲ. ಇದು ಅವನ ಪಾಲಿಗೆ ಸಹಜ ಪ್ರಕ್ರಿಯೆಯಾಗಿತ್ತು. ಅವನು ಯಾರನ್ನಾದರೂ ಗದರಬೇಕೆಂದುಕೊಂಡರೂ ಅವನ ಬೈಗುಳದ ಸುತ್ತ ಪ್ರೀತಿಯ ಲೇಪನ ಇರುತ್ತಿತ್ತು. ಹಳೆಮನೆಯ ನಾಟಕಗಳು ವಿಚಾರಪ್ರಚೋದಕ ಹಾಗೂ ಬದಲಾವಣೆಯ ಬೀಜವನ್ನು ಬಿತ್ತುವ ತವಕಗಳಿಂದ ಆವೃತವಾದಂಥವು. ಬದಲಾವಣೆ ಸಾಧ್ಯ ಎಂದು ನಂಬಿದ್ದ. ಇದು ಸಾಧ್ಯವಾಗುವುದು ಜನ ವಿದ್ಯಾವಂತರಾದಾಗ ಎಂದು ತಿಳಿದಿದ್ದ. ಹೀಗಾಗಿ ರಾಷ್ಟ್ರೀಯ ಸಾಕ್ಷರತಾ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಂಡ. ವಯಸ್ಕರ ಶಿಕ್ಷಣ ಸಂಪನ್ಮೂಲ ಕೇಂದ್ರದ ಮುಖ್ಯಸ್ಥನಾಗಿ ಹೆಚ್ಚು ಕಡಿಮೆ ಒಂದು ದಶಕ ಶ್ರಮಿಸಿದ. ಈ ಸಂದರ್ಭದಲ್ಲಿ ಹಳೆಮನೆ ವಯಸ್ಕರ ಶಿಕ್ಷಣದ ತಜ್ಞರಾಗಿದ್ದ ನನ್ನ ತಂದೆ ಎಸ್. ರಜತಾದ್ರಿ ಅವರಿಗೆ ಹತ್ತಿರವಾದ. ಇಬ್ಬರೂ ಕೂಡಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರು. ಅನಂತರ ಅವನಿಗೆ ನನ್ನ ಬಗ್ಗೆ ಇದ್ದ ಅಭಿಪ್ರಾಯ ಕೊಂಚ ಬದಲಾಗಿತ್ತು. "ಅಲ್ವೋ ಆನೆ ಹೊಟ್ಟೇಲಿ ಶೂಲಂಗಿ ಹುಟ್ಟಂಗೆ ಅನ್ನೋ ಗಾದೆ ಮಾತು ನಿಜ. ನೀನೆಲ್ಲಿ? ನಿನ್ನಪ್ಪ ಎಲ್ಲಿ ?"–ಎಂದು ನಗಾಡಿದ್ದ. ನನ್ನಪ್ಪನೂ–"ಹಳೆಮನೆ ನಿನ್ನ ಸ್ನೇಹಿತ ಅಂತ ಹೇಳೋಕೇ ಸಾಧ್ಯವಿಲ್ಲ. ಎಂತಹ ಸಭ್ಯ, ಎಂತಹ ಸಜ್ಜನ", ಅನ್ನುತ್ತಿದ್ದರು. ಏಕೆಂದರೆ ಅವನು ನನ್ನಪ್ಪನಿಗೆ ಮರೆಮಾಚಿ ಸಿಗರೇಟು ಸೇದುತ್ತಿದ್ದುದು, ನನ್ನಂತಹವರ ಜತೆ ಗುಂಡು ಹಾಕುತ್ತಿದ್ದುದು ಗಾಂಧೀವಾದಿಗಳಾದ, ವೇಷಭೂಷಣಗಳಲ್ಲಿ ಥೇಟ್ ಅಣ್ಣಾಹಜಾರೆಯಂತಿದ್ದ ನನ್ನಪ್ಪನಿಗೆ ತಿಳಿದಿರಲಿಲ್ಲ. ನಾನು ತಿಳಿಸಲೂ ಇಲ್ಲ.

ಕಾವ್ಯ, ನಾಟಕ, ಸಾಕ್ಷರತೆ–ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದ ಹಳೆಮನೆ ಇತ್ತೀಚೆಗೆ ರಂಗಾಯಣದ ನಿರ್ದೇಶಕನಾಗಿದ್ದ. ಹಳಿ ತಪ್ಪಿ ಗಟಾರ ಸೇರಬೇಕಾಗಿದ್ದ ಸಂಸ್ಥೆಗೆ ಜೀವ ತುಂಬಿ ನವ ಚೈತನ್ಯ ನೀಡಿದ್ದ. ಬಿಜೆಪಿ ಸರ್ಕಾರ ಮಾಡಿದ ಒಂದೇ ಒಂದು ಕಲ್ಯಾಣಕಾರ್ಯ ಏನೆಂದರೆ ಕಮ್ಯುನಿಸ್ಟ್ ತತ್ವಗಳಿಂದ ಪ್ರಭಾವಿತ ಅಂತ ಗೊತ್ತಿದ್ದರೂ ಹಳೆಮನೆಯನ್ನು ರಂಗಾಯಣಕ್ಕೆ ನೇಮಿಸಿದ್ದು. ಹೀಗಾಗಿ ನಾಮ, ವಿಭೂತಿ, ಮುದ್ರೆಗಳ ಕೆಂಗಣ್ಣು ಅವನ ಮೇಲೆ ಬಿದ್ದಿತ್ತು. ಬಹುಶಃ ಈಗ ಹಳೆಮನೆಯ ಶಾಶ್ವತ ಗೈರು ಹಾಜರಿಯಲ್ಲಿ ಈ ನಾಮ, ವಿಭೂತಿಗಳು ರಂಗಾಯಣಕ್ಕೆ ಲಗ್ಗೆ ಇಡಬಹುದು.


ಅಗಲಿದ ಗೆಳೆಯನಿಗೆ ಏನು ಹೇಳುವುದು? ಬಹುಶಃ ನಮ್ಮ ಕಲ್ಪನೆಯ ಪ್ರಕಾರದ ಸ್ವರ್ಗ ಅನ್ನುವುದಿದ್ದರೆ, ಅವನು ಅಲ್ಲಿಗೆ ಹೋಗಿದ್ದರೆ, ಪುರಾತನ ದೇವಲೋಕದಲ್ಲಿ ಕಂಪ್ಯೂಟರ್ ಅನಕ್ಷರತೆ ಇದೆ–ನನ್ನಪ್ಪನ ಜತೆ ಸೇರಿ ಸಾಕ್ಷರತಾ ಆಂದೋಲನ ಆರಂಭಿಸು ಅನ್ನಲೆ? ಅಥವ ಈಗಾಗಲೇ ಅಲ್ಲಿರುವ ಎಂ.ಪಿ. ಪ್ರಕಾಶರ ಜತೆ ಸೇರಿ ದೇವತೆಗಳಿಗೆ ನಾಟಕ ಕಲಿಸು ಅಂತ ಹೇಳಲೆ? ಒಂದು ಮಾತಂತೂ ಸ್ಪಷ್ಟ–ಮೈಸೂರು, ಕರ್ನಾಟಕ, ರಂಗಾಯಣ, ಸಾಕ್ಷರತಾ ಮಿಶನ್ ಅವನಿಲ್ಲದೆ ಬಿಕೋ ಅನ್ನುತ್ತಿವೆ. ಒಬ್ಬ ಪ್ರೀತಿಯ ಗೆಳೆಯ ಖಾಲಿಯಾದುದಕ್ಕೆ ನನ್ನ ಮನಸ್ಸೂ ಗೋಳ್ಗರೆಯುತ್ತಿದೆ.

❑ ಆರ್. ಭರತಾದ್ರಿ


ದಿನಾಂಕ 15, 16 ಮತ್ತು 17 (ಏಪ್ರಿಲ್ 2011) ರಂದು
ಕರ್ನಾಟಕ ಸಂಘದಲ್ಲಿ ನಡೆದ 'ಕುವೆಂಪು ಸಮಗ್ರ ಸಾಹಿತ್ಯ'
ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದು ಒಂದು
ಸದಾ ಕಾಲ ನೆನಪಿಡುವ ಅನುಭವ. ಕರ್ನಾಟಕ ಸಂಘ
ವಿಚಾರ ಸಂಕಿರಣವನ್ನು ಆಯೋಜಿಸಿದ ರೀತಿ, ನಡೆದ
[illegible] ಹೃದಯ ತುಂಬಿದ ಪ್ರತಿಕ್ರಿಯೆಗಳು. ಕರ್ನಾಟಕದ
ಹೊರಗಿನ ಸಂಸ್ಥೆಗಳು ಈ ರೀತಿಯಲ್ಲಿ ಕನ್ನಡಕ್ಕಾಗಿ ದು-
[illegible] ಗಮನಿಸಿದರೆ, ಕನ್ನಡ ಕರ್ನಾಟಕದ
ಹೊರಗೆ ತನ್ನ ಇರುವಿಕೆಯನ್ನು [illegible]
[illegible]. [illegible] ಇಂದಿನ [illegible] ಸಂದರ್ಭ-
ದಲ್ಲಿ [illegible] ಭವಿಷ್ಯಕ್ಕೆ ಇದೆ ಎಂದು ನಾನು ಭಾವಿ
ಸ್ವೇನೆ. ನಿಮ್ಮ ಮುಂದಿನ ಎಲ್ಲ ಚಟುವಟಿಕೆಗಳು ಯಶಸ್ವಿ
ಯಾಗಲಿ ಎಂದು ಹಾರೈಸುತ್ತೇನೆ.
ಲಿಂಗದೇವರು ಹಳೆಮನೆ.

ಭೇಟಿ ನೀಡಿದವರ ಪುಸ್ತಕದಲ್ಲಿ ಸಂಘದ ಬಗ್ಗೆ ಲಿಂಗದೇವರು ಬರೆದ ಸಾಲುಗಳು

# ಕುತುಬ್ ಮೀನಾರ್ ಸೇ..!



ಡಿಯರ್ ಜೀವಿತಾ,

ವೋ ಕ್ಯಾ ಚೀಜ್ ಹೈ ಆಹ ಜಿಸ್ಕೆ ಲಿಯೇ
ಹರ್ ಏಕ್ ಚೀಜ್ ಸೇ ದಿಲ್ ಉಟಾಕರ್ ಚಲೆ!

ಅಂತ ಕೇಳ್ತಾನೆ ನನ್ನ ಮೆಚ್ಚಿನ ಕವಿ ಮೀರ್-ತಖಿ-ಮೀರ್. ಏನೋ ಗೊತ್ತಿಲ್ಲ ಕಳೆದ ವಾರದಿಂದ ಒತ್ತರಿಸಿ ಬರುವ ಊರಿನ ನೆನಪು. ಎಲ್ಲವನ್ನು ತೊರೆದು ಬಂದು ಊರಿನ ಬೆಕ್ಕಿನ ಹಳ್ಳದ ಪಾಳು ನೆಲದಲ್ಲಿ ಒಂದು ಪುಟ್ಟ ಗುಡಿಸಲು ಹಾಕಿಕೊಂಡು ಬದುಕೆಲ್ಲ ಬಾದಶಾಹನಂತೆ ಕಳೆಯಬಾರದಾ ಅನಿಸುತ್ತಿದೆ. ದೆಹಲಿಗೆ ಬಂದು ಬರೋಬ್ಬರಿ ಒಂಬತ್ತು ತಿಂಗಳಾಯಿತು. ಇಷ್ಟು ದಿನದಲ್ಲಿ ನಿನ್ನ ಜೊತೆನೂ ಸರಿಯಾಗಿ ಮಾತಾಡೋಕೆ ಆಗಿಲ್ಲ ಅಂದ ಮೇಲೆ ನಾನು ನಿಜವಾಗಿಯೂ ಬದುಕುತ್ತಿದ್ದಿನಾ ಅಂತ ಅನುಮಾನ ಬರ್ತದೆ. ಇದು ಮಹಾನಗರಗಳ ಹಾಲತ್.

ಮೊದಲು ನೆಲ ಕಸಿದುಕೊಳ್ತದೆ, ಆಮೇಲೆ ನೀರು, ನಂತರ ನಮ್ಮ ಶ್ರಮ ಕೊನೆಯದಾಗಿ ನಮ್ಮಿಂದ ನಮ್ಮನ್ನೇ ಕಸಿದು ಕೊಳ್ತದೆ. ಇಲ್ಲಿಯ ನರಕಯಾತನೆ ಕೂಡ ಬದುಕಿನ ಅಂಗವಾಗಿರೋದು ನಾವು ಹಳ್ಳಿ ಮಂದಿ ಪಟ್ಟಣಗಳೊಂದಿಗೆ ಮಾಡಿಕೊಂಡಿರುವ ಒಂದು ಅಲಿಖಿತ ಒಪ್ಪಂದದಂತಿದೆ. ನಿನಗೆ ಗೊತ್ತಿಲ್ಲ ಜೀವಿ, ಇಲ್ಲಿಯ ಜನ ಎಷ್ಟು ಕೃತಕವಾಗಿರ್ತಾರೆ ಅಂದರೆ "ನಮಸ್ಕಾರ ಸಾರ್.." ಅಂತ ಹೇಳಿದ ಮರುಕ್ಷಣದ ಗುಟ್ಟು ನಮ್ಮಿಂದ ಏನೋ ಕೆಲಸ ಆಗಬೇಕಿದೆ ಅಂತರ್ಥ. ನೋಡೋಕೆ ಟಾಕು-ಟೀಕಾದ ಸೂಟುಧಾರಿಗಳಾದರೂ ಬೃಹತ್ ತೂಗು ರಸ್ತೆಯ ಕೆಳಗೆ ಬಿದ್ದ ಸಣ್ಣ ಬ್ರೆಡ್ಡಿನ ಚೂರೊಂದರ ಮೇಲೆ ಕಣ್ಣಿಟ್ಟ ಹದ್ದಿನ ವರ್ತನೆ ಇವರದು. ಹಾಗಂತ ಎಲ್ಲರು ಹೀಗೆ ಅಂತಲ್ಲ. ಆದರು ಎಲ್ಲೋ ಏನೋ ಕಮ್ಮಿ ಅನಿಸ್ತಿದೆ. ಹಳ್ಳಿಯ ಮಂದಿ ಹಂಗ ಎದೆಯ ಕವಾಟ ತೆರೆದು ಕೊಳ್ಳುವುದೇ ಇಲ್ಲ. ಒಮ್ಮೊಮ್ಮೆ ಅನಿಸ್ತದೆ..

ಮತ್ ಪೂಚ್, ಕಿ ಕ್ಯಾ ಹಾಲ್ ಹೈ ಮೇರಾ ತೇರೆ ಪೀಚೆ
ತೂ ದೇಖ್, ಕಿ ಕ್ಯಾ ರಂಗ್ ಹೈ ತೇರಾ, ಮೇರಾ ಆಗೆ

ಅಂದ ಗಾಲಿಬ್ ನ ಊರೆನಾ ಇದು ಅಂತ. ದಿನವಿಡಿ ದುಡಿದು ಸಂಜೆ ಮೆಹಫಿಲ್‌ಗಳತ್ತ ಮಲ್ಲಿಗೆ ಹಿಡಿದು ಮುಶೈರಾಗಳಿಗೆ ಹೋಗುತ್ತಿದ್ದ ಜನರೇನಾ ಇವರು ಅಂತ ಸಂಶಯ. ಬಿಡು ಇವರಾದರು ಏನು ಮಾಡಿಯಾರು ಪಿ ವಿ ಆರ್, ಮಲ್ಟಿ-ಪ್ಲೆಕ್ಸ್ ಸಿನಿಮಾ ಹಾಲ್‌ಗಳು ಬಂದು ಟಾಕೀಸುಗಳ ಮೂಲ ಉದ್ದೇಶವನ್ನೇ ಮರೆಸಿ ಸಾಕಿಗಳನ್ನು ಸಾಕುವುದು ಕಷ್ಟವಾಗಿ ಮಧು ಬಟ್ಟಲುಗಳನ್ನು ಕುಲ್ಫಿಗಳಿಗೆ ಮಾರಿಕೊಂಡಿರಬೇಕು. ಏನೆಲ್ಲವನ್ನು ಕಬಳಿಸಿದೆ ನಗರ. ಅದೇ ಬರೀ ನೂರು ನೂರೈವತ್ತು ಕಿಲೋಮೀಟರ್ ದೂರದ ಹರಯಾಣ, ಯು.ಪಿ. ಯ ಹಳ್ಳಿಗಳಲ್ಲಿ ಏನು ಆಗ್ತಿದೆ, ಜನ ಹೇಗೆ ಬದುಕು ನಡೆಸುತ್ತಿದ್ದರೆ ಅನ್ನೋ ಅಂದಾಜು ಕೂಡ ಇಲ್ಲ ಇಲ್ಲಿಯ ವೈಟ್-ಕಾಲರ್ ಮಹಾಶಯರಿಗೆ. ಆದರೆ ರಾಮದೇವರಂತ ಬಾಬಾಗಳು ಕೋಟಿಗಟ್ಟಲೆ ಖರ್ಚು ಮಾಡಿ ಹಾಕಿಸಿದ ಪೆಂಡಾಲ್ ನೆರಳಲ್ಲಿ ಕೂತು ಕೈ ತಟ್ಟುವ ಮಧ್ಯಮ ವರ್ಗಕ್ಕೆ ಆತನೊಬ್ಬ ಕ್ರಾಂತಿ ಪುರುಷನಂತೆ ಕಾಣುತ್ತಿರುವುದು ನಮ್ಮ ದೇಶದ ಮಧ್ಯಮಿಗಳಿಗೆ (ಇವರು ಕೆಳಕ್ಕೂ ಇಳಿಯರು; ಮೇಲಕ್ಕೂ ಹತ್ತರು) ಬಂದಿರುವ ದುರ್ಗತಿಯೇ ಇರಬೇಕು.

ಹುಸಿ ಭರವಸೆ ಹುಟ್ಟಿಸಲು ಹುಟ್ಟಿಕೊಂಡಿರುವ ನೂರಾರು ಸೆಲ್ಫ್-ಫೈನಾನ್ಸ್ಡ್ ಅಕಾಡೆಮಿಗಳು, ತಾವೇ ದೇಶಕ್ಕೆ ಅನ್ನ ಕೊಡ್ತಿದಿವಿ ಎಂಬಂತೆ ಪೋಜು ಕೊಡುವ ಸಾಫ್ಟ್ -ವೇರಿಗಳು, ಹಾಲಿ-ಡೇ ಗಳಿಗಾಗಿ ಕಾಯುವ ಮಾಸ್ತರರು, ಬಲೂನಿನಂತೆ ಊದಿಕೊಂಡ ಅವರ ಪುತ್ರಗಣವು ಮತ್ತವರ "All is well" ಎಂಬ ಸಿನಿಮೀಯ ಪ್ರಜ್ಞೆ ನೆನೆದು ಮರುಕ ಹುಟ್ಟುತ್ತೆ. ಅವನ್ಯಾವನೋ ಎಲ್ಲವು ಸರಿ ಇದೆ ಅಂದಕೂಡಲೇ ಇವರೆಲ್ಲ ತಮ್ಮ ಬೂಟಿನ ಲೇಸು, ಟಿ-ಶರ್ಟಿನ ಚಿತ್ರ, ಹೇರ್-ಸ್ಟೈಲ್, ಅವರ ಅಪ್ಪಂದಿರು ಕೊಡಿಸಿದ ಜೀನ್ ಪ್ಯಾಂಟಿನ ಪಾಕೆಟ್ಟು ಅದರೊಳಗಿನ ಮನಿ ನೋಡಿಕೊಂಡು "All is well" ಅಂದು ಬಿಡ್ತಾರೆ. ಇವರಿಗೆ ಹೇಗೆ ಅರ್ಥವಾಗ್ತಿವಿ ಬಿಡು ನಾವೆಲ್ಲಾ.

ಆದರೆ ನನ್ನ ಸಂಕಟ ಏನೆಂದರೆ ಒಂದಿಷ್ಟು ದಿನ ಕಳೆದ ಮೇಲೆ ನಾನು ಹಾಗೆ ಆಗ್ಬಿಟ್ರೆ ಏನ್ ಗತಿ ಅಂತ. ಏನೋ ಗೊತ್ತಿಲ್ಲ ಜೀವಿ..

ನಾ ಮರೆತಿಲ್ಲ ನಿನ್ನ ಹಳ್ಳಿ
ನೆನಪು ಬರ್ತೈತೆ ಹೊಳ್ಳಿ ಹೊಳ್ಳಿ
ಹುಡುಗಾಟಾದ ನಿನ್ನ ಚಾಳಿ
ಹಾದಿ ಆಡಿದ ಆ ಓಕಳಿ

ಇಂಥ ದೊಡ್ಡ ಊರಿನ ದೆವ್ವದಂಥ ರಸ್ತೆಯಲ್ಲೂ ನನ್ನೂರಿನ ಬಂಡಿದಾರಿ ಕಣ್-ಮುಂದೆ ಹಾದು ಹೋಗ್ತದೆ. ಒಬ್ಬ ಹುಡುಗನಾಗಿ ಒಂದಿಷ್ಟು ವರ್ಷ ಕೆಲಸದ ಮೇಲೆ ಈ ದೂರದ ಊರಿಗೆ ಬಂದಿರೋ ನನಗೆ ಹೀಗೆ ಅನಿಸಬೇಕಾದ್ರೆ ಇನ್ನು ನಾಳೆ ನಿನಗೆ ಮದ್ವೆ ಆಗಿ, ಹಳ್ಳದ ಹೊಲ, ಮನೆ, ಹಿತ್ತಲು, ಹನುಮನ ಗುಡಿ, ನೀವು ಗೆಳತಿಯರೆಲ್ಲ ಸೇರುತ್ತಿದ್ದ ಮೀಟಿಂಗ್ ಪಾಯಿಂಟ್ ಟೀಚರಮ್ಮನ ಮನೆ, ದಿನಾಲು ನೀರಿಗೆಂತ ಹೋಗಿ ನಗಾಡಿ ಬರೋ ಬಾವಿಕಟ್ಟೆ, ಮಾವಿನ ತೋಪು, ನಿನ್ನ ಕೈ ಸ್ಪರ್ಶದಿಂದ ಸಿಂಗಾರವಾಗುತ್ತಿದ್ದ ಅಂಗಳ, ಮರ ಹತ್ತಿ ಕೂಡೋ ಕೋಳಿ ಮರಿ, ಮನೆ ಪಕ್ಕದ ಜಿಗರಿ ಗೆಳತಿಯರು ಅಬ್ಬ ಇಷ್ಟೆಲ್ಲ ಬಿಟ್ಟು ಹೋಗ್ಬೇಕು ಅಂದರೆ ಎಷ್ಟು ಕಷ್ಟ ಆಗಬೇಡ. ಮೇಷ್ಟ್ರು ನಾಡಿದ್ದು ಜರ್ಮನಿಗೆ ಹೋಗ್ತಿದಾರೆ. ನಾನಿಲ್ಲಿ ಅದು ಇದು ಓದ್ತಾ ಕಾಲ ಕಳಿತಿದ್ದೀನಿ. ಆದರೆ ಜೀವ ಮಾತ್ರ ಊರಿನ ಕಡೆ ಎಳಿತಿದೆ.

ಸೂಜಿ ಹಿಂದ ದಾರದ್ಹಂಗ
ಕೊಳ್ಳದೊಳಗ ಜಾರಿದ್ಹಂಗ
ಹೋತ ಮನಸು ಬಾರಾದ್ಹಂಗ
ಹಿಂದ ನೋಡದ
ಗೆಳತಿ ಹಿಂದ ನೋಡದ..

ಅಂತ ಬೇಂದ್ರೆ ಅಜ್ಜ ಬರೆದ ಭಾವುಕದ ಸಾಲು ನೆನಪಾಗ್ತದ. ಕೆಲಸಕ್ಕೆ ತಡ ಆಗ್ತದ ಹೋಗ್ತೀನಿ.

If Meer continues so loudly to weep
How can his neighbour possibly sleep?

ಬಹುಶ ಮೀರ್ ಬದುಕಿದ್ದರೆ ಈ ಸಾಲುಗಳನ್ನು ಬರೆಯುತ್ತಲೇ ಇರಲಿಲ್ಲ. ಬಿಡುವಿದ್ದಾಗ ಪತ್ರ ಬರೀ, ಅಜ್ಜ-ಅಜ್ಜಿ ಮನೆಯವರಿಗೆಲ್ಲ ನಮಸ್ಕಾರ ತಿಳಿಸು.

ರಮೇಶ್ ಅರೋಲಿ, ದೆಹಲಿ

## ಕೃತಿ ಬಿಡುಗಡೆ

ಡಾ. ಜಿ.ಎ. ಬಿರಾದಾರ ಅವರ ಇಂಗ್ಲಿಷ್ ಕೃತಿ Mahatma Gandhi's Campaign against Untouchability in Karnataka ಬಿಡುಗಡೆ ದಿನಾಂಕ 16/07/2011 ರ ಶನಿವಾರದಂದು ಸಮಯ : 5.30ಕ್ಕೆ ಸ್ಥಳ : ಗಾಂಧಿ ಪೀಸ್ ಫೌಂಡೇಶನ್, ದೀನ್ ದಯಾಲ್ ಉಪಾಧ್ಯಾಯ ಮಾರ್ಗ, ನವದೆಹಲಿ

## ಬೇಸಿಗೆ ರಜ-ಮಜ

ರಜಕ್ಕೆ ಊರಿಗೆ ಹೋಗಿ ಬಂದ್ರಾ? ಎಲ್ಲೆಲ್ಲ ಹೋಗಿದ್ರಿ? ಏನು ವಿಶೇಷ? ಊರಿಂದ ಬಂದ್ಮೇಲೆ ಏನನ್ನಿಸ್ತಾ ಇದೆ? ನಿಮ್ಮೂರು ಚಂದವೋ, ದೆಹಲಿ ಚಂದವೋ? ನಿಮ್ಮ ರಜದ ಅನುಭವವನ್ನು ಜುಲೈ 25ರ ಒಳಗಾಗಿ ಅಭಿಮತದ ಅರ್ಧಪುಟಕ್ಕೆ ಮೀರದಂತೆ ಬರೆದು ಕಳಿಸಿ.

# ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು,

ಮತ್ತು

## ದೆಹಲಿಯ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನ (ATTY)

ನವದೆಹಲಿಯಲ್ಲಿ ಆಯೋಜಿಸುವ

# ರಾಜಧಾನಿಯಲ್ಲಿ ಯಕ್ಷಗಾನ–ಪ್ರಾತ್ಯಕ್ಷಿಕೆ, ಪ್ರದರ್ಶನ, ತಾಳಮದ್ದಳೆ ಪಸರಣ–2011 (ರಾಯಪ್ರತಾಪ–2011)

## ದಿನಾಂಕ 4, 5, 6, 7, ಆಗಸ್ಟ್ 2011

ರಾಜಧಾನಿಯಲ್ಲಿ ಹಿಂದೆಂದೂ ನೋಡಿರದ ಅಪೂರ್ವ ಕಲಾಸಮಾವೇಶ

**ಎಲ್ಲರಿಗೂ ಆದರದ ಸ್ವಾಗತ**

ಕುಂಬಳೆ ಸುಂದರ ರಾವ್, ಅಧ್ಯಕ್ಷರು
ಎಂ.ಮುನಿರಾಜು, ರಿಜಿಸ್ಟ್ರಾರ್
(ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು)

ಸರವು ಕೃಷ್ಣ ಭಟ್, ನಿರ್ದೇಶಕರು
ಶ್ರೀಮತಿ ವಿದ್ಯಾ ಕೋಳ್ಯೂರು, ನಿರ್ದೇಶಕರು
(ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನ, ನವದೆಹಲಿ)

## ಕಾರ್ಯಕ್ರಮಗಳ ವಿವರ:

**ದಿನಾಂಕ:** 4, ಆಗಸ್ಟ್ 2011, ಗುರುವಾರ, ಸಂಜೆ: 6.30
ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ.

**ಉದ್ಘಾಟನಾ ಸಮಾರಂಭ**

**ಯಕ್ಷಗಾನ – ಭಸ್ಮಾಸುರ ಮೋಹಿನಿ** (ಬಡಗುತಿಟ್ಟು)
**ಹಿಮ್ಮೇಳದಲ್ಲಿ:** ಸರ್ವ ಶ್ರೀ ಕೊಳಗಿ ಕೇಶವ ಹೆಗಡೆ, ವಿಘ್ನೇಶ್ವರ ಕೆಸರಗೊಪ್ಪ, ಸುನಿಲ್ ಭಂಡಾರಿ
**ಪಾತ್ರವರ್ಗದಲ್ಲಿ:** ಚಿಟ್ಟಾಣಿ ರಾಮಚಂದ್ರ ಹೆಗಡೆ, ಚಿಟ್ಟಾಣಿ ಸುಬ್ರಹ್ಮಣ್ಯ ಹೆಗಡೆ, ನೀಲಕೋಡು ಶಂಕರ ಹೆಗಡೆ, ಎಲಂಪಳ್ಳಿ ಜಗನ್ನಾಥ, ನಗರ ವೇಣುಗೋಪಾಲ, ಶ್ರೀಧರ ಭಟ್ಟ ಕಾಸರಕೋಡು, ಮಂಜು ಗೌಡ
ತದನಂತರ ಭೋಜನ

**ದಿನಾಂಕ:** ಆಗಸ್ಟ್ 5, 2011, ಶುಕ್ರವಾರ ಬೆಳಗ್ಗೆ 10.00ರಿಂದ 1.00
ಸ್ಥಳ : ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ

**ಯಕ್ಷಗಾನ ಪ್ರಾತ್ಯಕ್ಷಿಕೆ**

ಮಧ್ಯಾಹ್ನ 2.00 ರಿಂದ 5.00
ಸ್ಥಳ: ದೆಹಲಿ ವಿಶ್ವವಿದ್ಯಾಲಯ

**ಯಕ್ಷಗಾನ ಪ್ರಾತ್ಯಕ್ಷಿಕೆ**

ಸಂಜೆ 6.00 ಗಂಟೆಗೆ
ಸ್ಥಳ: ದೆಹಲಿಯ ಕರ್ನಾಟಕ ಸಂಘದ ಸಭಾಂಗಣ

**"ಕೃಷ್ಣ ಪಾರಿಜಾತ"**

ತದನಂತರ ಭೋಜನ

**ದಿನಾಂಕ:** 6, ಆಗಸ್ಟ್, 2011 ಶನಿವಾರ, ಬೆಳಗ್ಗೆ 10.30ರಿಂದ 12.30

**ಸ್ತ್ರೀಪಾತ್ರಗಳ ಪ್ರಾತ್ಯಕ್ಷಿಕೆ**

ತೆಂಕು–ಬಡಗಿನ ಸುಪ್ರಸಿದ್ಧ ಕಲಾವಿದರಿಂದ
ಮಧ್ಯಾಹ್ನ 12.30ರಿಂದ 1.30–ಭೋಜನ
ಮಧ್ಯಾಹ್ನ 1.30 ರಿಂದ ಸಂಜೆ 4.00ರ ವರೆಗೆ

**ಯಕ್ಷಗಾನ–ತಾಳ ಮದ್ದಳೆ**

ತದನಂತರ ಉಪಾಹಾರ
ಸಂಜೆ 4.30ರಿಂದ ರಾತ್ರಿ 8.00 ಗಂಟೆಯ ತನಕ

**ಯಕ್ಷಗಾನ– ಸುಧನ್ವ ಮೋಕ್ಷ (ತೆಂಕು ತಿಟ್ಟು)**

ಹಿಮ್ಮೇಳದಲ್ಲಿ: ಸರ್ವಶ್ರೀ ಪುತ್ತಿಗೆ ರಘುರಾಮ ಹೊಳ್ಳ, ಪದ್ಯಾಣ ಶಂಕರನಾರಾಯಣ ಭಟ್, ಅಡೂರು ಗಣೇಶ ರಾವ್, ಪದ್ಯಾಣ ಜಯರಾಮ ಭಟ್
ಮುಮ್ಮೇಳದಲ್ಲಿ: ಡಾ. ಕೋಳ್ಯೂರು ರಾಮಚಂದ್ರ ರಾವ್, ಸೂರಿಕುಮೇರಿ ಗೋವಿಂದ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ಸಿದ್ದಕಟ್ಟೆ ಸದಾಶಿವ ಶೆಟ್ಟಿಗಾರ್, ಮಹೇಶ್ ಮಣಿಯಾಣಿ ದೊಡ್ಡತೋಟ, ಬೇಗಾರ್ ಶಿವಕುಮಾರ್, ಚಂದ್ರಶೇಖರ ಧರ್ಮಸ್ಥಳ, ಪದ್ಮನಾಭ ಶೆಟ್ಟಿ.
ಚೌಕಿ ಸಹಕಾರ: ವೆಂಕಟೇಶ ಆಚಾರ್ಯ, ನಾರಾಯಣ ಶೆಟ್ಟಿಗಾರ್.
ತದನಂತರ ಭೋಜನ

**ದಿನಾಂಕ:** ಆಗಸ್ಟ್ 7, 2011 ರವಿವಾರ, ಬೆಳಗ್ಗೆ 10.30ರಿಂದ 1.30
ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ

**ನವರಸ ಸಂಭ್ರಮ**

ಯಕ್ಷಗಾನದಲ್ಲಿ ಪ್ರಕಟವಾಗುವ ರಸ–ಭಾವಗಳ ಪ್ರಾತ್ಯಕ್ಷಿಕೆ
ಮಧ್ಯಾಹ್ನ 1.30ರಿಂದ 2.00 : ಭೋಜನ
ಮಧ್ಯಾಹ್ನ 2.00ರಿಂದ 3.30

**ಯಕ್ಷಗಾನ ಪ್ರದರ್ಶನ**

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಿಂದ
ಸಂಜೆ 3.30ರಿಂದ 4.00 : ಚಹ ವಿರಾಮ
ಸಂಜೆ 4.00ರಿಂದ 5.00

**ಸಮಾರೋಪ ಸಮಾರಂಭ**

ಸಂಜೆ 5.00ರಿಂದ ಅಮೋಘ ಯಕ್ಷಗಾನ ಪ್ರದರ್ಶನ

**ತಾಮ್ರಧ್ವಜ ಕಾಳಗ (ತೆಂಕು ತಿಟ್ಟು)**

**ಗದಾಯುದ್ಧ (ಬಡಗು ತಿಟ್ಟು)**

ತದನಂತರ ಭೋಜನ

Karnataka Yakshagana Bayalata Academy, Bangalore and Academy of Thenku Thittu Yakshagana (ATTY), New Delhi jointly organise a festival of Yakshagana Shows, Talamaddale, & Lecture Demonstrations in the Capital City of Delhi during 4th to7th Aug, 2011. It is a rare opportunity to witness various aspects of Yakshagana. For more details contact: Dr P. Bilimale: 9811733378, Vidya Kolyur: 9312573336, S K Bhat: 9811628627.

All are Cordially Invited.

# ಪೇಂಟಿಂಗ್ ನನ್ನ ಮನಸ್ಸಿನ ಕ್ಯಾನ್ವಾಸ್...



**ದೆಹಲಿ ಕನ್ನಡಿಗ ಖ್ಯಾತ ಯುವ ಕಲಾವಿದ ಮಂಜುನಾಥ ಕಾಮತ್ ಅವರಿಗೆ ಪ್ರತಿಷ್ಠಿತ RAZA ಪುರಸ್ಕಾರ ಲಭಿಸಿದೆ. ಪ್ರಸಿದ್ಧ ಭಾರತೀಯ ಕಲಾವಿದ ಸೈಯದ್ ಹೈದರ್ ರಾಜಾ ಅವರ ಹೆಸರಿನಲ್ಲಿ ಜವಹರಲಾಲ್ ದಾರ್ದ ಫೌಂಡೇಶನ್ ಕಲೆ ಹಾಗೂ ಯುವ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ನೀಡುವ ಈ ಪುರಸ್ಕಾರ, ರೂ. 5 ಲಕ್ಷ ಬಹುಮಾನವನ್ನು ಹೊಂದಿದೆ. ವ್ಯಂಗ್ಯಚಿತ್ರಕಾರನ ದೃಷ್ಟಿಕೋನ, ವಿನ್ಯಾಸಕಾರನ ಸೂಕ್ಷ್ಮ ಕಲಾವಂತಿಕೆ, ಕಲೆಗಾರನ ಕಲಾನೈಪುಣ್ಯತೆಯೊಡನೆ ಅಮೂರ್ತ ಭಾವನೆಗಳಿಗೆ ಮೂರ್ತ ಸ್ವರೂಪವನ್ನು ವಿಭಿನ್ನವಾಗಿ ತೆರೆದಿಡುವ ಅಪ್ರತಿಮ ಪ್ರತಿಭಾವಂತ ಕಲಾವಿದ ಮಂಜುನಾಥ ಕಾಮತ್ ಅವರು ಈಗಾಗಲೇ ಭಾರತೀಯ ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಕರ್ನಾಟಕದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳುತ್ತಾ ನಿರಂತರ ಸಹಕಾರ ನೀಡುತ್ತಿರುವ ಕಾಮತ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಈ ಸಂದರ್ಭದಲ್ಲಿ ರಾಕೇಶ್ ನಡುಜಾರು ಅವರು ಕಾಮತ್ ಅವರೊಂದಿಗೆ ಅಭಿಮತಕ್ಕಾಗಿ ನಡೆಸಿದ ಸಂದರ್ಶನ ಇಲ್ಲಿದೆ...**

***ನೀವು ಕಲಾಕ್ಷೇತ್ರದತ್ತ ಆಕರ್ಷಿತರಾಗಲು ಕಾರಣವೇನು?***

ನನಗೆ ಬಾಲ್ಯದಿಂದಲೂ ಕಲೆಯ ಬಗ್ಗೆ ತುಂಬಾ ಕುತೂಹಲ ಹಾಗೂ ಆಸಕ್ತಿ ಇತ್ತು. ನಾನು ಚಿಕ್ಕವನಿರುವಾಗ ಬೇರೆ ಮಕ್ಕಳೆಲ್ಲ ಕ್ರಿಕೆಟ್ ಇತ್ಯಾದಿ ಆಟ ಆಡುತ್ತಿದ್ದರೂ ಕೂಡ ನಾನು ಪೇಪರ್ ಮತ್ತು ಮಣ್ಣಲ್ಲೇ ಜಾಸ್ತಿ ಆಡುತ್ತಿದ್ದೆ. ನನ್ನನ್ನು ಅಪ್ಪ ಅಮ್ಮ ಎಲ್ಲಿಗಾದರು ಕರೆದುಕೊಂಡು ಹೋದರೆ ನಾನು ಮೂರ್ತಿ ಅಥವಾ ಕಲಾಕೃತಿಗಳನ್ನು ತೆಗೆದುಕೊಳ್ಳುತ್ತಿದೆ. ಆ ಅಭ್ಯಾಸವನ್ನು ನಾನು ಈಗಲೂ ಮುಂದುವರಿಸಿದ್ದೇನೆ. ಈಗ ಇಂತಹ ವಸ್ತುಗಳಿಂದ ನಮ್ಮ ಮನೆ ತುಂಬಿ ಹೋಗಿದೆ. ನಾನು ಚಿಕ್ಕವನಾಗಿರುವಾಗ ನನಗೆ ಮೂರ್ತಿ ಅಥವಾ ಇನ್ನಿತರ ಕಲಾಕೃತಿಗಳನ್ನು ಕೊಟ್ಟರೆ ಮಾತ್ರ ಖುಷಿಯಾಗುತ್ತಿತ್ತು. ಮನೆಯವರ ಪ್ರೋತ್ಸಾಹ ಅದರಲ್ಲೂ ತಂದೆಯ ಪ್ರೋತ್ಸಾಹ ಅದ್ಭುತವಾಗಿತ್ತು. ಅವರು ಹಂಚಿನ ಫ್ಯಾಕ್ಟರಿಯಿಂದ ಮಣ್ಣು ತಂದು ಕೊಡುತ್ತಿದ್ದರು. ಅವರಿಗೂ ಈ ಕಲೆಯಲ್ಲಿ ಆಸಕ್ತಿಯಿತ್ತು. ನಾನು ಮತ್ತು ನನ್ನ ತಂದೆ ಸ್ನೇಹಿತರಂತಿದ್ದೇವೆ. ನಾನು ಊರಿಗೆ ಹೋದಾಗ ಹಳೆಯ ಮನೆ ಕೆಡುವುತ್ತಿದ್ದರೆ ಅಲ್ಲಿಗೆ ಹೋಗಿ ಹಳೆಯ ವಸ್ತುಗಳನ್ನು ಸಂಗ್ರಹಿಸಲು ಶುರು ಮಾಡುತ್ತೇನೆ. ಮುಂದೆ ಸಿಗೋದಿಲ್ಲ ಅನ್ನುವ ಭಯ. ಈ ರೀತಿಯ ಹಳೆಯ ಸಂಗ್ರಹ ನನ್ನ ಈ ಕಲೆಗೆ ಕೊಂಡಿಯ ರೀತಿಯಲ್ಲಿ ಕೆಲಸ ಮಾಡುತ್ತಿದೆ.

***ನಿಮ್ಮ ಕಲಾ ಪಯಣ ಹೇಗಿತ್ತು? ಹೇಗಿದೆ?***

ಮೈಸೂರಿನ ಚಾಮರಾಜೇಂದ್ರ ಅಕಾಡೆಮಿ ಆಫ್ ವಿಶ್ಯುಯಲ್ ಆರ್ಟ್ಸ್‌ನಲ್ಲಿ 1989–94ರಲ್ಲಿ ಶಿಲ್ಪಕಲೆಯಲ್ಲಿ ಪದವಿ ಪಡೆದ ಬಳಿಕ ನನ್ನ ಕಲಾ ಪಯಣವನ್ನು ಮುಂದುವರಿಸಲು ಊರು ಬಿಟ್ಟು ಹೋಗುವುದು ಅನಿವಾರ್ಯವಾಗಿತ್ತು. ನಾನು ಮಂಗಳೂರಿಗೆ ಹೋಗಿದ್ದರೆ ಯಾವುದಾದರೂ ಸಣ್ಣ ನೌಕರಿ ಪಡೆದು ಅಲ್ಲೇ ನೆಲೆ ನಿಲ್ಲುತ್ತಿದ್ದೆ. ಮನೆಯಲ್ಲಿ ನಾನು ಒಬ್ಬನೆ ಮಗ... ಆದ್ದರಿಂದ ನಾನು ಮನೆಯಲ್ಲಿ ಹೇಳದೇ ಕೇಳದೆ ದೆಹಲಿಗೆ ಓಡಿ ಬಂದೆ. ಆಗ ನನ್ನ ಜೇಬಲ್ಲಿದ್ದದ್ದು ಕೇವಲ 300 ರೂ! ಅದು 1994ರ ಇಸವಿ. ನಾನು ಇಲ್ಲಿಗೆ ಬಂದು ದೆಹಲಿ ಕಾಲೇಜ್ ಆಫ್ ಆರ್ಟ್ಸ್‌ನಲ್ಲಿ ಪೇಂಟಿಂಗ್‌ಗೆ ಆಪ್ಲೈ ಮಾಡಿದ್ದೆ. ಆದರೆ ನಾನು ಕಲಿತಿದ್ದದ್ದು ಶಿಲ್ಪಕಲೆ. ಆದ್ದರಿಂದ ಅಲ್ಲಿ ಸೀಟ್ ಸಿಗುವ ಸಾಧ್ಯತೆ ಇರಲಿಲ್ಲ. ಇನ್ನು ಇದರ ಉಸಾಬರಿಯೇ ಬೇಡ ನಿರ್ಧರಿಸಿದೆ. ಆದರೆ ಹೊಟ್ಟೆಗೆ ಏನು ಮಾಡೋದು? ಮನೆಯಲ್ಲಿ ನಯಾಪೈಸೆ ಕೇಳೋದಿಲ್ಲ ಅಂತ ನಿರ್ಧರಿಸಿ ಆಗಿತ್ತು. ಆಗ ಯಾರೋ ಹೇಳಿದರು ನೀನು ಟೀ ಶರ್ಟ್ ಪೇಂಟ್ ಮಾಡಿದರೆ ದಿನಕ್ಕೆ 75 ರೂ ಸಂಪಾದಿಸಬಹುದು ಅಂತ. ನಾನು ಹಾಗೇ ಮಾಡಿ ಇಲ್ಲೇ ಇರುವ ಪೀಪಲ್ ಟ್ರೀ ಅನ್ನುವ ಅಂಗಡಿಗೆ ಮಾರುತ್ತಿದ್ದೆ. ಅಷ್ಟರಲ್ಲಿ ಟೈಂಮ್ಸ್ ಆಫ್ ಇಂಡಿಯಾದಲ್ಲಿ ಇಲಸ್ಟ್ರೇಟರ್ ಜಾಬ್ ಇದೆ ಎಂದು ಗೊತ್ತಾಯಿತು. ನಾನು ಟೈಂಮ್ಸ್ ಕಚೇರಿಗೆ ಹೋಗಿ ನನ್ನಲ್ಲಿ ಪೋರ್ಟ್‌ಫೊಲಿಯೋ ಏನೂ ಇಲ್ಲ, ಕೆಲಸ ಕೊಡೋದಾದ್ರೆ ಕೊಡಿ, ಮೂರು ತಿಂಗಳ ಟ್ರೈನಿ ಪಿರಿಯೆಡ್ ಆದ್ರೂ... ಆಯಿತು ಅಂದೆ.





ಒಂದೇ ತಿಂಗಳಲ್ಲಿ ಪರ್ಮನೆಂಟ್ ಮಾಡಿದರು. ಅಲ್ಲಿ ಬೆಳಗಿನ ಜಾವ 4 ಗಂಟೆ ತನಕ ಕೂತು ಕಂಪ್ಯೂಟರ್ ಸಂಬಂಧಿ ವಿಷಯಗಳನ್ನು ಕಲಿತೆ. ಚಾರ್ಲ್ಸ್ ವ್ಯಾಲೇಸ್ ಸ್ಕಾಲರ್‌ಶಿಪ್ ಸಹಾಯದಿಂದ ಲಂಡನ್‌ನ ಆರ್ಟ್ ಎಂಡ್ ಡಿಸೈನ್ ಶಾಲೆಯಲ್ಲಿ ಕಲಾಭ್ಯಾಸ ಮುಂದುವರಿಸಿದೆ.

***ನಿಮಗೆ ಸಂದ ಪುರಸ್ಕಾರಗಳು?***

ಚಾರ್ಲ್ಸ್ ಪುರಸ್ಕಾರ, ಬಳಿಕ ಮೊನ್ನೆ ತಾನೇ ಸಿಕ್ಕ RAZA ಫೌಂಡೇಶನ್‌ನ ಪ್ರಶಸ್ತಿ. ನನಗೆ ಪ್ರಶಸ್ತಿಗಳ ಮೇಲೆ ನಂಬಿಕೆಯಿಲ್ಲ.

***ನಿಮ್ಮ ಇತರ ಹವ್ಯಾಸಗಳು?***

ಸಂಗೀತ ಕೇಳುವುದು. ನಾನು ಕಲೆಯನ್ನು ಎಷ್ಟು ಆಸ್ವಾದಿಸುತ್ತೇನೋ ಅಷ್ಟೇ ಸಂಗೀತವನ್ನು ಕೂಡ ಆಸ್ವಾದಿಸುತ್ತೇನೆ.

***ನೀವು ನಿಮ್ಮ ಪೇಂಟಿಂಗ್‌ಗಳಿಗೆ ಹೇಗೆ ಪ್ರೇರಣೆ ಪಡೆಯುತ್ತೀರಿ?***

ನನ್ನ ಪೇಂಟಿಂಗ್‌ಗಳಿಗೆ ನಾನು ನೋಡುವ ಪ್ರತಿಯೊಂದು ವಿಷಯವೂ ಪ್ರೇರಣೆ ಎನ್ನಬಹುದು. ನಾನು ಊರಿಗೆ ಹೋದಾಗ ನಾನು ಭೇಟಿ ನೀಡುವ ಪ್ರದೇಶ, ಸಂದರ್ಭ, ನನ್ನ ನೋವು–ನಲಿವು... ಹೀಗೆ ಎಲ್ಲವನ್ನೂ ನಾನು ನನ್ನ ಪೇಂಟಿಂಗ್‌ನಲ್ಲಿ ಬಳಸಿಕೊಳ್ಳುತ್ತೇನೆ. ನನಗೆ ಪೇಂಟಿಂಗ್ ಪ್ರತಿಯೊಂದನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮ.

***ಕರ್ನಾಟಕದ ಬದುಕು– ಸಂಸ್ಕೃತಿಯನ್ನು ನಿಮ್ಮ ಚಿತ್ರಗಳಲ್ಲಿ ಕಾಣಬಹುದೇ?***

ನನ್ನ ಪೇಂಟಿಂಗ್‌ನಲ್ಲಿ ಕರ್ನಾಟಕದ ಬದುಕು–ಸಂಸ್ಕೃತಿ ಬಂದೇ ಬರುತ್ತದೆ. ಆದರೆ ಅದನ್ನು ಗುರುತಿಸುವುದು ಕಲಾ ರಸಿಕನ ಕರ್ತವ್ಯ. ಇಲ್ಲಿ ಆರ್ಟ್ ಲಿಟ್ರೇಟ್ ಮುಖ್ಯವಾಗುತ್ತದೆ.

***ಅಂದರೆ ನಾವು ಕಲೆಯನ್ನು ಆಸ್ವಾದಿಸಲು ಕಲಾವಿದನ ಹಿನ್ನೆಲೆ ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ ಎನ್ನುತ್ತೀರಾ?***

ನನ್ನ ಪ್ರಕಾರ ಇದು ಮುಖ್ಯವಲ್ಲ. ಉದಾಹರಣೆಗೆ ನಾನು ಲಂಡನ್‌ಗೆ ಹೋಗಿ ಅಲ್ಲಿರುವ ಒಂದು ಪೇಂಟಿಂಗ್ ನೋಡುತ್ತೇನೆ. ಅದು ನನ್ನ ಆಸಕ್ತಿಯನ್ನು ಕೆರಳಿಸಿದರೆ ನಾನದರ ಆಳಕ್ಕೆ ಹೋಗುತ್ತೇನೆ. ಆ ಸಂದರ್ಭದಲ್ಲಿ ನಾನು ಆ ಪೇಂಟಿಂಗ್ ಚಿತ್ರಿಸಿದವನ ಹಿನ್ನೆಲೆ ತಿಳಿದುಕೊಳ್ಳಲು ಶುರು ಮಾಡುತ್ತೇನೆ. ಅಂದರೆ ಒಂದು ಕಲಾಕೃತಿಯನ್ನು ಆಸ್ವಾದಿಸಿ ನಂತರ ನಾವು ಅದರಲ್ಲಿನ ವಿಷಯಕ್ಕೆ ಬರುತ್ತೇವೆ. ಅದ್ದರಿಂದ ಕಲೆಯ ಅನುಭವ ಮುಖ್ಯ.

***ಆಧುನಿಕ ಪೇಂಟಿಂಗ್ ವಿಧಾನವನ್ನು ಭಾರತೀಯ ಕಲಾ ರಸಿಕರು ಅರ್ಥ ಮಾಡಿಕೊಳ್ಳುವಲ್ಲಿ ಸೋತಿದ್ದಾರೆ ಎಂಬ ಮಾತಿದೆ. ಇದನ್ನು ನೀವು ಒಪ್ಪುತ್ತೀರಾ?***

ಭಾರತೀಯರು ಈ ವಿಷಯದಲ್ಲಿ ಸೋತಿದ್ದಾರೆ ಎಂದು ನಾನು ಹೇಳುವುದಿಲ್ಲ. ಅವರು ಅದನ್ನು ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗಿಲ್ಲ... ಇನ್ನು ಸೋಲುವ ಮಾತೆಲ್ಲಿ? ಇಂದು ಕಲೆಯನ್ನು ನೋಡಿ ಅನಂದಿಸುವ ಮನಃಸ್ಥಿತಿ ಮರೆಯಾಗಿ ಅದರಿಂದ ಏನು ಸಿಗುತ್ತದೆ ಎಂದೇ ನೋಡುತ್ತಿದ್ದಾರೆ. ಇಂದು ಹಣವೇ ಪ್ರಧಾನವಾಗಿ ಕಲಾಸಕ್ತಿ ಮರೆಯಾಗುತ್ತಿರುವುದು ವಿಷಾದನೀಯ.

***ಕಲಾ ಸ್ವಾತಂತ್ರ್ಯವನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?***

ಬಹಳ ನಾಜೂಕಿನ ಪ್ರಶ್ನೆಯಿದು. ಯಾವುದೇ ಶಾಸ್ತ್ರ ಅಥವಾ ಜನ ಸಮೂಹದ ಬಗ್ಗೆ ನಾವು ಆರ್ಟ್ ಮಾಡುವಾಗ ಬಹಳ ಆಳವಾದ ಅಧ್ಯಯನ ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ತಲತಲಾಂತರದಿಂದ ಬೆಳೆದ ಒಂದು ಸಂಸ್ಕೃತಿಯಿದೆ. ಅದನ್ನು ಮುರಿಯುವುದು ಕಲಾವಿದನ ಧರ್ಮವಲ್ಲ... ಬದಲಾಗಿ ಆ ಪರಂಪರೆ ಅಳಿಯದಂತೆ ಮುಂದುವರಿಸಬೇಕು. ನಾನು ಕಲಾವಿದ, ಆದ್ದರಿಂದ ಏನು ಬೇಕಾದರೂ ಚಿತ್ರಿಸಬಹುದು ಅನ್ನುವುದು ತಪ್ಪು. ಆದರೆ ದೇವತೆಗಳನ್ನು ಎಮ್ ಎಫ್ ಹುಸೇನ್ ಅಶ್ಲೀಲವಾಗಿ ಚಿತ್ರಿಸಿದ್ದಾರೆ ಅನ್ನುವುದು ಸರಿಯಲ್ಲ. ನಗ್ನತೆ ಅನ್ನುವುದು ಪವಿತ್ರ. ಹುಸೇನ್ ದೇವತೆಗಳನ್ನು ರಾಕ್ಷಸ ರೂಪದಲ್ಲಿ ಚಿತ್ರಿಸಿದ್ದರೆ ನಾನು ಅದನ್ನು ವಿರೋಧಿಸುತ್ತಿದ್ದೆ. ಹಾಗೇ ವಿದೇಶದಲ್ಲಿ ಹಿಂದೂ ದೇವರುಗಳನ್ನು ಒಳ ಉಡುಪುಗಳ ಮೇಲೆ, ಚಪ್ಪಲಿಯ ಮೇಲೆ ಚಿತ್ರಿಸುವುದನ್ನು ನಾನು ಖಂಡಿಸುತ್ತೇನೆ. ಕಲಾವಿದನಿಗೆ ಸಂಪೂರ್ಣ ಕಲಾ ಸ್ವಾತಂತ್ರ್ಯದ ಜೊತೆ ಜೊತೆಗೆ ಸಾಮಾಜಿಕ ಜವಾಬ್ದಾರಿಯೂ ಇರುತ್ತದೆ.

***ಎಮ್ ಎಫ್ ಹುಸೇನ್ ಅವರು ಕಲಾ ಕ್ಷೇತ್ರದಲ್ಲಿ ಭಾರತದಲ್ಲಿ ಪರ ವಿರೋಧವನ್ನು ಅನುಭವಿಸಿದವರು. ಅವರ ಬಗ್ಗೆ ನಿಮ್ಮ ಅಭಿಪ್ರಾಯವೇನು?***

ನನಗೆ ದೇವರ ಮೂರ್ತಿಯನ್ನು ಕಂಡಾಗ ನಗ್ನತೆಯೇ ಮನದಲ್ಲಿ ಮೂಡುತ್ತದೆ. ಅಲ್ಲಿ ಅಶ್ಲೀಲತೆ ಅನಿಸೋದಿಲ್ಲ. ನಗ್ನತೆ ಮತ್ತು ಅಶ್ಲೀಲತೆ ಬೇರೆ ಬೇರೆ. ನಾವು ಕಲಾ ಶಿಕ್ಷಣ ಪಡೆಯುವಾಗ ದೇಹ ಶಾಸ್ತ್ರವನ್ನು ಕಲಿಯುತ್ತೇವೆ. ಬೇಲೂರು ಹಳೆಬೀಡಿಗೆ ಹೋದಾಗ ಅಲ್ಲಿನ ಶಿಲ್ಪಗಳು ನಗ್ನವಾಗಿಯೆ ಇದೆ. ಅಶ್ಲೀಲತೆ ನೋಡುವ ಕಣ್ಣಲ್ಲಿ ಇರುತ್ತದೆ. ಎಮ್‌ಎಫ್‌ಗೆ ಮಹಾಭಾರತದ ಬಗ್ಗೆ ಒಳ್ಳೆಯ ಅರಿವಿತ್ತು. ಗರ್ಭಗುಡಿಯಲ್ಲಿರುವ ಮೂರ್ತಿ ನಗ್ನವಾಗಿರುತ್ತದೆ. ದೇವರು ಸತ್ಯ, ಸತ್ಯಕ್ಕೆ ಯಾವತ್ತು ಹೊದಿಕೆ ಇರುವುದಿಲ್ಲ. ಸಂಸ್ಕೃತಿ ಉಳಿಸಬೇಕು. ಆದರೆ ಈ ರೀತಿಯಲ್ಲ. ನಮಗೆ ಸಂಸ್ಕೃತಿಯ ಅರಿವೇ ಇಲ್ಲ. ಕ್ಯಾಲೆಂಡರ್ ಆರ್ಟ್ ಅನ್ನೋದೆ ಆರ್ಟ್ ಅದ್ಕೊಂಡು ಬಿಟ್ಟಿದ್ದೇವೆ.

***ಕಲಾ ಕ್ಷೇತ್ರದಲ್ಲಿ ಹಲವು ಮಾಧ್ಯಮದಲ್ಲಿ ನೀವು ನಿಮ್ಮ ಪ್ರತಿಭಾ ಪ್ರದರ್ಶನ ಮಾಡಿದ್ದೀರಿ. ನಿಮ್ಮ ಮೆಚ್ಚಿನ ವಿಭಾಗ ಯಾವುದು?***

ಇಲ್ಲಿ ಫೇವರೇಟ್ ಅನ್ನೋದು ಇಲ್ಲ. ಆ ರೀತಿ ಇದ್ದರೆ ನಾನು ಅದನ್ನೊಂದನ್ನೇ ಮಾಡುತ್ತಿದ್ದೆ. ನನಗೆ ಎಲ್ಲವು ಮುಖ್ಯ. ಯಾವ ಭಾವನೆಯನ್ನು ಚಿತ್ರಿಸಲು ಯಾವ ಮಾಧ್ಯಮ ಸೂಕ್ತ ಎಂದು ಅನಿಸುತ್ತದೆಯೋ ನಾನದನ್ನು ಮಾಡುತ್ತೇನೆ.

***ನೀವು ಯಾವೆಲ್ಲ ಕ್ಷೇತ್ರದಲ್ಲಿ ಇದ್ದೀರಿ?***

ಪೇಂಟಿಂಗ್, ಶಿಲ್ಪಕಲೆ, ಅನಿಮೇಷನ್, ಡಿಜಿಟಲ್ ಪೇಂಟಿಂಗ್, ಗ್ರಾಫಿಕ್ಸ್ ಮುಂತಾದ ಕ್ಷೇತ್ರಗಳಲ್ಲಿ ನಾನಿದ್ದೇನೆ.

***ಯುವ ಕಲಾವಿದರಿಗೆ ನಿಮ್ಮ ಕಿವಿಮಾತು?***

ಕೇವಲ ಬಲ್ಬ್ ಬೆಳಕು ನೀಡುವುದಿಲ್ಲ. ನಾವು ಸ್ವಿಚ್ ಹಾಕಿದಾಗ ಅದರೊಳಗೆ ವಿದ್ಯುತ್ ಹರಿದು ಅದು ಬೆಳಕು ನೀಡುತ್ತದೆ. ಅಂದರೆ ಇಲ್ಲಿ ನಿಮ್ಮನ್ನು ಕಲಾವಿದನನ್ನಾಗಿಸುವುದು ನಿಮ್ಮಲ್ಲಿರುವ ಉತ್ಸಾಹ, ಅಭಿರುಚಿ, ಸೃಜನಶೀಲತೆ, ಸಾಂಸ್ಕೃತಿಕ ಅರಿವು, ಇತಿಹಾಸದ ಜ್ಞಾನ ಮತ್ತು ಆಕಾಂಕ್ಷೆ. ಇನ್ನೂ ಸೂಕ್ಷ್ಮದೃಷ್ಟಿ ಅಲ್ಲದೇ ಪ್ರತಿಕ್ಷಣವು ಅಲರ್ಟ್ ಆಗಿರುವುದು ಬಹಳ ಮುಖ್ಯ. ■

# ನಾ ಕಂಡ ಅವಿಸ್ಮರಣೀಯ ಯುರೋಪ್ ಖಂಡ

## ನನ್ನ ಮೊದಲ ವಿದೇಶ ಪ್ರವಾಸ

ವಿದೇಶ ಪ್ರವಾಸ ಮಾಡಬೇಕೆಂಬ ನನ್ನ ಬಹುಕಾಲದ ಕನಸು ನನಸಾಗಿಯೇ ಹೋಯ್ತು. ಒಟ್ಟು 15 ದಿನಗಳ ಕಾಲ ಇಟಲಿ, ವ್ಯಾಟಿಕನ್, ಆಸ್ಟ್ರಿಯ, ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಬೆಲ್ಜಿಯಂ, ನೆದರ್‌ಲ್ಯಾಂಡ್, ಫ್ರಾನ್ಸ್, ಲಂಡನ್– ಒಟ್ಟು 9 ದೇಶಗಳ ವಿವಿಧ ಸ್ಥಳಗಳನ್ನು ನೋಡಲು ನಾನಂತೂ ಅತ್ಯುತ್ಸಾಹದಿಂದ ಹೊರಟೇ ಬಿಟ್ಟೆ. ನನ್ನೊಂದಿಗೆ ಸುಮಿತ್ರಾರಾವ್, ಅವರ ಪತಿ ರಾಮಚಂದ್ರರಾವ್, ಅವರ ಮಕ್ಕಳಾದ ಸಾದನರಾವ್, ಕಲ್ಪನಾ ಕುಲಕರ್ಣಿ, ಅವರ ಬಂಧುಗಳಾದ ಸಂಧ್ಯಾಆನಂದ್, ಉಷಾ ಬೆಲಮಾರ್, ಎನ್. ಅರುಣ ಹಾಗೂ ಯಶೋಧ ಬಂಟ್ವಾಳ್ ಒಟ್ಟು ನವರತ್ನ ಶಿರೋಮಣಿಗಳು ತಿಂಗಳುಗಟ್ಟಲೆ ತಯಾರಿ ನಡೆಸಿದ್ದೇ ನಡೆಸಿದ್ದು; ಏಪ್ರಿಲ್ 25 ಎಂದು ಬರುವುದೋ ಎಂದು ಕಾತುರದಿಂದ ಕಾದಿದ್ದೇ ಕಾದಿದ್ದು; ಏಪ್ರಿಲ್ 25ರಿಂದ ಮೇ 9ರವರೆಗಿನ ಪ್ರವಾಸದ ವಿವರಗಳನ್ನು ಮತ್ತೆ ಮತ್ತೆ ಓದಿದ್ದೇ ಓದಿದ್ದು. ಅಂತೂ ಇಂತೂ ಏಪ್ರಿಲ್ 24ರ ರಾತ್ರಿ ಬಂದೇ ಬಿಡ್ತು. . .

### ಮೊದಲನೆ ದಿನ – 24/25 ಏಪ್ರಿಲ್ 2011

ನನ್ನ ಪಾಲಿಗೆ ಈ ಎರಡು ದಿವಸಗಳೂ ಅತ್ಯಂತ ಮಹತ್ವದ ದಿವಸಗಳು; ಕಾರಣ ನಾನು ಮೊತ್ತಮೊದಲ ಬಾರಿಗೆ ಭರತಖಂಡದಿಂದ ಯುರೋಪ್ ಖಂಡಕ್ಕೆ ಹೋಗುವ ಸಂಭ್ರಮ. 24ರ ರಾತ್ರಿ ನಾವು ನವರತ್ನ ಶಿರೋಮಣಿಗಳು ದೆಹಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ 11.30ಕ್ಕೆ ಒಟ್ಟಾದೆವು. ಏನೋ ಕಾತುರ. ಏನೋ ಕನಸು. 25ರ ಬೆಳಗಿನ ಝಾವ ವಿದೇಶೀ ಪ್ರಯಾಣದ ಎಲ್ಲಾ ಕಾಯಿದೆ ಕಾನೂನನ್ನು ನಿಭಾಯಿಸಿ ಆಸ್ಟ್ರಿಯನ್ ಏರ್‌ಲೈನ್ಸ್ ಪುಷ್ಪಕ ವಿಮಾನದಲ್ಲಿ ಕುಳಿತು ಹಾರಿಯೇ ಬಿಟ್ಟೆವು! ಏನು ಸಂಭ್ರಮ; ಏನು ಸಡಗರ; ಏನು ಹೆಮ್ಮೆಯಿಂದ ಬೀಗುತ್ತಿರುವ ಮುಖಗಳು!! ನಾವು ಬೆಳಿಗ್ಗೆ 7.40ಕ್ಕೆ ವಿಯೆನ್ನಾ ತಲುಪಿದೆವು. ಇಲ್ಲಿಂದ ರೋಮ್‌ಗಾಗಿ ಬೇರೆ ವಿಮಾನ ಹತ್ತಬೇಕು. ಈ ವಿಮಾನ ನಿಲ್ದಾಣದಲ್ಲಿ ಮಾಡಿದ ಪರೀಕ್ಷೆ, ನಿರೀಕ್ಷಣೆ ಬಹಳ ಕಠಿಣವಾಗಿತ್ತು. ನಮ್ಮ ನಮ್ಮ ಒಡವೆಗಳು, ಕಿವಿಯೋಲೆ, ಉಂಗುರ, ಗಡಿಯಾರ, ಸರ, ಕ್ಯಾಮರ, ಚಿನ್ನದ ಬಳೆಗಳು, ಮೊಬೈಲ್ ಎಲ್ಲಾ ತೆಗೆದು ಒಂದು ತಟ್ಟೆಯಲ್ಲಿಟ್ಟು ಕ್ಷ ಕಿರಣದ ನಿಗದಲ್ಲಿ ಕಳಿಸಬೇಕು. ಪ್ರತಿ ವ್ಯಕ್ತಿಯನ್ನು ಬೇರೆ ಬೇರೆ ಪರೀಕ್ಷಿಸಿ ಕಳುಹಿಸುತ್ತಿದ್ದರು. ನನಗೋ ನನ್ನ



ವಾಲುತ್ತಿರುವ ಪೀಸಾ ಗೋಪುರದ ಮುಂದೆ ನವರತ್ನ ಶಿರೋಮಣಿಗಳು

ವಜ್ರದುಂಗುರ, ಚಿನ್ನದೊಡವೆಗಳು, ಹೊಸ ಡಿಜಿಟಲ್ ಕ್ಯಾಮೆರಾದ ಬಗ್ಗೆ ಚಿಂತೆ ಹತ್ತಿ, ಭಯವೋ ಭಯ! ನನ್ನ ಎದೆ ಬಡಿತ ಪ್ರಾಯಶಃ ಹೊರಗಿನವರಿಗೂ ಕೇಳುತ್ತಿತ್ತೇನೋ. ನಾಡಿ ಬಡಿತದ ತುಡಿತ 160–200 ಇದ್ದರೂ ಇರಬಹುದು! ವಯಸ್ಸಾದರೂ ವ್ಯಾಮೋಹ ಹೋಗಿಲ್ಲ! ಅಂತೂ ಏನೂ ಅನಾಹುತ ಆಗಲಿಲ್ಲ. ನಮ್ಮ ವಿಮಾನ 25ರ ಬೆಳಗ್ಗೆ 9 ಗಂಟೆಗೆ ರೋಮ್ ನಗರವನ್ನು ತಲುಪಿತು. ಅಲ್ಲಿ ನಮ್ಮನ್ನು ಸ್ವಾಗತಿಸಲು ಪ್ರವಾಸ ಸಂಸ್ಥೆಯ ಬೋರ್ಡ್ ಹಿಡಿದು ಪ್ರಸನ್ನಚಿತ್ತನೂ, ಸುಂದರನೂ ಆದ ತರುಣ ಪ್ರಫುಲ್ಲ ಗಂಗರ್ಡೆ (ಮರಾಠಿ) ಹಸನ್ಮುಖದಿಂದ ನಮಗೆಲ್ಲಾ ಸುಸ್ವಾಗತ ಬಯಸಿ ಅನುಕೂಲವಾದ ದೊಡ್ಡ ಬಸ್‌ನಲ್ಲಿ (ಅದರಲ್ಲಿ ಇನ್ನೂ 36 ಜನರು ಈ ಪ್ರವಾಸದ ಗುಂಪಿಗೆ ಸೇರಿದವರು ಕುಳಿತಿದ್ದರು) ಹಾಲಿಡೇ ಇನ್ ಹೋಟೆಲ್‌ಗೆ ಕರೆದುಕೊಂಡು ಹೋದರು. ಇಂದಿನಿಂದ ಕೊನೆಯ ದಿವಸದವರೆಗೂ ಈ 45 ಜನರ ಗುಂಪು, ಒಂದಾಗಿ ಸಹಕಾರ, ಸಹೃದಯತೆ, ಸಂವೇದನೆಯಿಂದ ಹೊಂದಿಕೊಂಡು ಪ್ರವಾಸವನ್ನು ಚಿರ ಸ್ಮರಣೀಯವಾಗುವಂತೆ ಮಾಡಿದರು.

ನಮಗೆಲ್ಲಾ ತುಂಬಾ ಹಸಿವಾಗಿದ್ದರಿಂದ ಆ ಹೋಟೆಲ್‌ನಲ್ಲಿ ದೊರೆತ ಪಿಟ್ಸಂ, ಕರಿದ ಆಲೂಗಡ್ಡೆ ಬೆರಳುಗಳು, ಹಣ್ಣಿನ ರಸ, ಕಾಫಿ, ಟೀ, ವೈಟ್ ವೈನ್, ರೆಡ್ ವೈನ್, ಬಿಯರ್ ಇತ್ಯಾದಿ ಗಡದ್ದಾಗಿ ತಿಂದೆವು.

ಸ್ವಲ್ಪ ಸುಧಾರಿಸಿಕೊಂಡ ನಂತರ, ರೋಮ್ ನಗರದ ಪ್ರಸಿದ್ಧ ಟ್ರೆವಿ ಫೌಂಟನ್ ನೋಡಲು ಹೋದೆವು. ಈ ಚಿಲುಮೆ– ಕೊಳ ಬಿಳಿ, ಹಸಿರು, ಕೆಂಪು ಶಿಲೆ (ಇಟಾಲಿಯನ್ ಮಾರ್ಬಲ್)ಗಳ ಸುಂದರ ಮೂರ್ತಿಗಳಿಂದ ಅಲಂಕೃತವಾಗಿದೆ. ಇಲ್ಲಿ ಕಟ್ಟೆಯ ಮೇಲೆ ಹಿಂದು ಮುಂದಾಗಿ ಕುಳಿತು ನಮ್ಮ ಎಡಭುಜದ ಹಿಂದಿನಿಂದ ಸೆಂಟ್ (ನಾಣ್ಯ) ಚಿಮ್ಮಿದರೆ ನಮ್ಮ ಇಷ್ಟ ಸಿದ್ಧಿಸುವುದೆಂಬ ಪ್ರತೀತಿ ಇದೆ. ಜೋರಾಗಿ ಮಳೆ ಸುರಿಯುತ್ತಿದ್ದರೂ ಜನಜಂಗುಳಿ ಮಧ್ಯದಲ್ಲಿ ತೂರಿಕೊಂಡು ನಾವೆಲ್ಲಾ ನಾಣ್ಯವನ್ನು ಚಿಮ್ಮಿದೆವು. ಇದು ಒಂದು ಚೌಕ. ಅನೇಕ ಸಣ್ಣ ಪುಟ್ಟ ಅಂಗಡಿಗಳು, ಹೇಳದೆ ಕೇಳದೆ ಬರುವ ಮಳೆಗಾಗಿ ಬಣ್ಣಬಣ್ಣದ ಛತ್ರಿಗಳ ಹೊರೆ ಹೊತ್ತ ಮಾರಾಟಗಾರರು, ದಿನನಿತ್ಯದ ಪ್ರವಾಸಿಗಳು, ಒಬ್ಬರನ್ನೊಬ್ಬರು ತಳ್ಳಿಕೊಂಡು ನಡೆಯಬೇಕು. ಅಲ್ಲಿಯ ಹೆಸರುವಾಸಿಯಾದ ಇಟಾಲಿಯನ್ ಜಿಲೇಟೊ ಮಂಜು ಕೆನೆ ತರಹದಂತಹ ಕಾಫಿ ಟೀಗಳ ಅಂಗಡಿಗಳು. ಮಂಜಿನ ಕೆನೆಯ ಕೋನ್ ಹಿಡಿದು, ಮಳೆಯ ಕಾರಣ ಛತ್ರಿಯನ್ನು ಹಿಡಿಯಲಾರದೆ ಹಿಡಿದು, ಭುಜದಲ್ಲಿ ಜಂಭದ ಚೀಲ, ಕ್ಯಾಮೆರ, ಇನ್ನೂ ಏನೇನೋ ಸಾಮಾನು ಹಿಡಿದು ನಾವೆಲ್ಲ ಒದ್ದಾಡಿದ್ದು; ಮಂಜಿನ ಕೆನೆ ನೆಕ್ಕಿದ್ದೇ ನೆಕ್ಕಿದ್ದು! ಪ್ರಯಾಣ, ಸ್ಥಳ ವೀಕ್ಷಣೆ ನಮ್ಮನ್ನು ಸಾಕಷ್ಟು ಸುಸ್ತು ಮಾಡಿದ್ದ ಕಾರಣ ನಾವೆಲ್ಲಾ ಹೋಟೆಲ್‌ಗೆ ಹಿಂತಿರುಗಿ, ಮಾರನೆಯ ದಿನದ ಪ್ರವಾಸದ ವಿವರ ತಿಳಿದುಕೊಂಡು ಹಾಯಾಗಿ ಮಲಗಿದೆವು.

### ಎರಡನೇ ದಿನ–ಏಪ್ರಿಲ್ 26

ಗಡದ್ದಾದ ತಿಂಡಿ ತಿಂದು ರೋಮ್ ನಗರಗಳ ಖಂಡಹರಗಳನ್ನು ನೋಡಲು ಹೊರಟೆವು. ರೋಮ್ ನಗರ ಮತ್ತು ನಮ್ಮ ವಾರಣಾಸಿ ನಗರ ಪ್ರಪಂಚದಲ್ಲೇ ಅತ್ಯಂತ ಹಳೆಯ ಗಲ್ಲಿಗಳ ನಗರವೆಂದು ಪ್ರಸಿದ್ಧಿ. ಎಲ್ಲೆಲ್ಲಿಯೂ ಚರ್ಚ್‌ಗಳು (ದೇವಸ್ಥಾನಗಳಿಗೆ ಹೋಲಿಸಬಹುದು). ರೋಮಿನ Colossium 3 ಅಂತಸ್ತಿನ Amphitheatre ಮುಕ್ತ ರಂಗಶಾಲೆ ಎನ್ನಬಹುದು. 80 ಪ್ರವೇಶ ದ್ವಾರಗಳು, ಗೋಳಾಕಾರ, ಹಿಂದಿನ ಖೈದಿಗಳ (Gladiators) ಹೊಡೆದಾಟ, ಕ್ರೂರವಾದ ಆಟಗಳು, ಖೈದಿಗಳು ಸೋತರೆ ನಂತರ ಕ್ರೂರಪ್ರಾಣಿಗಳೊಡನೆ ಹೋರಾಡಿ ಮಡಿಯುವ ದೃಶ್ಯ ನೋಡಲು ಎಲ್ಲಾ ಮಳಿಗೆಯಲ್ಲೂ ಜನ ಸೇರುತ್ತಿದ್ದರಂತೆ. ಕ್ರೌರ್ಯ ಪ್ರದರ್ಶನ, ಆಳುತ್ತಿದ್ದ ರಾಜ ಮಹಾರಾಜರುಗಳ ವೈಭವ, ದ್ವೇಷ ಇತ್ಯಾದಿ. ಜೂಲಿಯಸ್ ಸೀಸರ್, ಬ್ರೂಟಸ್, ಅಂತೋನಿ ಮೊದಲಾದವರ ಕಥೆ ಹೇಳುವ 2000 ವರ್ಷಗಳ ಹಿಂದಿನ ಕಲ್ಲಿನ ಕಟ್ಟಡ. ಇಲ್ಲಿ ಮಾರುತ್ತಿದ್ದ ಸಣ್ಣಪುಟ್ಟ ಸಾಮಾನುಗಳೆಲ್ಲಾ ತುಂಬಾ ದುಬಾರಿ. ಮುಂದೆ ನಾವು ವ್ಯಾಟಿಕನ್ ಸಿಟಿಗೆ ಹೋದೆವು. ಈ ನಗರ ಪ್ರಪಂಚದಲ್ಲೇ ಅತ್ಯಂತ ಸಣ್ಣ ನಗರವಾಗಿ ಕ್ರೈಸ್ತರ ಗುರು ಪೋಪ್‌ಗಳಿಗೆ ಹೆಸರಾದ ಧಾರ್ಮಿಕ ಸ್ಥಳ. Vatican Museum, Sistain Chapel, St.Peter's Basalia ಪವಿತ್ರ ಚರ್ಚ್, ಕರಕುಶಲತೆಯ ಖಣಿ. ವರ್ಣಚಿತ್ರಗಳನ್ನು ಕುಂಚದಲ್ಲಿ ಬಿಡಿಸಿರುವ ಮೈಕೆಲ್ ಎಂಜಿಲೊ ಮತ್ತು ಬರ್ನಿನಿ

ಅವರುಗಳು ಮಾಡಿದ ಕಲಾಕೃತಿಗಳು! ಒಂದು ಬಾರಿ ಕನ್ನಡದ 'ರೂಪದರ್ಶಿ' ಜಿ.ವಿ.ಅಯ್ಯರ್ ಬರೆದ ಕೃತಿ ಓದಲೇಬೇಕು. ನಾನು ನನ್ನ ಯುವಾವಸ್ಥೆಯಲ್ಲಿ ಓದಿದ ಈ ಪುಸ್ತಕ ನನ್ನನ್ನು ಈಗ ನೋಡುತ್ತಿರುವ ಈ ನಗರದ ಮಹತ್ವಕ್ಕೆ ಎಡೆಗೊಟ್ಟಿತು. ಇದೆಲ್ಲಾ ನೋಡಲು ಎರಡು ಕಣ್ಣುಗಳು ಸಾಲದು. ನಮಗೆ ಇದನ್ನೆಲ್ಲಾ ನೋಡಲು ಮುಂಚಿತವಾಗಿಯೇ ಏರ್ಪಾಡು ಮಾಡಿದ್ದರಿಂದ ತಿರುಪತಿಯಂತೆ ಮೈಲಿಗಟ್ಟಲೆ ಇರುವ ಕ್ಯೂ ತಪ್ಪಿಸಿಕೊಂಡು ಬೇಗ ನೋಡಲು ಅವಕಾಶ ಸಿಕ್ಕಿತ್ತು. ನಾವೆಲ್ಲ ಬಹಳ ನಡೆದದ್ದರಿಂದ ಆಯಾಸವಾಗಿ ಹಸಿವಾಗಿ Patro ಮೂಲಕ ಫ್ಲಾರೆನ್ಸ್ ತಲುಪಿದೆವು.

**ಮೂರನೆಯ ದಿನ ಏಪ್ರಿಲ್ 27**

ಈ ದಿನ ಬೆಳಿಗ್ಗೆ Wallart ನ್ನು ಬಿಟ್ಟು ಪ್ರಪಂಚದ ಅದ್ಭುತ ದೃಶ್ಯಗಳಲ್ಲಿ ಒಂದಾದ ಬಾಗಿ ನಿಂತ ಪೀಸಾ ಗೋಪುರ ನೋಡಲು ಬಸ್ಸಿನಲ್ಲಿ ಪ್ರಯಾಣ. ಪೀಸಾದ ಬಗ್ಗೆ ಎಷ್ಟು ಕೇಳಿದ್ದೆವೋ ನೋಡಿದಾಗ ನಮಗೆ ಅಷ್ಟೇ ನಿರಾಶೆಯಾಯಿತು. ಸ್ವಲ್ಪ ಸುತ್ತಾಡಿ ಅಲ್ಲಿ ಇಲ್ಲಿ ದಾರಿಯಲ್ಲಿ ಸಣ್ಣಪುಟ್ಟ ಸಾಮಾನು ಕೊಂಡು ಫ್ಲಾರೆನ್ಸ್‌ನ ರಾಜಧಾನಿ Tuscany ಗೆ ಹೋದೆವು. ಇದು ಮೈಕೆಲ್ ಎಂಜೆಲೊ ಜನ್ಮಸ್ಥಳ. ಫ್ಲಾರೆನ್ಸ್ ನೈಟಿಂಗೇಲ್‌ನ ಮೂಲ ಪ್ರತಿಮೆ, ಮೈಕೆಲ್ ಎಂಜೆಲೊ ಗೆಲಿಲಿಯೊ ಮುಂತಾದ ಪ್ರಸಿದ್ಧ ವ್ಯಕ್ತಿಗಳ ಗೋರಿಗಳಿವೆ ಮೊದಲಾದವನ್ನು ನೋಡಿ ಪಡೋವಾ ತಲುಪಿದೆವು.

**ನಾಲ್ಕನೇ ದಿನ ಏಪ್ರಿಲ್ 28**

ಇಲ್ಲಿಂದ ವೆನಿಸ್‌ಗೆ ಪ್ರಯಾಣ. ಅಲ್ಲಿ ಸ್ವಂತ Cruise ಗೊತ್ತು ಮಾಡಿಕೊಂಡು Guidecca ಕಾಲುವೆಯಲ್ಲಿ ಸಾಗುತ್ತಾ ದೂರದಿಂದ Adriatic ಸಮುದ್ರ ನೋಡಿ, ವೆನಿಸ್‌ನಲ್ಲಿ ಉಳಿದು ಅಲ್ಲಿ ಸಣ್ಣ ಸಣ್ಣ ದೋಣಿಗಳಲ್ಲಿ (6 ಜನಕ್ಕೊಂದು ದೋಣಿ) ಕುಳಿತು ವೆನಿಸ್‌ನ ಕೊಳಕು ಮತ್ತು ನಿಂತ ನೀರಿನಲ್ಲಿ ತೇಲುತ್ತಾ ಅಕ್ಕಪಕ್ಕದಲ್ಲಿರುವ ಕಟ್ಟಡಗಳು, ಮನೆಗಳನ್ನು ನೋಡಿಕೊಂಡು Great Gambler ಸಿನಿಮಾದ ದೋ ಲಬ್ಝೊಂಕಿ ಹೈ ದಿಲ್ ಕಿ ಕಹಾನಿ ಎಂದು ಹಾಡುತ್ತಿದ್ದವರೊಡನೆ ದನಿಗೂಡಿಸುತ್ತಾ ಮಜವಾಗಿ ಮಸ್ತಾಗಿ 'ಮಸ್ತ್ ಮಸ್ತ್ ಹೈ' ಎಂದು ಹಾಡಿದೆವು. ನಂತರ ಮುರೆನೊ ಗಾಜಿನ ಫ್ಯಾಕ್ಟರಿಯಲ್ಲಿ ಪ್ರಾತ್ಯಕ್ಷಿಕವಾಗಿ ಗಾಜಿನ ಸುಂದರ ವಸ್ತುಗಳನ್ನು ತಯಾರಿಸುವುದನ್ನು ನೋಡಿದ್ದಲ್ಲದೆ ಅಂತಹ ಬಿಸಿ ಬೆಂಕಿಯ ಧಗೆಯಲ್ಲಿ ಗಾಜನ್ನು ಊದಿ ಅನೇಕ ಪ್ರಾಣಿಗಳನ್ನು ಮಾಡಿ ತೋರಿಸಿದವನ ಚಾಕ ಚಾಕ್ಯತೆಗೆ ಬೆರಗಾದೆವು. ಅಲ್ಲಿ ಚಿಕ್ಕಪುಟ್ಟ ಸಾಮಾನು ಕೊಂಡುಕೊಂಡು, Venetian leather bag ಕೊಳ್ಳಲಾಗದಿದ್ದಕ್ಕೆ ಸಂಕಟಪಟ್ಟು, ನಮ್ಮ ಪ್ರವಾಸ ನಿರ್ವಾಹಕ ಬೇಗ ಬರಲು ಎಚ್ಚರಿಕೆಯ ಧ್ವನಿ ಭಿತ್ತರಿಸುತ್ತಿದ್ದುದರಿಂದ ಇನ್ನೊಂದು Cruise ಹತ್ತಿ ಆಸ್ಟ್ರಿಯಾಗೆ ಸಾಗಿದೆವು. ಪುಟ್ಟ ಹಡಗಿನಲ್ಲೇ ಅತ್ಯಂತ ಇಷ್ಟವಾದ ಸಮೋಸ, ಪಾವ್‌ಭಾಜಿ, ಅನೇಕ ತರಹ ಬ್ರೆಡ್‌ಗಳು, ಕುಡಿಯಲು ತಂಪಾದ ಪಾನೀಯ ಜೊತೆಗೆ ಇಟಾಲಿಯನ್ ಸಂಗೀತ, ಹಿಂದಿ ಹಾಡುಗಳು, ಪಿಯಾನೊ ಬಾರಿಸಿ ಸಂತೋಷಗೊಳಿಸಿದ ಇಟಾಲಿಯನ್ ಯುವಕ! ಆನಂದವೋ ಆನಂದ! ಎಲ್ಲರೂ ಸೇರಿ ಆ ಹುಡುಗನಿಗೆ ಹತ್ತಿರ ಹತ್ತಿರ 25 ಯುರೊ ಕಾಣಿಕೆ ಕೊಟ್ಟೆವು. ಆಸ್ಟ್ರಿಯಾ ತಲುಪಿ ನಗರವನ್ನು ನೋಡಲು ಹೊರಟು ಹೆಸರು ವಾಸಿಯಾದ 1928ನೇ ಇಸವಿಯ Goldener Adler Hotel (ಅದರ ಗುಂಬಜ (Dome) ಚಿನ್ನದ ತಗಡಿನ ಹೊದಿಕೆ ಹೊಂದಿದೆ) ನೋಡಿದೆವು. ಹಳೆಯ ಯುರೋಪ್ ಅನ್ನು ಜ್ಞಾಪಿಸುವ ಕಲ್ಲಿನ ಒಡ್ಡೊಡ್ಡು ದಾರಿಯಲ್ಲಿ ನಡೆಯುತ್ತಾ ನದಿ ಅಡಿಚೆರಿ ಅಂಚಿನಲ್ಲಿರುವ ವೆರೊನಾವನ್ನು ದಾಟಿ ಹೋಟೆಲ್ ತಲುಪಿದೆವು. ರಾತ್ರಿ Tyrolean ಜಾನಪದ ನೃತ್ಯ, ವೈವಿಧ್ಯಮಯ ಸಂಗೀತ ವಾದ್ಯಗಳು ಮತ್ತು ಸಂಗೀತ, ವರ್ಣರಂಜಿತ ಜನಪದ ನೃತ್ಯ ನೋಡಿ ನಮ್ಮ ಭಾರತದ ಕಲೆಗೆ ಹೋಲಿಸಿಕೊಂಡೆವು. ಕೊನೆಯಲ್ಲಿ ಆ ಕಲಾವಿದ ನಮ್ಮ ಭಾರತಮ್ಮನ ರಾಷ್ಟ್ರಗಾನವಾದ "ಸಾರೇ ಜಹಾನ್ ಸೆ ಅಚ್ಚಾ" ಹಾಡಿದಾಗ ನಾವೆಲ್ಲಾ ಕುಣಿದೆದ್ದು ದನಿಗೂಡಿಸಿ "ಧನ್ಯ ಹೋ ಮಾ, ಜೈ ಹೋ ಮಾ" ಎಂದೆವು. ಇನ್ನು ಮುಂದಿನ ಪ್ರಯಾಣ ವ್ಯಾಟನ್ಸ್‌ಗೆ.

**ಐದನೇ ದಿನ ಏಪ್ರಿಲ್ 29**

ವ್ಯಾಟನ್ಸ್ ಇದು ವಿಶ್ವಪ್ರಸಿದ್ಧಿ ಸ್ವರೋವಸ್ಕಿ (Swarovski) ಹರಳಿನ ವಸ್ತು ಪ್ರದರ್ಶನದ ಅರಮನೆ! ಹೊರಗಿನಿಂದ ಒಳಗೆ ಪ್ರವೇಶ ಮಾಡಿ ನೋಡಿ ವಾಪಸ್ ಬರುವವರೆಗೂ ಎಲ್ಲೆಲ್ಲೂ ಝಗ ಝಗ ನಿಗಿ ನಿಗಿ ಎನ್ನುವ ವಸ್ತುಗಳ ಅರಮನೆ. ಭೂಮಿಯಿಂದ ಬೇರೆ ಲೋಕಕ್ಕೆ ಹೋದೆವೇನೋ ಎಂಬಂತೆ ಸ್ವರ್ಗಲೋಕ! ಯಾಂತ್ರಿಕವಾಗಿ ತೂಗುತ್ತಿರುವ ಬಟ್ಟೆಯ ವಿನ್ಯಾಸಗಳ ದೃಶ್ಯ, ನಮ್ಮ ಭಾರತದ ಸುಂದರ ಆಳೆತ್ತರದ ಹರಳಿನಿಂದಲಂಕೃತ ರಾಜ ಕುದುರೆ, ಒಂದೇ ಎರಡೇ! ಎಲ್ಲರೂ ಅಲ್ಲಿ ಮಾರುವ ಒಂದೋ ಎರಡೋ ಆಭರಣಗಳನ್ನು ಕೊಂಡು ಮಧ್ಯಾಹ್ನದ ಭೋಜನಕ್ಕಾಗಿ ಭಾರತೀಯ ಭೋಜನಾಲಯ "ಸಂಗಮ" ದಲ್ಲಿ ಸಾಧಾರಣ ಊಟ ಮಾಡಿ ನಮ್ಮ ಪ್ರವಾಸ ಮುಂದುವರಿಸಿದೆವು.

ಆಸ್ಟ್ರಿಯ ಮತ್ತು ಸ್ವಿಟ್ಜರ್‌ಲೆಂಡ್ ಗಡಿಯಲ್ಲಿ ನಾವೆಲ್ಲಾ ಪ್ರೈಮರಿ ಶಾಲೆಯ ಮಕ್ಕಳಂತೆ ಗಪ್‌ಚಿಪ್ ಆಗಿ ಬಸ್ಸಿನಲ್ಲಿ ಕುಳಿತಿರಬೇಕಿತ್ತು. ಕಾರಣ ಅಲ್ಲಿ ಗಡಿ ರಕ್ಷಣಾ ದಳ ತಮ್ಮ ನಿಷ್ಠೆಯ ಕೆಲಸ ಮಾಡಬೇಕಾಗಿತ್ತು. ಯಾವುದೇ ತರಹ ತೊಂದರೆಯಾಗದಂತೆ ನಾವೆಲ್ಲ ಸಹಕರಿಸಿದೆವು. ಅಲ್ಲಿಂದ ಮುಂದೆ ಥಾಮಸ್ ಕುಕ್ ಪರ್ವತಕ್ಕೆ ಹೋದೆವು. ಹೋಗುವಾಗ ಯುರೋಪಿನ ಅತ್ಯಂತ ಉದ್ದವಾದ (ಮೂರನೇ)14 ಕಿ.ಮೀಗಳ ಸುರಂಗವನ್ನು ದಾಟಿ ಪರ್ವತದ ಕ್ಯಾಂಪ್ ತಲುಪಿದೆವು. ಇಲ್ಲಿ ಸ್ವಿಸ್ ಸ್ಥಳೀಯ ಸ್ವಾಗತ, ಅಲ್ಲಿನ ಬಾವುಟವನ್ನು ಬೀಸಿ ಬೀಸಿ ಹಾರಾಡಿಸುತ್ತಾ ಆಲ್‌ಪೆನ್ ಹಾರನ್ ಎಂಬ ಮರದ ವಾದ್ಯವನ್ನು ಕೆನ್ನೆಗಳನ್ನು ಉಬ್ಬಿಸಿಕೊಂಡು ಊದಿ, ನೃತ್ಯ ಮತ್ತು ಸಂಗೀತದೊಡನೆ ನಮ್ಮನ್ನೆಲ್ಲಾ ಸುಂದರ ದನದ ಕೊಟ್ಟಿಗೆಯಂತಿದ್ದ ಮನೆ ಒಳಗೆ ಕರೆದೊಯ್ದು ಮಸಾಲೆ ಚಹಾ, ರೆಡ್‌ವೈನ್, ಆಪಲ್ ವೋಡ್ಕಾ, ಬೇಯಿಸಿ ತುರಿದ ಆಲೂಗಡ್ಡೆಯ ತಿಂಡಿ, ವಿಶೇಷವಾಗಿ ತಾವೇ ತಯಾರಿಸಿದ ಚಾಕೋಲೇಟ್ ನಮಗೆ ತಿನ್ನಿಸಿ ಕುಡಿಸಿ ಅತಿಥಿ ಸತ್ಕಾರ ಮಾಡಿದರು. ಇವು ನಮಗೆ ಹಣವಿಲ್ಲದೆ ದೊರೆತ ಆತಿಥ್ಯ! ಅತಿಥಿ ದೇವೋಭವ:! ಅಲ್ಲಿಂದ ಮುಂದೆ ನಾವು Go-carting ತರಹದ Lugorideನಲ್ಲಿ ಧೈರ್ಯವಿದ್ದ ಪ್ರತಿಯೊಬ್ಬರು ಪರ್ವತದ ಅಂಕು ಡೊಂಕಿನ ರಸ್ತೆಯಲ್ಲಿ ನಾವೇ ಸ್ವತ: ನಡೆಸಿಕೊಂಡು ಹೋಗಿ ಬಂದೆವು. ನಾನೂ ಸಹ ಧೈರ್ಯದಿಂದ ಹೋಗಿ ಬಂದೆ. ಯಶೋದ ಹೋಗಲಿಲ್ಲ.



ರೋಮಿನ ಮೂರು ಅಂತಸ್ತಿನ ಬಯಲು ರಂಗಮಂದಿರ

ನಂತರ ಮೇಲಿನಿಂದ ಇಳಿದು ಬಂದು Engelberg on Swiss Alpsಗೆ ಬಂದು ತುಂಬಾ ವೈಭವದ ಹೋಟೆಲ್ Ramodarಗೆ ಬಂದಿಳಿದುಕೊಂಡೆವು. ದೊಡ್ಡ ದೊಡ್ಡ ಸುಂದರ, ಸರ್ವಾನುಕೂಲದ ಕೋಣೆಗಳು, ರುಚಿಕರ ಭೋಜನ, ಮೆತ್ತನೆ ಕೊಕ್ಕರೆ ಬಿಳುಪಿನ ಹಾಸಿಗೆ, ಕಂಬಳಿ; ಇನ್ನೇನು ಬೇಕು! ಆರಾಮವಾಗಿ ವಿಶ್ರಮಿಸಿದೆವು. ಆದರೆ ಒಂದು ವಿಷಯ ವಿದೇಶಗಳಲ್ಲಿ ಪ್ರಾಯಶಃ ಕುಡಿಯುವ ನೀರು, ಬಳಕೆಯ ನೀರು ಎಂದು ಬೇರೆ ಬೇರೆ ಇರೋಲ್ಲ. ದೇಹದ ಒಳ–ಹೊರಗಿನ ಶುಚಿಗೆ, ಬಾಯಾರಿಕೆಗೆ ಎಲ್ಲವುದಕ್ಕೂ ಒಂದೇ ಶುದ್ಧ ನೀರು. ಎಲ್ಲ ಕಡೆಯಲ್ಲೂ ಶುಭ್ರವಾದ ಖಾಲಿ ಗಾಜಿನ ಲೋಟಗಳನ್ನಿಟ್ಟಿರುತ್ತಾರೆ.

ಚಹಮಾಡಿಕೊಳ್ಳಲು ಸಾಮಗ್ರಿಯೊಡನೆ ಕಪ್ ಇಟ್ಟಿರುತ್ತಾರೆ. ಯಾವಾಗಲೂ ಬಿಸಿ ನೀರು-ತಣ್ಣೀರು ದೊರಕುತ್ತದೆ. ಅದಕ್ಕೆ ಅಲ್ಲಿಯ ಜನರು ಆರೋಗ್ಯವಂತರಾಗಿ ಸುಂದರವಾಗಿ ಗಲ್ಲಗಳಲ್ಲಿ ಚಿಮ್ಮುವ ರಕ್ತರಂಜಿತ ಕದಪುಗಳಿಂದ, ಎತ್ತರ ಗಾತ್ರದಲ್ಲಿ ದೃಢಕಾಯರಾಗಿರುತ್ತಾರೆ ಅನ್ನಿಸುತ್ತೆ.

**ಆರನೇ ದಿವಸ ಏಪ್ರಿಲ್ 30**

ಇಂದು ಬಿ.ಕೆ.ಆರ್.ರಾವ್ ಅವರ 86ನೇ ಹುಟ್ಟಿದ ಹಬ್ಬ. ಎಲ್ಲರೂ ಅವರಿಗೆ ಶುಭಕೋರಿ ದೇವರನ್ನು ಪ್ರಾರ್ಥಿಸಿ ಅವರ ಆಶೀರ್ವಾದ ಬೇಡಿ, ಸೌಂದರ್ಯದ ಖಣಿ, ಉಸಿರು ಕಟ್ಟುವ ದೃಶ್ಯದ ಹಿಮಪಾತ (Glacier Falls) ನೋಡಲು ಹೋದೆವು. Trummelback Falls ಪರ್ವತಗಳ ಒಳಗಿನಿಂದ ಧುಮುಕುವ ಪ್ರಪಂಚದಲ್ಲೇ ಒಂದೇ ಒಂದಾದ ಹಿಮ ಜಲಪಾತ. 24000 ಲೀಟರ್/ಸೆಕೆಂಡ್‌ನಂತೆ ರಭಸದಿಂದ ಸುರಿಯುವ ಜಲಪಾತ! ಅದೂ ಮನುಷ್ಯನಿಗೆ ನೋಡಲು ಸಾಧ್ಯವಾದದ್ದು! ಇಲ್ಲಿಂದಲೇ ನಾವು ನಮ್ಮ ಉಣ್ಣೆ ಬಟ್ಟೆಗಳನ್ನು ತೊಡಲು ಪ್ರಾರಂಭಿಸಿದ್ದು. ಅದು ಧುಮುಕುವ ಸ್ಥಾನವನ್ನು ಓಡಿ ಓಡಿ ಮೆಟ್ಟಲು ಹತ್ತಿಕೊಂಡು ಹೋಗಿ ಧನ್ಯೆ ಧನ್ಯೆ ಎಂದುಕೊಂಡು ಬಂದೆವು. ಮುಂದೆ ಯುರೋಪಿನ 3454 ಮೀಟರ್ (11.304 ಅಡಿಗಳು) ಎತ್ತರದ Jungfraujoch ಪರ್ವತ ಶಿಖರ ನೋಡಲು ಹೋದೆವು. ನಾವು ಅದನ್ನು ತಲುಪಲು 2 cogwheel ರೈಲು ಗಾಡಿಗಳನ್ನು ಬದಲಾಯಿಸಬೇಕಾಯಿತು. ಮಂಜುಟೋಪಿ ಧರಿಸಿದ ಶಿಖರಗಳು, ಹಿಮಚ್ಛಾದಿತ ಹಾಸಿಗೆಗಳು, ಒಂದು ತರಹ ಭಯಂಕರ ಸೌಂದರ್ಯ; ರೌದ್ರ ಸೌಂದರ್ಯ. ಮೇಲಿನ ಶಿಖರ ಮುಟ್ಟಲು Esimeer 3160 ಮೀಟರ್. ಅಂದರೆ 10,368 ಅಡಿಗಳು. ಎಲ್ಲರೂ ಫೋಟೋಗಳನ್ನು ಎಳೆದಿದ್ದೂ ಎಳೆದಿದ್ದೆ. ಇಲ್ಲಿ ನಾವು ಐಸ್ ಪ್ಯಾಲೇಸ್‌ನಲ್ಲಿ ಚಿಕ್ಕ ಚಿಕ್ಕ ಪಕ್ಷಿ, ಪ್ರಾಣಿ ಮನುಷ್ಯರ ಮೂರ್ತಿಗಳನ್ನು ನೋಡಿ ಬಂದೆವು. ಇಂತಹ ಅನುಭವ ಹಿಂದೆಂದೂ ಆಗಿರಲಿಲ್ಲ. (ನಾನು ಅಮರನಾಥ ಗುಹೆಯಲ್ಲಿ ಮಂಜಿನ ಶಿವಲಿಂಗ ನೋಡಲು ಗುಹೆ ತಲುಪಿದಾಗ ಅದು ಕರಗೇ ಹೋಗಿತ್ತು). ಅಷ್ಟು ಎತ್ತರದ ಜಾಗದಲ್ಲಿ ಬಾಲಿವುಡ್ ರೆಸ್ಟೋರೆಂಟ್, ಅಂಗಡಿ ಮುಂಗಟ್ಟುಗಳು ಎಲ್ಲಾ ಇದೆ. ನಮ್ಮ ಮಧ್ಯಾಹ್ನದ ಊಟ ಅದೇ ರೆಸ್ಟೋರೆಂಟಿನಲ್ಲಿ. ಬಾಲಿವುಡ್ ನಟರು ಬಂದು ಶೂಟಿಂಗ್ ಮಾಡುವಾಗ ಅವರುಗಳು ಊಟ ಮಾಡುವ ಹಜಾರ/ಕೋಣೆ ಬೇರೆ. ಎಲ್ಲಿ ನೋಡಿದರಲ್ಲಿ ಶಾರೂಕ್ ಖಾನ್, ಸಲ್ಮಾನ್ ಖಾನ್, ಅಮೀರ್ ಖಾನ್, ಐಶ್ವರ್ಯ, ಪ್ರೀತಿ ಜಿಂಟಾ, ಪ್ರಿಯಾಂಕ, ಬಿಪಾಷ, ಸೈಫ್, ಕರೀನಾ, ಅಮಿತಾಭ್‌ರ ಚಿತ್ರ ಪಟಗಳು! ಇನ್ನು ಮುಂದೆ ಎರಡು ಸರೋವರಗಳ ನಡುವಿನ Bernese Obertand ಪರ್ವತವನ್ನು ಕಂಡೆವು. ಇಲ್ಲಿ DDLJ ಸಿನಿಮಾ ಚಿತ್ರೀಕರಣವಾಗಿತ್ತಂತೆ. ನಂತರ ನಾವು ನಮ್ಮ ಮೈಸೂರುಪಾಕಿನಷ್ಟೇ ಹೆಸರುವಾಸಿಯಾದ ಚಾಕೋಲೇಟ್ ಫ್ಯಾಕ್ಟರಿಗೆ ಹೋಗಿ ಹೋದೆವು. ಅಲ್ಲಿ ಬೇಕಾದಷ್ಟು ತರಹ ವಿವಿಧ ರುಚಿಯ ಚಾಕಲೇಟು ಮಾಡಿ ತೋರಿಸಿದ್ದಲ್ಲದೇ ದುಡ್ಡು ಕೊಡದೇ ಧಾರಾಳವಾಗಿ ತಿನ್ನುವ ಅವಕಾಶ ಸಿಕ್ಕಿತು. ಅಂದಿನ ದಿನದ ಊಟದ ಕ್ಯಾಲೋರಿಸ್ ಮೂರರಷ್ಟಾಗಿರಬೇಕು. ಪುಕ್ಕಟ್ಟೆಯಾಗಿ ಮೆದ್ದದ್ದಲ್ಲವೇ! ಕೊನೆಗೆ ರಾತ್ರಿ ಒಂದು ದೊಡ್ಡ ಹೋಟೆಲ್‌ನಲ್ಲಿ ಭಾರತೀಯ ಭೋಜನ ಮಾಡಿ ರಾವ್ ರವರ ಜನ್ಮ ದಿವಸದ ಕೇಕ್ ಕತ್ತರಿಸಿ ಹಾಡುತ್ತಾ ಆಚರಿಸಿದೆವು. ನಮ್ಮಲಿದ್ದ ಕಿರಿಯರು ಪ್ರವಾಸ ನಿರ್ವಾಹಕನ ಜೊತೆ ನಮಗೆ ತಿಳಿಸಿದಂತೆ ಜಾರಿಕೊಂಡು, underground city (ಪಾತಾಳ ಲೋಕ) ಯಾವುದೇ ಕಷ್ಟವಾದರೂ ಆರು ತಿಂಗಳು ಹೊರಗೇ ಬರದಂತೆ ಅಡಗಿಕೊಳ್ಳುತ್ತಿದ್ದ ನಗರವನ್ನು ಕದ್ದು ನೋಡಿ ಬಂದರು. ಅದು Nuclear Invasion ಸಮಯದ ಕಥೆ.

**ಏಳನೇ ದಿವಸ ಮೇ 1**

ಯಥಾಪ್ರಕಾರ ಬೆಳಗಿನ ತಿಂಡಿ ಮುಗಿಸಿ Mt.Titilis & Lucerne ನೋಡಲು ಹೊರಟೆವು. ಪ್ರಪಂಚದ ಮೊತ್ತ ಮೊದಲ Revolving Cable Car ನಲ್ಲಿ ನಮ್ಮ ಸವಾರಿ. Titilis Rotair Carನಲ್ಲಿ ಕುಳಿತು 3020 ಮೀಟರ್ ಎತ್ತರದ ಹಿಮಚ್ಛಾದಿತ ಪರ್ವತ ತುದಿಯನ್ನು ಮುಟ್ಟಿದೆವು. ಆ ಜಾಗಕ್ಕೆ Golden Triangle ಎಂದು ಹೆಸರು. ನಮ್ಮ ಗುಂಪಿನ ಬೆಂಗಾಲಿ ಮೊಷಾಯಿ ಬ್ಯಾನರ್ಜಿ "ಒರೇ ಮಾ! ದೇಖೋ ಚೂ ಭೀಷೋಣ ಸುಂದರ್ ಚೀಲೂ" (ಅಬ್ಬಬ್ಬಾ ಎಂತಹ ಕ್ರೌರ್ಯ ಸೌಂದರ್ಯ!) ಎಂದು ಕೂಗಿದ್ದು ಇನ್ನೂ ಕಿವಿಯಲ್ಲಿ ಮೊರೆಯುತ್ತಿದೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಸ್ಥಳೀಯ ವೇಷಭೂಷಣಗಳಿಂದ ಅಲಂಕರಿಸಿ ಫೋಟೋ ತೆಗೆಯುವ ಸ್ಟುಡಿಯೋ ಇದೆ. ಅದರ ಆಮದನಿ ವಿಪರೀತ. ಕ್ಯೂನಲ್ಲಿ ನಿಂತು ಕಾಲು ಸೋತರೂ ನಿರಾಶರಾಗದೆ ಒಬ್ಬೊಬ್ಬರೂ 23 ಯುರೋಗಳಿಗೆ ದೊಡ್ಡ ಫೋಟೋ ಒಂದೊಂದು ತೆಗೆಸಿಕೊಂಡೆವು. ನಂತರ ಹಿಮಗುಹೆಗಳನ್ನು ನೋಡಿ ಶಿಖರದ ಮಟ್ಟ ಪ್ರದೇಶದಲ್ಲಿ ಮಂಜುಗಡ್ಡೆ ಚೆಂಡು ಒಬ್ಬರ ಮೇಲೊಬ್ಬರು ಎಸೆದು sking ಆಟದ ಫೋಸ್ ಕೊಟ್ಟು ಫೋಟೋ ತೆಗೆಸಿಕೊಂಡು ಜಾರಿಜಾರಿ Glacier ಹಾಸಿಗೆಯ ಮೇಲೆ ನಡೆದು ಬಂದೆವು. ಅಲ್ಲಿ ಆಮ್ಲಜನಕ ಇಲ್ಲವೇ ಇಲ್ಲವೆನ್ನಬಹುದು. 0 ಡಿಗ್ರಿ ಶಾಖ ಆದರೂ ಯಾರಿಗೂ ಚಳಿ ಎನಿಸಲೇ ಇಲ್ಲ. ಉಸಿರು ಕಟ್ಟಲೇ ಇಲ್ಲ. ಪ್ರಾಯಶಃ ಸ್ವಚ್ಛ ವಾತಾವರಣದ ಪ್ರಭಾವವಿರಬೇಕು. ಅಲ್ಲಿಯೂ ರುಚಿಕರವಾದ ಊಟ ಮಾಡಿ Lucerneಗೆ ಪ್ರಯಾಣ ಬೆಳೆಸಿದೆವು. ಅಲ್ಲಿ ಸಿಂಹದ ಮನೆ (ಖಂಡಹರ) ಮರದಿಂದ ಮಾಡಿದ ಸೇತುವೆ (Keppel Brucke Wooden Bridge) ನೋಡಿ ಅಂಗಡಿಗಳಲ್ಲಿ ಸಣ್ಣ ಪುಟ್ಟ ಸಾಮಾನು, ಸ್ವಿಸ್ ಗಡಿಯಾರ ಕೊಂಡುಕೊಂಡು ಹಡಗಿನಲ್ಲಿ Lucerne ಸರೋವರ ಸುತ್ತಿ ಆಕಾಶದ ನೀಲಿ ಮತ್ತು ಸಮುದ್ರದ ಹಸಿರು ನೀರಿನ ವರ್ಣಸಂಗಮದ ವೈಚಿತ್ರದ ಅನುಭವ ಪಡೆದು ಹೋಟೆಲ್ ಸೇರಿಕೊಂಡೆವು.

**(ಮುಂದಿನ 8 ದಿನಗಳ ಪ್ರವಾಸದ ಅನುಭವಕ್ಕಾಗಿ ಮುಂದಿನ ಸಂಚಿಕೆಗಾಗಿ ನಿರೀಕ್ಷಿಸಿ.)**

**ಡಾ. ಅಹಲ್ಯಾ ಚಿಂತಾಮಣಿ**


Swiss Alps

# ದೆಹಲಿ ಅಂದರೆ ಅಕ್ಕನ ಊರು

ಪ್ರೇಮ್‌ಶೇಖರ್

"ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಕೊಲೆಯಾದ ದಿನದಿಂದ ಮೂರು ದಿನಗಳವರೆಗೆ... ದೆಹಲಿಯಲ್ಲಿ ನಾಗರೀಕ ಸರಕಾರವೇ ಇರಲಿಲ್ಲ. ಎಲ್ಲೆಲ್ಲೂ ಕೊಲೆ ಸುಲಿಗೆ ಬೆಂಕಿ...

ನಾಲ್ಕೇ ದಿನಗಳಲ್ಲಿ ದೆಹಲಿ ಮತ್ತೆ ಕಣ್ಣು ತೆರೆದು ನನ್ನತ್ತ ಮುಗುಳ್ನಗತೊಡಗಿತ್ತು. ಆ ಮುಗುಳ್ನಗೆಗೂ, ಮೂವತ್ತೇಳು ವರ್ಷಗಳ ಹಿಂದೆ ಎಲ್ಲವನ್ನೂ ಎರಡು ಹೆಣ್ಣುಮಕ್ಕಳನ್ನೂ ಸಹಾ ಕಳೆದುಕೊಂಡು ಜೀವ ಮಾತ್ರ ಉಳಿಸಿಕೊಂಡು ಲಾಹೋರಿನಿಂದ ಓಡಿ ಅಮೃತಸರ ಸೇರಿದಾಗ ಮಾಜೀ ನನ್ನೆಡೆ ಬೀರಿದ ಮುಗುಳ್ನಗೆಗೂ ಅದೆಂತಹ ಸಾಮ್ಯತೆ ಇತ್ತು ಎಂದು ನನಗೆ ಈಗಲೂ ಅಚ್ಚರಿಯಾಗುತ್ತದೆ. ನನ್ನ ತಾಯಿಯಂತೇ ದೆಹಲಿಯೂ ಸಹಾ ಎಂದು ನನಗೆ ಎಷ್ಟೋ ಸಲ ಅನಿಸುತ್ತದೆ. ಅದೆಷ್ಟೇ ಹಾನಿಯಾಗಲೀ, ಇದ್ದುದೆಲ್ಲವೂ ಲೂಟಿಯಾಗಲಿ, ಜೀವವೊಂದು ಉಳಿದರೆ ಸಾಕು, ದೆಹಲಿ ಹಾಗೂ ಮಾಜೀ ಮತ್ತೆ ಮುಗುಳ್ನಗತೊಡಗುತ್ತಾರೆ. ಆರು ಶತಮಾನಗಳ ಹಿಂದೆ ಆ ಕುಂಟ ಕಿರಾತಕ ತೈಮೂರ್ ಇದೇ ದೆಹಲಿಯನ್ನು ಲೂಟಿಮಾಡಿ ಬೆಂಕಿ ಹಚ್ಚಿದ್ದ. ಅವನು ಅತ್ತ ಹೋದದ್ದೇ ದೆಹಲಿ ಕಣ್ಣು ತೆರೆದು ಮೇಲೆದ್ದಿತ್ತು. ಮತ್ತೆ... ಮುನ್ನೂರು ವರ್ಷಗಳೂ ಆಗಿಲ್ಲ, ಆ ನಾದಿರ್ ಷಾ ಇಡೀ ಊರನ್ನು ಸ್ಮಶಾನವಾಗಿಸಿ ಕೊಹಿನೂರನ್ನೂ ಮಯೂರ ಸಿಂಹಾಸನವನ್ನೂ ಹೊತ್ತೊಯ್ದ. ಮಾಸಿದ ಸೀರೆಯ ಕೆದರಿದ ತಲೆಯ ವಾಸನೆ ಬಾಯಿಯ ಹುಚ್ಚಿಯಿಂದ ದೂರ ಓಡುವಂತೆ ಆ ಬ್ರಿಟಿಷರು ದೆಹಲಿಯನ್ನು ಕಡೆಗಣಿಸಿ ಬಂಗಾಳಿ ಯುವಚೆಲುವೆ ಕಲಕತ್ತೆಯ ಮಡಿಲಲ್ಲಿ ಮಲಗಿದರು. ಆದರೆ ನಾಕು ದಿನದಲ್ಲಿ ಕಲಕತ್ತೆಯ ಮೈಯೆಲ್ಲಾ ಕಜ್ಜಿಯೆದ್ದು ಗಬ್ಬೆದ್ದುಹೋಯಿತು. ದೆಹಲಿ ದೆಹಲಿಯೇ, ಕಲಕತ್ತೆ ಕಲಕತ್ತೆಯೇ. ನಿಧಾನವಾಗಿಯಾದರೂ ಚೇತರಿಸಿಕೊಂಡು ಮೇಲೆದ್ದು "ಬನ್ನೀ ಮಕ್ಕಳೇ" ಎಂದು ಮುಗುಳ್ನಕ್ಕ ದೆಹಲಿಯ ಕರೆಯನ್ನು ಮನ್ನಿಸದಿರುವುದು ಪರಂಗಿ ದೊರೆಗಳಿಗೂ ಸಾಧ್ಯವಾಗಲಿಲ್ಲ. ದೆಹಲಿ ಮತ್ತೆ ರಾಜಧಾನಿ. ಒಬ್ಬರಿಗೆ ಒಬ್ಬಳೇ ತಾಯಿ. ಒಂದು ರಾಷ್ಟ್ರಕ್ಕೆ ಒಂದೇ ರಾಜಧಾನಿ. ಅದು ದೆಹಲಿ, ನನ್ನ ದೆಹಲಿ, ತನ್ನೊಳಗೆ ಅದೆಷ್ಟೋ ಯಾತನೆಗಳನ್ನು ಅಡಗಿಸಿಕೊಂಡು ಮುಗುಳುನಗುವ ನನ್ನ ಮಹಾನ್ ಮಾತೆ..."

ನನ್ನ ಕಥೆ "ಕನ್ನಡಿ"ಯ ಭಾಗವಾಗಿ ಈ ಮಾತುಗಳನ್ನು ನಾನು ಬರೆಯುವ ಹೊತ್ತಿಗೆ ನನ್ನ – ದೆಹಲಿಯ ನಂಟು ಕಾಲು ಶತಮಾನವನ್ನು ದಾಟಿತ್ತು. ಎಲ್ಲವೂ ನೆನಪಾಗುತ್ತಿದೆ...

ನಾನು ಅಕ್ಷರಗಳನ್ನು ಕಲಿಯುವ ಹೊತ್ತಿಗೆ ಸೋದರಮಾವನನ್ನು ಮದುವೆಯಾಗಿ ಪುಟ್ಟಕ್ಕ ದೆಹಲಿಯಲ್ಲಿ ಸಂಸಾರ ಹೂಡಿ ವರ್ಷ ಕಳೆದಿತ್ತು. ಅಕ್ಷರಗಳನ್ನು ಗುರುತಿಸುವ ಸಾಮರ್ಥ್ಯ ಕೈಗೆಟುಕಿದ್ದೇ ಸಿಕ್ಕಿದ ಎಲ್ಲ ಭೂಪಟಗಳಲ್ಲೂ ಆಇಐಊಋ ಎಂಬ ಹೆಸರನ್ನು ನನ್ನ ಪೆನ್ಸಿಲ್‌ನ ಮೊನೆಯ ವೃತ್ತಗಳಲ್ಲಿ ಬಂಧಿಸಿ ನನ್ನದಾಗಿಸಿಕೊಂಡುಬಿಟ್ಟೆ. ದೆಹಲಿ ಅಂದರೆ ನನಗೆ ಅಕ್ಕನ ಊರು. ನನ್ನ ಪುಟ್ಟಕ್ಕ ಇದ್ದ ಪುಟ್ಟ ಹೆಸರಿನ ದೊಡ್ಡ ಊರು.


ಅದಾದ ಎರಡು ವರ್ಷಗಳಿಗೆ ಪುಟ್ಟಕ್ಕ ಊರಿಗೆ ಬಂದಾಗ ತಂದದ್ದು ಅಗಲದ ತೆಳು ಲೋಹದ ಪೆಟ್ಟಿಗೆ. ಅದರೊಳಗೆ ಅಲಂಕಾರಿಕವಾಗಿ ಜೋಡಿಸಿದ್ದ ಅದೆಷ್ಟೋ ಬಗೆಯ, ಆಕಾರದ, ಸುವಾಸನೆಯ, ರುಚಿಯ ಬಿಸ್ಕೆಟ್‌ಗಳ ಸಾಲುಸಾಲು. ಪೆಟ್ಟಿಗೆ ಮುಚ್ಚಳದ ಉದ್ದಗಲಕ್ಕೂ ನೂರೊಂದು ಬಣ್ಣಗಳ ಕಣ್ಸೆಳೆಯುವ ಚಿತ್ತಾರ. ಅಂಚಿನಿಂದ ಅಂಚಿನವರೆಗೆ ಹರಡಿಕೊಂಡ ನೀಲಿನೀಲಿ ನೀರು, ನೀರಲ್ಲಿ ದೋಣಿಗಳು, ದೋಣಿಗಳಲ್ಲಿ ಮನೆಗಳು, ಮನೆಗಳಲ್ಲಿ ಜನಗಳು, ಹಿನ್ನೆಲೆಯಲ್ಲಿ ಹಸಿರು ಗಿಡಮರಗಳು, ಅವುಗಳಾಚೆ ಹಿಮಾಚ್ಛಾದಿತ ಪರ್ವತಸಾಲು... ನಾನು ನಡೆದಾಡುವ ನೆಲದ ಮತ್ತೊಂದೆಡೆಯಲ್ಲಿ ಅಷ್ಟೆಲ್ಲಾ ಬಣ್ಣಗಳಿವೆಯೆಂದು ನನಗೆ ಗೊತ್ತಾದದ್ದೇ ಅಂದು. ಕಣ್ಣರಳಿಸಿ ನೋಡುತ್ತಾ ಕೂತುಬಿಟ್ಟೆ. "ಅದು ಕಾಶ್ಮೀರ" ಅಂದಳು ಪುಟ್ಟಕ್ಕ.

ನನ್ನ ಜಗತ್ತಿನೊಳಗೆ ಮೊದಲೇ ಇದ್ದ ದೆಹಲಿಯ ಜತೆ ಅಂದು ಕಾಶ್ಮೀರವೂ ಸೇರಿಕೊಂಡಿತು. ದಿನಗಳೆದಂತೆ ಅವೆರಡೂ ನನ್ನೊಳಗೆ ಅಗಾಧವಾಗಿ ಬೆಳೆಯತೊಡಗಿದವು. ಆ ಬೆಳವಣಿಗೆ ಇಂದಿಗೂ ಅವಿಚ್ಛಿನ್ನವಾಗಿ ಸಾಗಿದೆ...

ವರ್ಷಗಳ ನಂತರ ಪುಟ್ಟಕ್ಕನೇ ಕಳುಹಿಸಿದ ಹಣದಲ್ಲಿ ಟಿಕೆಟ್ ಕೊಂಡು ಜಿಟಿ ಎಕ್ಸ್‌ಪ್ರೆಸ್ ಹತ್ತಿ ಇಡೀ ಎರಡು ದಿನ ಚುಗುಬುಗು ಸಾಗಿ ನ್ಯೂಡೆಲ್ಲಿ ರೈಲ್ವೇ ಸ್ಟೇಶನ್‌ನಲ್ಲಿಳಿದು ಕಣ್ಣುಕಣ್ಣು ಬಿಡುತ್ತಾ ನಿಂತಾಗ ಕಣ್ಣೆದುರು ಕಾಣಿಸಿ ನೆಮ್ಮದಿ ಮೂಡಿಸಿದ್ದು ಸೋದರಮಾವ. ಸ್ಟೇಶನ್‌ನಿಂದ ಹೊರ ಕರೆತಂದು "ಇಲ್ಲೇ ನಿಂತುಕೋ, ಸ್ಕೂಟರ್ ತರುತ್ತೇನೆ" ಎಂದು ಹೇಳಿ ಅತ್ತ ಹೋದರು. ಎರಡು ಚಕ್ರಗಳ ಸ್ಕೂಟರ್ ನಿರೀಕ್ಷಿಸಿದ್ದ ನನ್ನ ಮುಂದೆ ಅವರು ತಂದು ನಿಲ್ಲಿಸಿದ್ದು ಮೂರು ಚಕ್ರಗಳ ಆಟೋರಿಕ್ಷಾ. ದಟ್ಟ ಗಡ್ಡಮೀಸೆಗಳ ನಡುವೆ ಹಲ್ಲು ಕಿರಿದ ಪಗಡಿತಲೆಯ ಆಟೋ ಡ್ರೈವರ್. ದೆಹಲಿಗರು ಆಟೋರಿಕ್ಷಾವನ್ನು ಸ್ಕೂಟರ್ ಎಂದು ಕರೆಯುತ್ತಾರೆಂದು ಅರಿತಾಗ ನಗು ಬಂತು. ದೆಹಲಿಯಲ್ಲಿ ಕಾಲಿರಿಸಿದ ಅರೆಗಳಿಗೆಯಲ್ಲಿ ಕಲಿತ ಮೊದಲ ಭಾಷಾಪಾಠ. ಆಮೇಲೆ ಸ್ಕೂಟರ್ ಅನ್ನು "ಸಕೂಟರ್" ಎನ್ನುತ್ತಾರೆಂದು ತಿಳಿದಾಗ...! ಆಮೇಲಾಮೇಲೆ ಸಟೂಲ್, ಸಪೂನ್, ಸಕೂಲ್, ಸಟೇಟ್ ಬ್ಯಾಂಕ್... ನನ್ನ ಕಲಿಕೆ ಇನ್ನೂ ನಿಂತಿಲ್ಲ.

ದೆಹಲಿಯದು ದೀರ್ಘ ಇತಿಹಾಸವಾದರೂ ಅದರ ಪ್ರಾಚೀನ ಚಿತ್ರ ಅಥೆನ್ಸ್, ರೋಮ್, ದಮಾಸ್ಕಸ್, ಜೆರುಸಲೇಂ ಮುಂತಾದ ವಿಶ್ವದ ಪ್ರಾಚೀನ ರಾಜಧಾನಿಗಳಷ್ಟು ರೋಚಕವಾಗಿಲ್ಲ. ಆ ನಗರಗಳ ಇತಿಹಾಸದಂತೆ ದೆಹಲಿಯ ಇತಿಹಾಸ ನಿರಂತರವಾಗಿಲ್ಲ ಮತ್ತು ಲಿಖಿತವಾಗಿ ದಾಖಲಾಗಿಲ್ಲ. ಹಾಗಿದ್ದರೂ ದೆಹಲಿ ವಿಶ್ವಾದ್ಯಂತ ಎಲ್ಲರ ಕುತೂಹಲವನ್ನು ನಿರಂತರವಾಗಿ ಕೆರಳಿಸುತ್ತಲೇ ಇದೆ. ಇದಕ್ಕೆ ಕಾರಣ ಈ ನಗರ ಇತಿಹಾಸದಲ್ಲಿ ವಹಿಸಿದ ಪಾತ್ರ. ಕನಿಷ್ಟ ಒಂದುಸಾವಿರ ವರ್ಷಗಳಲ್ಲಿ ಅದು ರಾಜಧಾನಿಯಾಗಿ ಮೆರೆದ ಮಹಾನ್ ಸಾಮ್ರಾಜ್ಯಗಳು, ಅವುಗಳ ವೈಭವ, ಉಚ್ಛ್ರಾಯ, ಪತನ, ಐಹಿಕವಾದದ್ದೆಲ್ಲವೂ ಒಂದಲ್ಲಾ ಒಂದು ದಿನ ಕುಸಿದು ನೆಲಸಮವಾಗುತ್ತದೆಂಬ ಐತಿಹಾಸಿಕ ಸತ್ಯವನ್ನು ಸಾರುತ್ತಿರುವ ಇಲ್ಲಿನ ಕೋಟೆಕೊತ್ತಲಗಳು, ಗೋಪುರ ಗುಂಬಜ್‌ಗಳು, ಸಮಾಧಿಗಳು...

ಪಾಂಡವರ ರಾಜಧಾನಿ ಇಂದ್ರಪ್ರಸ್ಥ ಇದೇ ದೆಹಲಿಯಾಗಿದ್ದಿರಬಹುದೆಂದು ಹೇಳಲು ನೇರ ಆಧಾರಗಳಿಲ್ಲವಾದರೂ ಸಾಂದರ್ಭಿಕ ಸಾಕ್ಷ್ಯಗಳ ಮೂಲಕ ಹಾಗೆ



ಹೇಳಬಹುದೆಂದು ಇತಿಹಾಸಕಾರ ಪರ್ಸೀವಲ್ ಸ್ಪಿಯರ್ ಹೇಳುತ್ತಾರೆ. ಅವರ ಪ್ರಕಾರ ಕುರುಕ್ಷೇತ್ರ ಯುದ್ಧ ನಡೆದದ್ದು ಐದು "ಪತ್" ಅಥವಾ "ವಿಸ್ತರಣ ನಗರ"ಗಳಿಗಾಗಿ. ಸೋನೆಪತ್, ಪಾನಿಪತ್, ಬಾಗ್‌ಪತ್ ಮತ್ತು ತಿಲ್‌ಪತ್ ಆ ಐದರಲ್ಲಿ ನಾಲ್ಕು ಎಂದು ಗುರುತಿಸಲ್ಪಟ್ಟಿವೆ. ದೆಹಲಿ ಐದನೆಯದು ಎಂದು ಸಹಜವಾಗಿಯೆ ಭಾವಿಸಬಹುದಾಗಿದೆ ಎಂದು ಸ್ಪಿಯರ್ ಹೇಳುತ್ತಾರೆ. ಪುರಾಣಕಾಲವನ್ನು ಕಡೆಗಣಿಸಿದರೂ ಇತಿಹಾಸದ ಆರಂಭದಿಂದಲೂ ಇಲ್ಲಿ ಜನವಸತಿ ಇತ್ತೆಂದು ಅಧಾರಸಹಿತವಾಗಿ ಹೇಳಬಹುದು. ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳು ಸಿಂಧೂಕಣಿವೆಯ ನಾಗರೀಕತೆ ಬೆಳೆದು ಬೆಳಗಿದ ಭೌಗೋಳಿಕ ವಲಯದ ವ್ಯಾಪ್ತಿಯಲ್ಲಿ ಸೇರಿವೆ. ದೆಹಲಿಯ ಪುರಾನಾ ಕಿಲಾ ಪ್ರದೇಶದಲ್ಲಿ ಅದರ ಕುರುಹುಗಳು ದೊರೆತಿವೆ. ಆ ನಂತರ ಸಾವಿರ ವರ್ಷಗಳವರೆಗೆ ದೆಹಲಿಯ ಬಗ್ಗೆ ವಿವರಗಳು ದೊರೆಯುವುದಿಲ್ಲ. ಮೌರ್ಯರ ಕಾಲದಲ್ಲಿ ದೆಹಲಿ ಮತ್ತೆ ಇತಿಹಾಸದ ನಕ್ಷೆಯಲ್ಲಿ ಕಾಣಿಸಿಕೊಂಡರೂ ಆಗ ಅದೊಂದು ನಿಕೃಷ್ಟ ಪ್ರಾಂತೀಯ ಪಟ್ಟಣವಾಗಿತ್ತಷ್ಟೇ. ಅದೇ ಸ್ಥಿತಿ ಮುಂದಿನ ಒಂದು ಸಾವಿರ ವರ್ಷಗಳಷ್ಟು ದೀರ್ಘ ಕಾಲದವರೆಗೆ ಅಂದರೆ ಕುಶಾನರು, ಗುಪ್ತರು ಮತ್ತು ವರ್ಧನರ ಆಳ್ವಿಕೆಯಲ್ಲೂ ಮುಂದುವರೆಯಿತು.

ಇತಿಹಾಸದಲ್ಲಿ ತನ್ನದೇ ನಿರ್ದಿಷ್ಟ ಹಾಗೂ ವಿಶಿಷ್ಟ ಸ್ಥಾನವನ್ನು ದೆಹಲಿ ಪಡೆದುಕೊಂಡದ್ದು ಹನ್ನೊಂದನೇ ಶತಮಾನದಲ್ಲಿ, 1020ರ ಸುಮಾರಿಗೆ ತೋಮರ್ ರಜಪೂತ್ ಅರಸ ಅನಂಗಪಾಲ ಈಗಿನ ಸೂರಜ್ ಕುಂಡ್ ಪ್ರದೇಶದಲ್ಲಿ ತನ್ನ ರಾಜಧಾನಿ ಅನಂಗ್‌ಪುರವನ್ನು ಸ್ಥಾಪಿಸಿದಾಗ, ಉಳಿದೆಲ್ಲಾ ಸ್ಥಳಗಳನ್ನು ಬಿಟ್ಟು ಈ

ಬರಡು ಕಲ್ಲುಗುಡ್ಡಗಳ ನೆಲದಲ್ಲಿ ಆತ ತನ್ನ ರಾಜಧಾನಿಯನ್ನು ಕಟ್ಟಿಕೊಂಡದ್ದಕ್ಕೆ ಇದ್ದ ಒಂದೇ ಕಾರರಣ– ಸುರಕ್ಷತೆ. ಇದು ಅಂದಿನ ವಿವಿಧ ರಜಪೂತ್ ರಾಜವಂಶಗಳ ನಡುವಿನ ದಿನನಿತ್ಯದ ಕದನಗಳ ಪರಿಣಾಮ. ನಂತರ 1050ರಲ್ಲಿ ಆನಂಗಪಾಲ ತನ್ನ ರಾಜಧಾನಿಯನ್ನು ಈಗಿನ ಕುತುತ್ ಪ್ರದೇಶದ ಕಿಲಾ ರಾಯ್ ಪಿಥೋರಾಗೆ ವರ್ಗಾಯಿಸಿದ. ಅಲ್ಲಿ ಆತ ಕಟ್ಟಿಸಿದ ಕೋಟೆಯ ಕುರುಹುಗಳು ಕುತುಬ್ ಮಿನಾರ್‌ನ ಸುತ್ತಮುತ್ತ ಹರಡಿಕೊಂಡಿವೆ. ಇತಿಹಾಸಕಾರರು ಗುರುತಿಸುವ ದೆಹಲಿಯ ಏಳು ನಗರಗಳಲ್ಲಿ ಮೊದಲನೆಯದು ಈ ಕಿಲಾ ರಾಯ್ ಪಿಥೋರಾ. 1150ರಲ್ಲಿ ಅಜ್ಮೀರದ ಚೌಹಾನರು ದೆಹಲಿ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ನಾಲ್ಕು ದಶಕಗಳ ನಂತರ 1192ನಲ್ಲಿ ದೆಹಲಿ ಅಫ್ಘಾನಿಸ್ತಾನದಿಂದ ಬಂದ ತುರ್ಕಿ ದಾಳಿಕಾರ ಮಹಮದ್ ಘೋರಿಯ ವಶವಾಯಿತು. ಆತ ಕಿಲಾ ರಾಯ್ ಪಿಥೋರಾವನ್ನು ತನ್ನ ಭಾರತ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಆಯ್ಕೆ ಮಾಡಿ ತನ್ನ ನಂಬಿಕಸ್ತ ಗುಲಾಮ ಮತ್ತು ನೆಚ್ಚಿನ ಅಳಿಯನಾದ ಕುತ್ಬುದ್ದೀನ್ ಐಬಕ್‌ಗೆ ಅದರ ಜವಾಬ್ದಾರಿಯನ್ನು ವಹಿಸುವುದರೊಂದಿಗೆ ದೆಹಲಿ ಒಂದಾದ ಮೇಲೊಂದರಂತೆ ಬೃಹತ್ ಸಾಮ್ರಾಜ್ಯಗಳ ರಾಜಧಾನಿಯಾಗುವ ಯುಗ ಆರಂಭವಾಯಿತು.

1050ರಿಂದ ಮುಂದಿನ ಆರುನೂರು ವರ್ಷಗಳಲ್ಲಿ ದೆಹಲಿಯನ್ನಾಳಿದ ವಿವಿಧ ಅರಸರು ಏಳು ನಗರಗಳನ್ನು ಕಟ್ಟಿದರು. ಅವು ಕಿಲಾ ರಾಯ್ ಪಿಥೋರಾ (1050), ಸಿರಿ (1303), ತುಘಲಖಾಬಾದ್ (1321), ಜಹಾಂಪನಾ (1334), ಫಿರೋಜಾಬಾದ್ (1354), ದಿನ್ ಪನಾ ಅಥವಾ ಶೇರ್‌ಶಹಾಬಾದ್ (1540), ಶಹಜಹಾನಾಬಾದ್ (1648). ನಂತರ 1911ರಿಂದೀಚೆಗೆ ಬ್ರಿಟಿಷರು ಕಟ್ಟಿದ ನವದೆಹಲಿ ದೆಹಲಿಯಲ್ಲಿ ನಿರ್ಮಾಣವಾದ ಎಂಟನೆಯ ನಗರವಾಗಿ ಇಂದು ವಿಶ್ವದ ಸುಂದರ ರಾಜಧಾನಿಗಳಲ್ಲೊಂದಾಗಿ ಕಣ್ಮನ ಸೆಳೆಯುತ್ತಿದೆ. (ಇವೆಲ್ಲವುಗಳ ಹಿಂದೆ ಪಾಂಡವರ ಇಂದ್ರಪ್ರಸ್ಥವೂ ಸೇರಿದಂತೆ ಆರು ನಗರಗಳಿದ್ದವು, ಅಂದರೆ ದೆಹಲಿಯಲ್ಲಿ ಇದುವರೆಗೆ ಹದಿನಾಲ್ಕು ನಗರಗಳ ನಿರ್ಮಾಣವಾಗಿದೆ ಎಂದು ಹೇಳುತ್ತಾರೆ. ಇದು ಉತ್ಪ್ರೇಕ್ಷೆ ಇರಬಹುದು. ಭಾರತೀಯ ಪುರಾಣಗಳು ಮತ್ತು ಸಂಸ್ಕೃತಿಯಲ್ಲಿ ಸಂಖ್ಯೆ ಹದಿನಾಲ್ಕು ಪಡೆದುಕೊಂಡಿರುವ ಮಹತ್ವದಿಂದಾಗಿ ಆ ಸಂಖ್ಯೆಯನ್ನು ದೆಹಲಿಗೂ ಅನ್ವಯಿಸುವ ಉತ್ಸಾಹೀ ಪ್ರಯತ್ನ ಇದು ಎಂದು ನನಗನಿಸುತ್ತದೆ.)


1050ರಿಂದೀಚೆಗಿನ ನಗರಗಳ ಅದ್ಭುತ ವಾಸ್ತುಶಿಲ್ಪದ ಕುರುಹುಗಳಲ್ಲಿ ಹಲವು ಇಂದಿಗೂ ದೆಹಲಿಯ ಹೆಗ್ಗುರುತುಗಳಾಗಿ ನಿಂತಿವೆ. ವಯೋವೃದ್ಧ ಲೇಖಕ ಖುಶ್ವಂತ್ ಸಿಂಗ್ ಪ್ರಕಾರ ಜನ ದೆಹಲಿಯನ್ನು ನೋಡಲು ಬರುವುದು ಮೂರು ಹಳೆಯ ಅದ್ಭುತಗಳನ್ನು. ಮೊದಲನೆಯದು ಕುತುಬ್ ಮಿನಾರ್, ಎರಡನೆಯದು ಲಾಲ್ ಕಿಲಾ, ಮೂರನೆಯದು ಸ್ವತಃ ಖುಶ್ವಂತ್ ಸಿಂಗ್! ಈ ಮೂರರ ಜತೆ ಹುಮಾಯೂನ್ ಸಮಾಧಿ, ಜಾಮಾ ಮಸೀದಿ, ಜಂತರ್ ಮಂತರ್, ಜತೆಗೆ ಇತ್ತೀಚೆಗಿನ ಬಿರ್ಲಾ ಮಂದಿರ್, ಬಹಾಯಿಗಳ ಲೋಟಸ್ ಟೆಂಪಲ್, ವಿಶ್ವದ ಅತಿ ದೊಡ್ಡ ದೇವಾಲಯ ಅಕ್ಷರ್ ಧಾಮ್... ದೆಹಲಿಯಲ್ಲಿ ಏನುಂಟು ಏನಿಲ್ಲ? ಇವುಗಳ ಜತೆಗೇ ಕುಸಿದು ಬಿದ್ದಿರುವ, ಅರೆಬರೆ ನಿಂತಿರುವ ಅದೆಷ್ಟೋ ಕಟ್ಟಡಗಳು ದೆಹಲಿಯ ಗತವೈಭವವಕ್ಕೆ, ಈ ಶ್ರೀಮಂತ ನಗರದ ಮೇಲಿನ ಪೈಶಾಚಿಕ ದಾಳಿಗಳಿಗೆ, ಈ ದುರ್ದೈವೀ ನಗರ ಅನುಭವಿಸಿದ ದುರಂತಗಳಿಗೆ ಸಾಕ್ಷಿಯಾಗಿ ನಿಂತಿವೆ.

ಈ ನಗರದ ಮೇಲೆ ಅದೇಕೆ ಇಷ್ಟೊಂದು ದಾಳಿಗಳಾದವು? ಉತ್ತರಕ್ಕೆ ಈ ನಗರದ ಭೌಗೋಳಿಕ ನೆಲೆ ಕಾರಣ. ಮೂರು ಕಡೆ ಸಾಗರ, ಉತ್ತರ ಮತ್ತು ಪೂರ್ವದಲ್ಲಿ ಹಿಮಾಲಯ, ಪಶ್ಚಿಮೋತ್ತರದಲ್ಲಿ ಹಿಂದೂಕುಶ್ ಪರ್ವತಗಳಿಂದ ಸುತ್ತುವರೆದಿರುವ ಭರತವರ್ಷಕ್ಕೆ ಅರಬ್ಬರು ಮತ್ತು ಯೂರೋಪಿಯನ್ ಸಾಮ್ರಾಜ್ಯಶಾಹಿಗಳ ಹೊರತಾಗಿ ಇತಿಹಾಸದ ಆದಿಕಾಲದಿಂದಲೂ ವಲಸೆಗಾರರಾಗಲೀ, ದಾಳಿಕಾರರಾಗಲೀ ಪ್ರವೇಶಿಸಿದ್ದು ವಾಯುವ್ಯದ ಖೈಬರ್ ಕಣಿವೆಯ ಮೂಲಕ. ಯಶಸ್ವಿಯಾಗಿ ಖೈಬರ್ ಕಣಿವೆಯನ್ನು ಪ್ರವೇಶಿಸಿದ ಸೇನೆಗೆ ಯಾವುದೇ ನೈಸರ್ಗಿಕ ತಡೆಗಳಿಲ್ಲದ ಪಂಜಾಬಿನ ಬಯಲು ಪ್ರದೇಶವನ್ನು ವಶಪಡಿಸಿಕೊಳ್ಳುವುದು ಸುಲಭ. ಪಂಜಾಬ್ ಕೈಗೆ ಸಿಕ್ಕಿದ ಮೇಲೆ ಸಹಜವಾಗಿಯೇ ಎಲ್ಲರ ಕಣ್ಣು ಬೀಳುವುದು ವಿಶಾಲ ಗಂಗಾಬಯಲಿಗೆ ಹೆಬ್ಬಾಗಿಲಿನಂತಿರುವ ದೆಹಲಿಯ ಮೇಲೆ. ಇದೇ ದೆಹಲಿಯ ದುರಾದೃಷ್ಟಕ್ಕೆ ಮೂಲ. ಖೈಬರ್ ಕಣಿವೆಯನ್ನು ವಶಪಡಿಸಿಕೊಂಡವರು ಅನತಿ ಕಾಲದಲ್ಲೇ ಇಡೀ ಪಂಜಾಬನ್ನು ವಶಕ್ಕೆ ತೆಗೆದುಕೊಳ್ಳುವುದು.

ನಂತರ ನೇರವಾಗಿ ದೆಹಲಿಯತ್ತ ಮುನ್ನುಗ್ಗಿ ಬರುವುದು, ಗಂಗಾ ಬಯಲಿಗೆ ನುಗ್ಗಲು ದೆಹಲಿಯನ್ನು ನೆಲೆಯನ್ನಾಗಿ ಬಳಸಿಕೊಳ್ಳುವುದು ಇತಿಹಾಸದ ಉದ್ದಕ್ಕೂ ನಡೆದುಕೊಂಡು ಬಂದಿದೆ. ಹೀಗಾಗಿಯೇ 1965ರ ಯುದ್ಧಕ್ಕೆ ಒಂದೆರಡು ದಿನಗಳ ಮುಂಚೆ ಪಾಕಿಸ್ತಾನೀ ನಾಯಕ ಜನರಲ್ ಅಯೂಬ್ ಖಾನ್ "ಇತಿಹಾಸ ನಮ್ಮ ಕಡೆ ಇದೆ. ಪಂಜಾಬ್ (ಲಾಹೋರ್) ಯಾರ ಕೈಯಲ್ಲಿದೆಯೋ ಅವರು ಅನತಿ ಕಾಲದಲ್ಲೇ ದೆಹಲಿಯ ಅಧಿನಾಯಕರಾಗುತ್ತಾರೆ. ಈಗ ಲಾಹೋರ್ ನಮ್ಮ ಕೈಯಲ್ಲಿದೆ. ಇನ್ನು ಹದಿನೈದು ದಿನಗಳಲ್ಲಿ ನಾವು ದೆಹಲಿಯಲ್ಲಿರುತ್ತೇವೆ, ಕೆಂಪುಕೋಟೆಯ ಮೇಲೆ ಪಾಕಿಸ್ತಾನೀ ಧ್ವಜವನ್ನು ಹಾರಿಸುತ್ತೇವೆ" ಎಂದು ಘೋಷಿಸಿದ್ದು. ಇತಿಹಾಸ ಅವರ ಕಡೆಗಿದ್ದರೂ ವರ್ತಮಾನ ಅವರ ಕಡೆಗಿರಲಿಲ್ಲ. ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿಯವರ ಬುದ್ಧಿವಂತಿಕೆಯಿಂದಾಗಿ ಅಯೂಬ್ ಖಾನರ ಆಸೆ ನೆರವೇರಲಿಲ್ಲ ಮತ್ತೆ ಇತಿಹಾಸದಲ್ಲಿ ಮೊತ್ತಮೊದಲಿಗೆ ಲಾಹೋರ್‌ನ ಅಧಿಪತಿಗಳು ದೆಹಲಿಯನ್ನು ಪದಾಕ್ರಾಂತಗೊಳಿಸಿಕೊಳ್ಳುವುದರಲ್ಲಿ ವಿಫಲರಾದರು.ಪರಿಣಾಮವಾಗಿ ಪುಟ್ಟಕ್ಕ ದೆಹಲಿಯಲ್ಲಿ ನೆಮ್ಮದಿಯಾಗಿ ನೆಲೆನಿಂತು ನನ್ನನ್ನೂ ಇಲ್ಲಿಗೆ ಕರೆಸಿಕೊಳ್ಳುವಂತಾಯಿತು, ನಾನು ಈ ಮಹಾನ್ ನಗರವನ್ನು ನನ್ನೊಳಗೆ ತುಂಬಿಕೊಳ್ಳುವಂತಾಯಿತು.

ಪುಟ್ಟಕ್ಕನ ಮಾತಿನಲ್ಲಿ ಒಬ್ಬ "ಮಾಸೂಮ್ ಲಡ್ಕಾ" ಆಗಿ ದೆಹಲಿಗೆ ಕಾಲಿಟ್ಟ ನಾನು ಈ ನಗರದಲ್ಲಿ ಏನೆಲ್ಲಾ ಕಂಡೆ! ಎಷ್ಟೆಲ್ಲಾ ಕಲಿತೆ? ಬೇಸಗೆಯಲ್ಲಿ ಬನಿಯನ್ ಅನ್ನೂ ಕಿತ್ತೆಸೆದು, ಛಳಿಗಾಲದಲ್ಲಿ ಅಕ್ಕ ಹೆಣೆದ ಸ್ವೆಟರನ್ನು "ಅಹಹ ಅಹಹ" ಎನ್ನುತ್ತಾ ಮೈಗೇರಿಸಿಕೊಂಡು, ಗಳಿಗೆಗೊಮ್ಮೆ ಗರಂ ಚಾಯ್ ಗುಟುಕರಿಸುತ್ತಾ, ರಜಾಯ್‌ನೊಳಗೆ ಹುದುಗುವ ಮಜವನ್ನು ಅನುಭವಿಸುತ್ತಾ... ತ್ತಾ... ನಾನು ನಾನಾಗಿ ಬೆಳೆದದ್ದು ದೆಹಲಿಯಲ್ಲಿ, ಈ ನಗರದ ಲೈಬ್ರರಿಗಳಲ್ಲಿ, ಆರ್ಟ್ ಗ್ಯಾಲರಿಗಳಲ್ಲಿ.

ಬಂದ ಮಾರನೇ ದಿನಕ್ಕೆ ಸಾಮಾನು ತರಲು ಅಕ್ಕನ ಜತೆ ಹೊರಗೆ ಹೋದಾಗ ಎಲ್ಲೆಲ್ಲೂ ಕಂಡದ್ದು ಸಲ್ವಾರ್ ಕಮೀಜ್ ತೊಟ್ಟ ಹುಡುಗಿಯರು, ಹೆಂಗಸರು. ಸೀರೆಗಳು ಅಲ್ಲೊಂದು ಇಲ್ಲೊಂದು. ಕರ್ನಾಟಕದಲ್ಲಿ ಕಾಣುತ್ತಿದ್ದ ನೋಟಕ್ಕೆ ತದ್ವಿರುದ್ಧ. "ಇಲ್ಲಿ ಮುಸ್ಲಿಮರು ಜಾಸ್ತಿ ಅಲ್ಲವಾ?" ಅಂದೆ ಮೆಲ್ಲಗೆ. "ಹಾಗೇನಿಲ್ಲ, ಈ ಕಡೆಯ ಹೆಂಗಸರ ಉಡುಪೇ ಇದು. ಈ ಉಡುಪಿಗೆ ಧರ್ಮದ ಸೋಂಕಿಲ್ಲ" ಎಂದು ಹೇಳಿ ಅಕ್ಕ ಭಾರತದ ಒಂದು ಚಂದದ ಮುಖವನ್ನು ನನಗೆ ತೋರಿಸಿದಳು. ಅದೇ



ದಿನಗಳಲ್ಲಿ ನೆರೆಯ ಪಾಕಿಸ್ತಾನದಲ್ಲಿ ಜಿಯಾ ಉಲ್ ಹಕ್ ಸೀರೆಯನ್ನು ಇಸ್ಲಾಮಿಗೆ ವಿರುದ್ಧ ಎಂದು ಘೋಷಿಸಿ ಬಹಿಷ್ಕರಿಸಿದ್ದರ ಹಿನ್ನೆಲೆಯಲ್ಲಿ ಅಕ್ಕನ ಮಾತುಗಳು ವಿಶೇಷ ಅರ್ಥ ಪಡೆದುಕೊಂಡವು. ಅಂದು ನಾನು ದೆಹಲಿಯಲ್ಲಿ ಎಲ್ಲೆಲ್ಲೂ ಕಂಡ 'ಜಾತ್ಯಾತೀತ' ಉಡುಪು ಈಗ ಭಾರತದ ಉದ್ದಗಲಕ್ಕೂ ಹರಡಿಹೋಗಿದೆ.

ಕೆಲವೇ ದಿನಗಳಲ್ಲಿ ಗೆಳೆಯ ರಾಜೇಶ್ವರನ ತಂದೆ ಮತ್ತೊಂದು ಮುಖವನ್ನು ನನಗೆ ತೋರಿಸಿದರು. ದೆಹಲಿಗೆ ಅನತೀ ದೂರದ ಹರಿಯಾನಾದ ಪಲ್‌ವಲ್ ಪಟ್ಟಣದಲ್ಲಿನ ತನ್ನ ಮನೆಗೆ ನನ್ನನ್ನಾತ ಕರೆದೊಯ್ದ. ಜವಾಹರ್ ನಗರ್ ಎಂಬ ಹೆಸರಿನ ಆ ವಿಸ್ತರಣದ ಎಲ್ಲ ನಾಲ್ಕು ಸಾವಿರ ಕುಟುಂಬಗಳೂ ನಲವತ್ತೇಳರಲ್ಲಿ ಎಲ್ಲವನ್ನೂ ಕಳೆದುಕೊಂಡು ಪಾಕಿಸ್ತಾನದ ಮುಲ್ತಾನ್ ಪಟ್ಟಣದಿಂದ ನಿರಾಶ್ರಿತರಾಗಿ ಓಡಿಬಂದಂಥವು. ರಾಜೇಶ್ವರನ ತಂದೆ ಅಲ್ಲಿನ ಆರ್‌ಎಸ್‌ಎಸ್ ಶಾಖೆಯ ಕಾರ್ಯದರ್ಶಿ. ದೇಶವಿಭಜನೆಯ ದುರಂತವನ್ನು ನೆನಪಿಸಿಕೊಳ್ಳುತ್ತಾ "ಮತ್ತೆ ಅವಕಾಶ ಸಿಕ್ಕಿದರೆ ಕಳೆದು ಹೋದದ್ದೆಲ್ಲವನ್ನೂ ಮರಳಿಪಡೆಯುವ ಬಯಕೆ ನಮಗೆಲ್ಲರಿಗೂ ಇದೆ" ಎಂದವರು ಹೇಳಿದರು. ಕಾಲು ಶತಮಾನದ ಹಿಂದೆ ಜನವರಿಯ ಒಂದು ಛಳಿರಾತ್ರಿಯಲ್ಲಿ ಅವರಿಂದ ಕೇಳಿದ ಆ ಮಾತುಗಳು ನನ್ನ ಕಿವಿಗಳಲ್ಲಿ ಇನ್ನೂ ರಿಂಗಣಿಸುತ್ತಿವೆ. ನನ್ನಲ್ಲಿ ನೂರೊಂದು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ತೀನ್ ಮೂರ್ತಿ ಲೈಬ್ರರಿಯಲ್ಲಿ ಬೈಂಡ್ ಮಾಡಿಸಿಟ್ಟಿರುವ ಉದ್ದೋಉದ್ದದ ಹಳೆಯ 'ನಮ್ಮ' ಹಾಗೂ 'ಅವರ' ವರ್ತಮಾನ ಪತ್ರಿಕೆಗಳಲ್ಲಿ 65ರ, 71ರ ಯುದ್ಧಗಳ ದಿನಗಳ ಸಂಚಿಕೆಗಳನ್ನು ಹುಡುಕಿ ತೆಗೆದು ತಿಂಗಳುಗಟ್ಟಲೆ ಓದಿ, ಜೆಎನ್‌ಯು, ICWA ಮತ್ತು IDSA ಲೈಬ್ರರಿಗಳಲ್ಲಿ ಸಿಕ್ಕಿದ ಪಾಕಿಸ್ತಾನೀ ಪುಸ್ತಕಗಳನ್ನು ವರ್ಷಗಟ್ಟಲೆ ಗಮನವಿಟ್ಟು ಓದಿ ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಹೆಣಗುತ್ತಿದ್ದೇನೆ. 1947ಅನ್ನು "ಸ್ವಾತಂತ್ರದ ವರ್ಷ" ಎನ್ನುವುದಕ್ಕಿಂತಲೂ "ದೇಶವಿಭಜನೆಯ ವರ್ಷ" ಎಂದು ಕರೆದು ಅದರಾಚೆಯ ಕಾಲವನ್ನು "ವಿಭಜನಾಪೂರ್ವ ಕಾಲ", ಅದರೀಚೆಯ

ಕಾಲವನ್ನು "ವಿಭಜನೋತ್ತರ ಕಾಲ" ಎಂದು ಪರಿಗಣಿಸಿದರೆ ದಕ್ಷಿಣ ಏಶಿಯಾವನ್ನು ಈ ದಿನಗಳಲ್ಲಿ ಕಾಡುತ್ತಿರುವ ಅನೇಕ ಪ್ರಶ್ನೆಗಳಿಗೆ ಉತ್ತರಗಳು ಸಿಗಬಹುದೇನೋ ಅನಿಸುತ್ತದೆ.

"ದೆಹಲಿಶೋಧ"ದ ಹುಚ್ಚು ಹತ್ತಿ ಮೊತ್ತಮೊದಲು ಕುತುಬ್ ಮಿನಾರ್ ಸುತ್ತಲೂ ಹೆಜ್ಜೆ ಸರಿಸಿದಾಗ ಕಿವಿಗೆ ಕೇಳಿದ್ದು ಮಹಮದ್ ಘೋರಿಯ ಸೇನೆಯ ಕುದುರೆಗಳ ಖುರಪುಟಗಳು, ರಜಿಯಾ ಸುಲ್ತಾನಾಳಾ ಸಂಪ್ರದಾಯವಿರೋಧೀ ರಣಕಹಳೆ, ದಖನ್ ಅನ್ನು ಪದಾಕ್ರಾಂತಗೊಳಿಸಿಕೊಂಡ ಅಲ್ಲಾವುದ್ದೀನ್ ಖಾಲ್ಜಿಯ ಹೆಮ್ಮೆಯ ಠೇಂಕಾರ. ಕೆಂಪುಕೋಟೆಯ ದಿವಾನ್ ಎ ಆಮ್‌ನಲ್ಲಿ ಕೇಳಿ ಬಂದದ್ದು ಅಕ್ಬರನ ದಿನ್ ಎ ಇಲಾಹೀ ಧರ್ಮೋಪದೇಶದ ಹಿಂದೆಯೇ ಅನಾರ್ಕಲಿಯ ಕರುಳು ಹಿಂಡುವ ರೋದನ, ದಿವಾನ್ ಎ ಖಾಸ್‌ನಲ್ಲಿ ಮುಮ್ತಾಜಳ ಮೆಲುಮಾತು, ಜಹನಾರಾಳಾ ಬರಡು ಬದುಕಿನ ಕಥೆ ವ್ಯಥೆ... ದೆಹಲಿ ಬಲಿಷ್ಠರ ಕೇಕೆಗಳ, ಬಲಿಗಳ, ಆಕ್ರಂದನಗಳ, ಅವೆರಡೂ ಅಲ್ಲದವರ ಗೊಣಗೊಣಗಳ ನಗರ...

ಕೆಲವು ಪ್ರಶ್ನೆಗಳಿಗೆ ಉತ್ತರಗಳು ದೆಹಲಿಯ ಮಾರುಕಟ್ಟೆಗಳಲ್ಲಿ ಸಿಕ್ಕಿವೆ. ಬಟ್ಟೆಗಳ ಸಾಗರ ಸರೋಜಿನಿ ನಗರ್ ಮಾರ್ಕೆಟ್ ಮತ್ತು ಶಂಕರ್ ಮಾರ್ಕೆಟ್, ಸೂರ್ಯನ ಕೆಳಗಿರುವ ಎಲ್ಲವೂ ಸಿಗುವ ಚಾಂದನಿ ಚೌಕ್, ಕನಾಟ್ ಪ್ಲೇಸ್, ಜನಪಥ್, ಲಜ್‌ಪತ್ ನಗರ್ ಮಾರ್ಕೆಟ್–ಎಲ್ಲೆಲ್ಲಿಯೂ ಕಾಣಸಿಗುವ ಮುಗುಳುನಗೆಯ ಸಿಂಧಿ, ಪಂಜಾಬಿ ವ್ಯಾಪಾರಿಗಳು. ಇದ್ದುದೆಲ್ಲವನ್ನೂ, ಕುಟುಂಬದಲ್ಲಿ ಕನಿಷ್ಟ ಒಂದು ಆತ್ಮೀಯ ಜೀವವನ್ನಾದರೂ ಕಳೆದುಕೊಂಡು ನಿರಾಶ್ರಿತರಾಗಿ ದೆಹಲಿಗೆ ಓಡಿಬಂದು ಎಲ್ಲರನ್ನೂ ಎದೆಗವಚಿಕೊಳ್ಳುವ ಈ ಮಹಾ(ನ್) ನಗರದಲ್ಲಿ ಫೀನಿಕ್ಸ್‌ನಂತೆ ಮತ್ತೆ ಬದುಕು ಕಟ್ಟಿಕೊಂಡು ಎದೆಯೆತ್ತಿ ನಿಂತಿರುವ ಈ ಜನರ ಸ್ನೇಹಪರ ನಡೆನುಡಿ, ತಾಳ್ಮೆ ಅಸಾದೃಶ. ಡಜನ್‌ಗಟ್ಟಲೆ ಸಾಮಾನು ಹೊರತೆಗೆಸಿ ಏನೂ ಇಷ್ಟವಾಗದೇ ಹಿಂದೆ ತಿರುಗಿದರೆ ಇನಿತೂ ಬೇಸರಗೊಳ್ಳದೇ "ನಿಮಗಿಷ್ಟವಾದದ್ದು ಬೇರೆಲ್ಲೂ ಸಿಗದಿದ್ದರೆ ಇಲ್ಲಿಗೇ ಬನ್ನಿ, ನಿಮಗೆಂದೇ ತೆಗೆದಿಟ್ಟಿರುತ್ತೇನೆ" ಎನ್ನುವ ಬಗೆ. ಇಂತಹ ತಾಳ್ಮೆಯನ್ನು ಆ ಕ್ರೂರ ಬದುಕೇ ಕಲಿಸಿರಬೇಕು. ದೆಹಲಿ ನೊಂದ, ನೋವನ್ನು ಅರ್ಥ ಮಾಡಿಕೊಂಡು ಸಂತೈಸುವ ನಗರ.

ಈ ಪ್ರಶ್ನೆಗಳ ಸಹವಾಸವೇ ಸಾಕು ಎಂದುಕೊಂಡು ಲಗಾಮಿಲ್ಲದ ಕುದುರೆಯಂತೆ ಈ ನಗರದ ಬೀದಿಬೀದಿಗಳಲ್ಲಿ ಅಲೆದಾಗ... ಮಾಂಸ ಮೊಟ್ಟೆ ಇರಲಿ, ಹಾಲಿನ ವಾಸನೆಗೂ ಮುಖ ಕಿವಿಚುವ ಅಕ್ಕನ ಜತೆ ಮುನಿರ್ಕಾದ ಉಡುಪಿ ಹೋಟೆಲ್, ಯೂಸುಫ್ ಸರಾಯ್‌ನ ಕರ್ನಾಟಕ ರೆಸ್ಟೋರೆಂಟ್, ಮೋತಿಬಾಗ್‌ನ ಕರ್ನಾಟಕ ಸಂಘದ ಹೋಟೆಲ್, ಕರೋಲ್ ಬಾಗ್, ಕನಾಟ್ ಪ್ಲೇಸ್‌ಗಳ ಮದ್ರಾಸ್ ಹೋಟೆಲ್‌ಗಳಲ್ಲಿ ಅಪ್ಪಟ ಸಸ್ಯಾಹಾರಿ ಮೇವು ಮೇಯ್ದು ಸಾಕೆನಿಸಿ ಕೈಬೀಸಿ ಕರೆದ ಗೆಳೆಯರ ಜತೆಗೂಡಿ ಯೂಸುಫ್ ಸರಾಯ್‌ನ ಸೋನಾ, ಕನಾಟ್ ಪ್ಲೇಸ್‌ನ ಹ್ಯಾರುವೊ (ಈಗಿವು ಮಾಯವಾಗಿವೆ), ಕರೀಮ್ಸ್ ಮುಂತಾದೆಡೆ ಬಿರಿಯಾನಿ, ತಂದೂರಿ ಚಿಕನ್‌ಗೆ ಕೈ ಹಾಕಿದೆ. ಜತೆಗೆ ಎಲ್ಲೆಲ್ಲೂ ಸಿಗುವ ಧಾಬಾಗಳಲ್ಲಿ ಬ್ರೆಡ್ ಪಕೋಡ, ಸಮೋಸಾ, ಮಟರಿ ತಿಂದು ಚಾಯ್ ಕುಡಿಯುವುದರಲ್ಲಿನ ಮಜಾ... ಪ್ರಪಂಚದ ಅತ್ಯಂತ ರುಚಿಯಾದ ಊಟ ಲಾಹೋರ್ ನಗರದ ರಸ್ತೆ ಬದಿಯಲ್ಲಿ ಸಿಗುತ್ತದೆ ಎಂದು ಇಮ್ರಾನ್ ಖಾನ್ ಹೇಳುತ್ತಾನೆ. ಅದು ದೆಹಲಿಯಲ್ಲೂ ಸಿಗುತ್ತದೆ ಎಂದು ನಾನು ಹೇಳುತ್ತೇನೆ. ಕರೀಮ್ಸ್ ಬಂದದ್ದು ಲಾಹೋರ್‌ನಿಂದ ಎಂದು ನೆನಪಿಸಿಕೊಳ್ಳುತ್ತೇನೆ. ಏನೇ ಆಗಲಿ ದೆಹಲಿ ನಾಲಿಗೆ ಚಪಲದವರ ನಗರ.

ಕಮಾನಿ ಆಡಿಟೋರಿಯಂನಲ್ಲಿ ಚಂದ್ರಶೇಖರ ಕಂಬಾರರ "ಜೋಕುಮಾರ ಸ್ವಾಮಿ"ಯಿಂದ ಹಿಡಿದು, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಕನ್ನಡತಿ ಭಾಗೀರಥಿಬಾಯಿ ನಾಯಕಿಯಾಗಿದ್ದ ಶೇಕ್ಸ್‌ಪಿಯರನ ಟ್ವೆಲ್ತ್ ನೈಟ್"ನ ಹಿಂದಿ ರೂಪಾಂತರದವರೆಗೆ ನೂರೊಂದು ಹಿಂದಿ, ಕನ್ನಡ, ಇಂಗ್ಲಿಷ್ ನಾಟಕಗಳನ್ನು ನೋಡಿ ಆನಂದಿಸಿದ್ದು ಇಲ್ಲಿನ ಮಾವಲಂಕಾರ್ ಹಾಲ್, AIFACS ಗ್ಯಾಲರಿ ಮುಂತಾದ ಹಲವು ಹತ್ತು ರಂಗಮಂಚಗಳಲ್ಲಿ. ದೆಹಲಿ ನಾಟಕ ಪ್ರಿಯರ ನಗರ.

ಯಾತಕ್ಕೂ ಮನಸ್ಸಿಲ್ಲದೇ ಸುಮ್ಮನೇ ಮನೆಯಲ್ಲೇ ಕುಳಿತಾಗಲೂ ದೆಹಲಿ ಚೇತೋಹಾರಿ. ಅಂತಹ ಒಂದು ಮಧ್ಯಾಹ್ನ ಅಕ್ಕನ ಹೊಸ ಗೆಳತಿಯೊಬ್ಬಳು ಮನೆಗೆ ಬಂದು ಮಾತಿನ ಮಧ್ಯೆ ಕೇಳಿದಳು: "ನನ್ನನ್ನ ಏನಂತ ಕರೀತೀಯ?" ಅಕ್ಕನ ಗೆಳತಿಯರೆಲ್ಲಾ ನನಗೆ ಅಕ್ಕಂದಿರೇ. ಈ ಹೊಸಬಿಗೆ ಯಾವ ವಿನಾಯಿತಿಯೂ ಇಲ್ಲ. ಈಕೆಯೂ ನನಗೆ ದೀದಿಯೇ. ಅದೇ ಹೇಳಿದೆ. "ಇಲ್ಲ" ಆಕೆ ತಲೆ ಅಲುಗಿಸಿದಳು: "ನಾವು ಗೆಳೆಯರು. ನಾನು ನಿನ್ನ ಗೆಳತಿ, ದೀದಿ ಅಲ್ಲ." ಸ್ನೇಹಪರ ದೆಹಲಿ! ದೆಹಲಿ ಅಕ್ಕನ ಊರು. ಅಕ್ಕನ ಗೆಳತಿಯರ ಊರು. ನನ್ನ ಗೆಳೆಯ ಗೆಳತಿಯರ ಊರು. ನನ್ನ ಊರು.

**ಕೃಪೆ : ವಿಜಯ ಕರ್ನಾಟಕ**

## ನಿಮ್ಮ ಅನಿಸಿಕೆ

ಜೂನ್ ತಿಂಗಳ ಅಭಿಮತಕ್ಕೆ ನನ್ನ ಪ್ರತಿಕ್ರಿಯೆ.

ವಿನ್ಯಾಸದ ಮಟ್ಟಿಗೆ ಅಭಿಮತ ವರ್ಣಮಯವಾದಗಿಂದ ಚೆನ್ನಾಗಿ ಕಾಣ್ತಿದೆ. ಶಿರೋನಾಮೆ ಇಲ್ಲದ ಮುಖಪುಟ ವಿಶೇಷವಾಗೇ ಇತ್ತಾದರೂ ಶಿರವಿಲ್ಲದ ದೇಹದಂತಿತ್ತು. ನೂತನ್ ಕುಲಕರ್ಣಿ ಅವರ 'ಸಂಘ ನನ್ನ ಎರಡನೇ ತೌರು ಮನೆ' ಲೇಖನ ತುಂಬಾ ಹಿಡಿಸ್ತು. ಅವರ ಈ ಲೇಖನ ನೋಡಿದ ಮೇಲೆ ನನಗೂ ಸಹ ಅನ್ನಿಸ್ತು. ಸಂಘ ನಮ್ಮ ತವರು ಮನೆಯಲ್ಲ... ಮಾವನ ಮನೆಯ ಹಾಗೆ ಇತ್ತು ಅಂತ!! ಅವರ ಲೇಖನ ಸೊಗಸಾಗಿ ಮೂಡಿ ಬಂದಿದೆ ಅವರಿಗೆ ನನ್ನ ಅಭಿನಂದನೆಗಳು.

ಆಟೋಟ ಸ್ಪರ್ಧೆಗಳ ಚಿತ್ರ ನೋಡ್ತಿದ್ದಂಗೆ ಒಂದು ನೆನಪಿಗೆ ಬಂತು ನಾವು ಇನ್ನೂ ದೆಹಲಿಯಲ್ಲೇ ಇದ್ದಿದ್ರೆ ಜ್ಯೋತಿನೂ ಹೀಗೇ ಯಾವುದರಲ್ಲದ್ರೂ ಬಹುಮಾನ ತಗೋತಿದ್ಲು ಅಂತ ಅನ್ನಿಸ್ತು.

ನನಗನ್ನಿಸಿದ ಹಾಗೆ ಅಭಿಮತದಲ್ಲಿ ಹೊಸದೆನಿಸಿದ್ದು ಕಿರು ಸಂದರ್ಶನ. ಈ ವಿಭಾಗವೇ ಚೆನ್ನಾಗಿದೆ. ಇದನ್ನು ಹೀಗೇ ಮುಂದುವರಿಸಿಕೊಂಡು ಹೋದರೆ ಚೆನ್ನ.

**ವೀರೇಶ ಹೊಗೆಸೊಪ್ಪಿನವರ, ಬೆಂಗಳೂರು**

"ಅಭಿಮತ"ಕ್ಕೆ ಅಭಿಮಾನ ಪೂರ್ವಕ ಅಭಿನಂದನೆಗಳು. ದೆಹಲಿ ಕರ್ನಾಟಕ ಸಂಘದಿಂದ ಪ್ರತಿ ತಿಂಗಳೂ ಪ್ರಕಟವಾಗುತ್ತ ಕನ್ನಡ ಕಸ್ತೂರಿಯ ಕಂಪನ್ನು ರಾಷ್ಟ್ರಾದ್ಯಂತ ಪಸರಿಸುತ್ತಿರುವ ಕನ್ನಡಿಗರ ಅಭಿವಾನ ಪತ್ರಿಕೆಯಾದ "ಅಭಿಮತ" ಎಲ್ಲರಿಗೂ ಸರ್ವಾನುಮತದಿಂದ ಒಪ್ಪಿಗೆಯಾಗಿ ಬಹುಮತ ಪಡೆದಿದೆ ಎಂದು ಹೇಳುವುದರಲ್ಲಿ ಹೆಮ್ಮೆ ಎನಿಸುತ್ತದೆ. ಪ್ರತಿ ಮಾಸವೂ ಅನೇಕಾನೇಕ ಹೊಸ ಹೊಸ ವಿಷಯಗಳನ್ನು, ಸುದ್ದಿ–ಸಮಾಚಾರಗಳನ್ನೂ, ವೈಚಾರಿಕ ಲೇಖನಗಳನ್ನೂ ತುಂಬಿಕೊಂಡು, ಅತ್ಯಾಕರ್ಷಕ ವರ್ಣರಂಜಿತ ಮುಖಪುಟದೊಂದಿಗೆ ತಪ್ಪದೇ ವಾಚಕರ ಕೈಸೇರುತ್ತಿರುವುದು ಅಭಿಮಾನದ ಸಂಗತಿ. ದೆಹಲಿ ಕರ್ನಾಟಕ ಸಂಘ ಹಾಗೂ ಆಡಳಿತ ಮಂಡಳಿ ಈ ದಿಸೆಯಲ್ಲಿ ಅತ್ಯುತ್ತಮವಾದ ಎಲ್ಲರೂ ಮೆಚ್ಚುವಂಥ ಕನ್ನಡದ ಸೇವೆಯನ್ನು ಸಲ್ಲಿಸುತ್ತಿದೆ ಎಂದು ಘಂಟಾಘೋಷವಾಗಿ ಹೇಳಬಹುದು. ಅಭಿಮತ ಪತ್ರಿಕೆಯು ಇನ್ನಷ್ಟು ಹೆಚ್ಚು ಪುಟಗಳನ್ನು ಹೊಂದಿದರೆ ಕನ್ನಡಾಭಿಮಾನಿಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಲೇಖನಗಳನ್ನು ಒದಗಿಸುವುದರಲ್ಲಿ ಸಂದೇಹವಿಲ್ಲ.

**ಅ**ರಸಂಚೆಯಂತೆ ಪ್ರತಿ ತಿಂಗಳೂ ವಾಚಕರ ಕೈಸೇರುತ್ತ,
**ಭಿ**ನ್ನರುಚಿಯನ್ನು ಓದುಗರಿಗೆ ನೀಡುತ್ತ,
**ಮ**ನೋ ವೈಶಾಲ್ಯವನ್ನು ಮೆರೆಯುತ್ತ
**ತ**ರ ತಮವನ್ನು ಯಾವ ಕಾಲಕ್ಕೂ ತೋರದೆ,

ಅವ್ಯಾಹತವಾಗಿ ಪತ್ರಿಕಾರಂಗದಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಛಾಪನ್ನು ಮೂಡಿಸಿ, ಮುನ್ನಡೆಯುತ್ತಿರುವ 'ಅಭಿಮತ' ಪತ್ರಿಕೆ ಇನ್ನಷ್ಟು ಉತ್ಕೃಷ್ಟವಾಗಿ ಬೆಳೆಯಲಿ ಎಂದು ಮನಸಾರೆ ಹಾರೈಸುತ್ತೇನೆ.

**ಗಣೇಶ ಮೊಖಾಶಿ, ಸಂಪಾದಕರು**
**ನೇರಮಾತು, ಬೆಂಗಳೂರು**

ಉಷಾ ಭರತಾದ್ರಿಯವರ ಸಾರಥ್ಯದಲ್ಲಿನ ಅಭಿಮತದ ಮೇ ಸಂಚಿಕೆಯ ಹೊಚ್ಚಹೊಸ ಅವಿಷ್ಕಾರದ ಸೂಚಕವಾಗಿ ಅಳವಡಿಸಿದ ಹಳೆ ಸಂಪ್ರದಾಯದ ಕಲಾಗಾರಿಕೆಯ ಮುಖ ಚಿತ್ರದಿಂದ ಒಮ್ಮೆಲೇ ಗುರುತು ಸಿಗದೆ ತಬ್ಬಿಬ್ಬಾದುದು ಸತ್ಯವಾದರೂ ಅಭಿಮತವೆಂಬುದು ಅರಿವಾದೊಡನೆಯೇ ಅಬ್ಬಬ್ಬಾ ಎಂಬ ಉದ್ಗಾರದ ಒಡನೆ ಬದಲಾವಣೆಯು ಮುದ ನೀಡಿದುದೂ ನಿಜ. ನಿಂತ ನೀರಿನಂತಿರದೆ, ಏರಿಳಿತಗಳ ನಡೆನುಡಿಗಳೇ ಜೀವನದ ಸೊಗಸು ಎಂದುಸಿರಿದ ಹಿಂದಿನವರ ಅನುಭವಾಮೃತದ ಬಿಂದುಗಳೂ ನೆನವರಿಕೆಯಾದುದು ಸತ್ಯ. ಅಭಿಮತ ಅಂದವಾಗಿಯೇ ಆವಿರ್ಭವಿಸಿದೆ ಎನ್ನಲು ಸಂತೋಷಿಸುವೆ. ಕಾಸರಗೋಡಿನ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳು.

**ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು.**

ಕವನ

## ನಮ್ಮ ಕನ್ನಡ–ನಮ್ಮೆಲ್ಲರ ಕನ್ನಡ

ನನ್ನ ಕನ್ನಡ–ನಿನ್ನ ಕನ್ನಡ, ಪ್ರತಿಯೊಬ್ಬನ ಕನ್ನಡ ।
ಕರ್ನಾಟಕ ಕನ್ನಡ–ಭರತ ಕನ್ನಡ, ವಿಶ್ವ ಕನ್ನಡ ।
ಇತಿಹಾಸ ಕನ್ನಡ–ವರ್ದಮಾನ ಕನ್ನಡ, ಯುಗ ಕನ್ನಡ ।
ನಿತ್ಯ ಕನ್ನಡ–ನಿಜ ಕನ್ನಡ, ಸಹಜ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ಕನ್ನಡ–ನಮ್ಮೆಲ್ಲರ ಕನ್ನಡ ।
ನಮ್ಮ ದಿವ್ಯ ಕನ್ನಡ–ನಮ್ಮ ಭವ್ಯ ಕನ್ನಡ ।
ನಮ್ಮ ವೃದ್ಧಿ ಕನ್ನಡ–ನಮ್ಮ ಸಂವೃದ್ಧಿ ಕನ್ನಡ ।
ನಮ್ಮ ದೀರ್ಘ ಕನ್ನಡ–ನಮ್ಮ ಸುದೀರ್ಘ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ
ನಮ್ಮ ಗೀತ ಕನ್ನಡ–ನಮ್ಮ ಸಂಗೀತ ಕನ್ನಡ ।
ನಮ್ಮ ಶ್ವಾಸ ಕನ್ನಡ–ನಮ್ಮ ವಿಶ್ವಾಸ ಕನ್ನಡ ।
ನಮ್ಮ ಧೈರ್ಯ ಕನ್ನಡ–ನಮ್ಮ ಶೌರ್ಯ ಕನ್ನಡ ।
ನಮ್ಮ ಘಟನೆ ಕನ್ನಡ–ನಮ್ಮ ಸಂಘಟನೆ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ನೆಲ ಕನ್ನಡ–ನಮ್ಮ ಜಲ ಕನ್ನಡ ।
ನಮ್ಮ ಫಲ ಕನ್ನಡ–ನಮ್ಮ ಸಫಲ ಕನ್ನಡ ।
ನಮ್ಮ ಶ್ರೀಗಂಧ ಕನ್ನಡ–ನಮ್ಮ ಗಮ ಗಮ ಕನ್ನಡ ।
ನಮ್ಮ ಜೀವ ಕನ್ನಡ–ನಮ್ಮ ಜೀವನ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ನೆನಪು ಕನ್ನಡ–ನಮ್ಮ ಸವಿನೆನಪು ಕನ್ನಡ ।
ನಮ್ಮ ಯೋಜನೆ ಕನ್ನಡ–ನಮ್ಮ ಸಾಧನೆ ಕನ್ನಡ ।
ನಮ್ಮ ಕಿರಣ ಕನ್ನಡ–ನಮ್ಮ ಸಂಕಿರಣ ಕನ್ನಡ ।
ನಮ್ಮ ಕನಸು ಕನ್ನಡ–ನಮ್ಮ ನೆನಪು ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ಶಾಂತ ಕನ್ನಡ–ನಮ್ಮ ಪ್ರಶಾಂತ ಕನ್ನಡ ।
ನಮ್ಮ ನೆಚ್ಚಿನ ಕನ್ನಡ–ನಮ್ಮ ಮೆಚ್ಚಿನ ಕನ್ನಡ ।
ನಮ್ಮ ಜ್ಞಾನ ಕನ್ನಡ–ನಮ್ಮ ವಿಜ್ಞಾನ ಕನ್ನಡ ।
ನಮ್ಮ ಬಿಂಬ ಕನ್ನಡ–ನಮ್ಮ ಪ್ರತಿಬಿಂಬ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ಸಾಗರ ಕನ್ನಡ–ನಮ್ಮ ಮಹಾಸಾಗರ ಕನ್ನಡ ।
ನಮ್ಮ ತಳ ಕನ್ನಡ–ನಮ್ಮ ಪಾತಾಳ ಕನ್ನಡ ।
ನಮ್ಮ ನಕ್ಷತ್ರ ಕನ್ನಡ–ನಮ್ಮ ಗಗನ ಕನ್ನಡ ।
ನಮ್ಮ ಭಾಗ್ಯ ಕನ್ನಡ –ನಮ್ಮ ಸೌಭಾಗ್ಯ ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ಚೆನ್ನ ಕನ್ನಡ–ನಮ್ಮ ಚೆಲುವ ಕನ್ನಡ ।
ನಮ್ಮ ಸಂಸ್ಕೃತಿ ಕನ್ನಡ–ನಮ್ಮ ಸುಸಂಸ್ಕೃತಿ ಕನ್ನಡ ।
ನಮ್ಮ ಚಂದನ ಕನ್ನಡ–ನಮ್ಮ ಶ್ರೀಗಂಧ ಕನ್ನಡ ।
ನಮ್ಮ ಶುದ್ಧ ಕನ್ನಡ–ನಮ್ಮ ಮುದ್ದು ಕನ್ನಡ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ನಮ್ಮ ಪಂಪ ರನ್ನರ ಕನ್ನಡ–ಕುವೆಂಪು ಕನ್ನಡ ।
ನಮ್ಮ ಶುದ್ಧ ಕನ್ನಡ–ಬದಲಾಗುತ್ತಿರುವ ಭೂಗೋಳ (ಗ್ಲೋಬಲ್) ಕನ್ನಡ ।
ನಮ್ಮ ಸಮರ ಕನ್ನಡ–ನಮ್ಮ ಅಮರ ಕನ್ನಡ ।
ಉಳಿಸು ನಮ್ಮ ಕನ್ನಡವ–ಮೆರೆಸು ನಮ್ಮ ಕನ್ನಡವ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥
ಮರೆಯದಿರ ಕನ್ನಡ ನೆಲವ–ಕನ್ನಡ ಜನವ ।
ಮರೆಯದಿರ ಕರ್ನಾಟಕ ಮಾತೆಯ–ಕನ್ನಡ ಜನನಿಯ ।
ಜೊತೆಗೆ ಉಳಿಸು–ಭಾರತ ಮಾತೆಯ, ಜಗತ್ ಜನನಿಯ ॥
ಆರಾಧಿಸು ಕನ್ನಡ ಮಾತೆಯ–ಭೂಮಾತೆಯ ।
ಆದರಿಸು, ಸನ್ಮಾನಿಸು, ಅನುಭವಿಸು, ಕನ್ನಡ ಭಾಷೆಯ ।
ಅಂದ ಮಾತ್ರವೇ ಉಳಿಯುವುದು ನಮ್ಮ ಕನ್ನಡತೆ, ಕನ್ನಡ ಜನತೆ ।
ನಮ್ಮ ಕನ್ನಡ–ನಿಮ್ಮ ಕನ್ನಡ, ನಮ್ಮೆಲ್ಲರ ಕನ್ನಡ ॥

ನಿ.ಅ. ಮಾಧವ

## ದೆಹಲಿಗೆ ಬಂದಾಗ

ಬೆಂಗಳೂರಿನ ನಿಯಂತ್ರಿತ ಹವಾಮಾನದಿಂದ ಹೊರಟು
ಏರ್ ಕಂಡೀಷನ್ಡ್ ಡಬ್ಬಿಯಲ್ಲಿ ಆರಾಮವಾಗಿ ಕೂತು
ಮೆಟ್ಟಿದ ಕೂಡಲೇ ರಾಜಧಾನಿಯ ಹೊಸಲು
ರಾಚುತ್ತದೆ ಮುಖಕ್ಕೆ ಜುಲೈ ಬಿಸಿಲು.

ನಜ್ಜುಗುಜ್ಜಾದ ಆಟೋರಿಕ್ಷಾ ಏರಿ
ಕುಲುಕುತ್ತಾ ಹೊರಟರೆ ನಜ್ಜುಗುಜ್ಜು ದೇಹ.
ಬೆಂಗಳೂರಿನ ರೇರ್ ಎಂಜಿನ್ ರಿಕ್ಷಾ
ನೆನಸಿಕೊಂಡರೆ ಒಮ್ಮೆಲೇ ಕೆಟ್ಟ ದಾಹ.

ದಾಹವೆಂದ ಕೂಡಲೇ ಕಣ್ಣಿಗೆ ಕಂಡು
ರಾಶಿರಾಶಿ ಎಳನೀರಿನ ಬುಡ್ಡೆ
ಕೆಳಗಿಳಿದು ತಲೆ ಕಡಿಸಿ ಹೀರಿಬಿಡಲೇನಿದು
ಬೆಂಗಳೂರೆಂದು ಬಗೆದೆಯಾ ಪೆದ್ದೆ!

ಬೆಂಗಳೂರೇ ! ತಂಗಾಳಿಯ ತವರೇ!
ಆಹಾ ನವದೆಹಲಿಯೇ! ಮೈಕಿತ್ತುವ ಬೆವರೇ !

ಸಿ.ಪಿ. ರವಿಕುಮಾರ್
ಬೆಂಗಳೂರು




# Saujanya Printing Press

**A HOUSE OF QUALITY PRINTING**

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : saujanyapp2010@gmail.com/ hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

**GENPACT**

## A SKY-BOUND OPPORTUNITY
for those who have gained a command over spoken Kannada.



Genpact, a global leader in business process management builds rewarding careers for every individual by investing in their personal and professional development. We believe in creating a work environment based on the highest standards of excellence and integrity that evokes deep feelings of pride and belonging.

An extraordinary career awaits you at Genpact in a day shift, voice based inbound insurance renewal process.


**Eligibility Criteria**
- Graduates /Fresher's with command over spoken Kannada
- Basic Computer Skills
- Basic understanding of written & spoken English

**Walk-In**
Walk in between 10:00 AM to 3:00 PM, Monday to Friday with your detailed resume & two passport size photographs at

Genpact: Delhi IT Park, 8th Floor, Shastri Park, Delhi – 110092, Near Shastri Park Metro Station

Contact: Aripta Sahni/Harsh Dhawan (9873184171)

Delhi Karnataka Sangha's Abhimatha Monthly,
July -2011, Price Rs.1/- RNI Regn. No. 53405/91, DL-SW-15/4016/10-11-12
Printout Date : July 8th / 9th, Postal Date :10th / 11th, Total Pages-20




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 41611143,